ಸೆಪ್ಟೆಂಬರ್ 2019

₹ 15/-

# ಯುಗರಶ್ಮಿ

## ತ್ರೈಮಾಸಿಕ



- ಇಸ್ಲಾಮ್ ಶಾಂತಿಯ ಧರ್ಮ
- ಇಸ್ಲಾಮಿನ ಧಾರ್ಮಿಕ ಸಹಿಷ್ಣುತೆ ಮತ್ತು ಸ್ವಾತಂತ್ರ್ಯ
- ಮನುಕುಲದ ರಕ್ಷಣೆಗಾಗಿ ದೇವನೊಂದಿಗೆ ಸಂಬಂಧ ಮತ್ತು ಪ್ರೀತಿ ಅವಶ್ಯ
- ಹಜ್ಜ್ ಕರ್ಮದ ಮಹತ್ವ
- ಮುಸ್ಲಿಮ್ ಮಹಿಳೆಯರು – ತಪ್ಪು ಗ್ರಹಿಕೆಯ ನಿವಾರಣೆ
- ಹಝ್ರತ್ ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು

"ಯಾವನಾದರೂ ಒಂದು ಕೆಡುಕನ್ನು ಮಾಡಿ ಅಥವಾ ತನ್ನ ಆತ್ಮದೊಡನೆ ದ್ರೋಹವನ್ನೆಸಗಿ ಅಲ್ಲಾಹನೊಡನೆ ಪಾಪಮುಕ್ತಿಗಾಗಿ ಪ್ರಾರ್ಥಿಸಿದರೆ, ಅವನು ಅಲ್ಲಾಹನನ್ನು ಅತ್ಯಂತ ಕ್ಷಮಿಸುವವನಾಗಿಯೂ ಕಾರುಣ್ಯ ನಿಧಿಯಾಗಿಯೂ ಕಾಣುವನು." (ಪವಿತ್ರ ಖುರ್‌ಆನ್ 4 : 111)

ವಿಷಯ ಸೂಚಿಕೆ


| ವಿಷಯ | ಪುಟ |
|---|---|
| ❖ ದೈವಿಕ ಸಂಬಂಧ ಮತ್ತು ಪಾಪವಿಮುಕ್ತಿ | 1 |
| ❖ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು | 2 |
| ❖ ಇಸ್ಲಾಮ್ ಶಾಂತಿಯ ಧರ್ಮ | 3 |
| ❖ ಇಸ್ಲಾಮಿನ ಧಾರ್ಮಿಕ ಸಹಿಷ್ಣುತೆ ಮತ್ತು ಸ್ವಾತಂತ್ರ್ಯ | 8 |
| ❖ ಮನುಕುಲದ ರಕ್ಷಣೆಗಾಗಿ ದೇವನೊಂದಿಗೆ ಸಂಬಂಧ ಮತ್ತು ಪ್ರೀತಿ ಅವಶ್ಯ | 11 |
| ❖ ಹಜ್ಜ್ ಕರ್ಮದ ಮಹತ್ವ | 15 |
| ❖ ಮುಸ್ಲಿಮ್ ಮಹಿಳೆಯರು ದಬ್ಬಾಳಿಕೆಗೆ ಗುರಿಯಾಗುತ್ತಾರೆ ಎಂಬ ತಪ್ಪು ಗ್ರಹಿಕೆಯ ನಿವಾರಣೆ | 17 |
| ❖ ಹಝ್ರತ್ ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು–6 | 18 |
| ❖ ಅಹ್ಮದಿಯಾ ಜಮಾಅತಿನ ಪ್ರಗತಿ | 22 |
| ❖ ಯು.ಕೆ. ಜಲ್ಸಾಸಾಲಾನ – ಗಣ್ಯ ಅತಿಥಿಗಳ ಅಭಿಪ್ರಾಯಗಳು | 24 |
| ❖ ವಾರ್ತೆಗಳು : | 27 |
| * 6,68,500 ಮಂದಿ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಸೇರ್ಪಡೆ | |
| * ಮಡಿಕೇರಿ ಲಜ್‌ನ ಇಮಾಇಲ್ಲಾಹ್ ವತಿಯಿಂದ ರೇಡಿಯೋ ಕಾರ್ಯಕ್ರಮ | |
| * ಮಂಗಳೂರು: ಮಜ್ಲಿಸ್ ಅನ್ಸಾರುಲ್ಲಾಹ್ ವಾರ್ಷಿಕ ಇಜ್ತಿಮಾ | |
| * ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಅತ್ಫಾಲುಲ್ ಅಹ್ಮದಿಯಾ ವಾರ್ಷಿಕ ಇಜ್ತಿಮಾ | |
| ❖ ನಿಧನ ವಾರ್ತೆಗಳು : | 29 |
| * ಜನಾಬ್ ಮುಜೀಬ್ ರಹ್ಮಾನ್ ಸಾಹಿಬ್ * ಜನಾಬ್ ಎಂ.ಎ. ಮುಹಮ್ಮದ್ ಸಾಹಿಬ್ | |
| * ಝೊಹರಾಬಿ ಸಾಹಿಬ | |
| ❖ ಓದಿದ್ದು : | 30 |
| * ಭಾರತದಲ್ಲಿ ಮುಸ್ಲಿಮರನ್ನು ನಡೆಸಿಕೊಳ್ಳುವ ರೀತಿ ಆತಂಕಕಾರಿ: ಅಮೆರಿಕ ಸಂಸತ್ತು ಕಳವಳ | |
| * ಗೋಮಾಂಸ ಸೇವನೆಯನ್ನು ತಡೆಯುವುದು ಹಿಂಸೆಯ ಇನ್ನೊಂದು ರೂಪ ಎಂದಿದ್ದ ಗಾಂಧೀಜಿ: ಪುಸ್ತಕ | |
| * ಕ್ಷಮಾಪನೆ ಕೋರಿದ ಝಾಕಿರ್ ನಾಯ್ಕ್ * ಚೀನ, ಪಾಕ್‌ಗೆ ವಿಶ್ವಸಂಸ್ಥೆ ತಪರಾಕಿ | |
| * ಮಹಿಳಾ ಸಮಾನತೆಯ ದಿನ * ಮಹಿಳಾ ಗುಲಾಮರ ಮೇಲೆ ದೌರ್ಜನ್ಯ | |
| * ಉದ್ಘಾಟನೆಯಾದ 22 ಗಂಟೆಗಳಲ್ಲಿ ಕುಸಿದ ಕಾಲುವೆ | |
| ❖ ಸ್ವಾಸ್ಥ್ಯ : | 32 |
| * ತೈಲಗಳ ಮಾತೃಸ್ವರೂಪಿ – ತೆಂಗಿನ ಎಣ್ಣೆ * ಬಿಸಿ ಚಹಾ ಸೇವನೆಯಿಂದ ಅನ್ನನಾಳ ಕ್ಯಾನ್ಸರ್ | |
| ❖ ಸಂಪಾದಕರಿಗೆ ಪತ್ರ | 33 |


# ಯುಗರಶ್ಮಿ

ಮುಖಪುಟ ಚಿತ್ರ : ಯು.ಎಸ್.ಎ. – ವರ್ಜೀನಿಯಾದಲ್ಲಿ 3–11–2018ರಂದು ಉದ್ಘಾಟಿಸಲ್ಪಟ್ಟ ಮಸ್‌ರೂರ್ ಮಸ್ಜಿದ್


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575 001.

ಸಂಪರ್ಕಿಸಿರಿ : 9900410789

بِسْمِ اللّٰهِ الرَّحْمٰنِ الرَّحِيْمِ
نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

ಸೆಪ್ಟೆಂಬರ್ 2019

| | | | |
|---|---|---|---|
| ಆರಂಭ : 1975 | ಸಂಪುಟ : 36 | ತಬೂಕ್ : 1398 ಹಿಜರೀ ಶಮ್ಸೀ | ಸಂಚಿಕೆ : 1 |

## ದೈವಿಕ ಸಂಬಂಧ ಮತ್ತು ಪಾಪವಿಮುಕ್ತಿ

"ಪಾಪವು ಯಥಾರ್ಥದಲ್ಲಿ ಒಂದು ವಿಷವಾಗಿದೆ. ಮನುಷ್ಯನಿಗೆ ದೇವನೊಡನಿರುವ ಅನುಸರಣೆ ಮತ್ತು ದೇವನೊಡನಿರುವ ಆವೇಶಪೂರ್ಣವಾದ ದೇವಸ್ಮರಣೆ ನಾಸ್ತಿಯಾಗಿ ಭಾಗ್ಯಹೀನನಾಗುವಾಗ ಅದು ಉಂಟಾಗುತ್ತದೆ. ಒಂದು ವೃಕ್ಷ ಭೂಮಿಯಿಂದ ಬೇರು ಸಹಿತ ಕಿತ್ತು ಹೋದರೆ ಅದಕ್ಕೆ ಭೂಮಿಯಿಂದಿರುವ ಜಲವನ್ನು ಸೆಳೆದುಕೊಳ್ಳಲು ಸಾಧ್ಯವಾಗದು. ಅದು ದಿನಂಪ್ರತಿ ಬಾಡಿ ಒಣಗಿ ಹೋಗುವುದು. ಯಾವ ಹೃದಯ ದೇವನೊಡನಿರುವ ಪ್ರೀತಿಯಿಂದ ದೂರವಾಗುವುದೋ ಅವನ ಸ್ಥಿತಿಯೂ ಇದೇ ಆಗಿದೆ. ಸಂಕ್ಷಿಪ್ತವಾಗಿ, ಒಣಗಿದ ವೃಕ್ಷದಂತೆಯೇ ಪಾಪವು ಒಬ್ಬನ ಹೃದಯವನ್ನು ಅಧೀನ ಪಡಿಸುತ್ತದೆ."

(ಸಿರಾಜುದ್ದೀನ್ ಈಸಾಯಿ ಕೆ ಚಾರ್ ಸವಾಲೋಂ ಕಾ ಜವಾಬ್ – ಪುಟ 2)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**
ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

♦ ಜಮಾಅತಾಗಿಯುಳ್ಳ ನಮಾಝ್ ಮನೆಯಲ್ಲಿ ಮತ್ತು ಅಂಗಡಿಯಲ್ಲಿ ಮಾಡುವ ನಮಾಝ್‌ಗಿಂತ ಇಪ್ಪತ್ತರಷ್ಟು ಪದವಿಗರ್ಹವಾಗಿದೆ. (ಮುಸ್ಲಿಂ)

♦ ಸತ್ಕರ್ಮಗಳನ್ನೂ ದುಷ್ಕರ್ಮಗಳನ್ನೂ ಬೇರ್ಪಡಿಸಿ ಅಲ್ಲಾಹನು ಸ್ಪಷ್ಟಪಡಿಸಿದ್ದಾನೆ: ಯಾರಾದರೂ ಒಂದು ಪುಣ್ಯ ಕರ್ಮ ಮಾಡಲು ಬಯಸಿ ಅದನ್ನು ಮಾಡಲಾಗದಿದ್ದರೆ ಒಂದು ಪೂರ್ಣವಾದ ಹಸನಾತ್ (ಒಳಿತು) ಮತ್ತು ಅದನ್ನು ಮಾಡಲು ಸಾಧ್ಯವಾದರೆ ಹತ್ತರಿಂದ ಏಳುನೂರು ಮತ್ತು ಅದಕ್ಕಿಂತ ಹೆಚ್ಚು ಹಸನಾತುಗಳನ್ನು ಅಲ್ಲಾಹು ನಿಶ್ಚಯಿಸುವನು. ಒಬ್ಬನು ಒಂದು ಕೆಟ್ಟ ಕೆಲಸವನ್ನು ಮಾಡಲು ಉದ್ದೇಶಿಸಿ ಮಾಡದಿದ್ದರೆ ಅದು ಒಂದು ಹಸನಾತಾಗುವುದು. ಬದಲು, ಅವನು ದುಷ್ಕೃತ್ಯ ಮಾಡಿದರೆ ಒಂದೇ ಒಂದು ಪಾಪವಾಗಿ ಅಲ್ಲಾಹನು ಅದನ್ನು ದಾಖಲಿಸುವನು. (ಬುಖಾರಿ, ಮುಸ್ಲಿಂ)

♦ ಅಲ್ಲಾಹನಾಣೆ, ಪ್ರತಿದಿನ ನಾನು ಎಪ್ಪತ್ತು ಸಲ ಅಲ್ಲಾಹನೆಡೆಗೆ ತಿರುಗಿ ಪಾಪ ವಿಮುಕ್ತಿಗೋಸ್ಕರ ಬೇಡುತ್ತೇನೆ. (ಬುಖಾರಿ)

♦ ನೀವು ಸನ್ಮಾರ್ಗವನ್ನು ಕೈಗೊಂಡು ಅದರಲ್ಲಿ ಸ್ಥಿರವಾಗಿ ನಿಲ್ಲಿರಿ. ತಿಳಿದುಕೊಳ್ಳಿರಿ, ಯಾರು ಕೂಡ ತನ್ನ ಸದ್ವರ್ತನೆಯಿಂದ ಮಾತ್ರ ರಕ್ಷಿಸಲ್ಪಡಲಿಕ್ಕಿಲ್ಲ...... ಅಲ್ಲಾಹನ ಔದಾರ್ಯ ಮತ್ತು ಅನುಗ್ರಹ ನನ್ನನ್ನು ಆವರಿಸಿಲ್ಲವಾಗಿದ್ದರೆ ನಾನು ಕೂಡ ರಕ್ಷಿಸಲ್ಪಡುತ್ತಿರಲಿಲ್ಲ. (ಮುಸ್ಲಿಂ)

♦ ನೀನು ಧಾರಾಳವಾಗಿ ಸುಜೂದ್ (ಸಾಷ್ಟಾಂಗ ಪ್ರಣಾಮ) ಮಾಡಬೇಕು. ಏಕೆಂದರೆ ನೀನು ಅಲ್ಲಾಹನಿಗೆ ಮಾಡುವ ಒಂದು ಸುಜೂದಿನ ಬದಲಾಗಿ, ಅಲ್ಲಾಹು ನಿನ್ನನ್ನು ಒಂದು ಮೆಟ್ಟಲು ಎತ್ತರಿಸುವನು; ಅದರಿಂದಲೇ ಒಂದು ಪಾಪ ನಿನಗೆ ಕ್ಷಮಿಸಲ್ಪಡುವುದು. (ಮುಸ್ಲಿಂ)

♦ ತನಗೆ ಪ್ರಿಯವಾದುದನ್ನು ತನ್ನ ಸಹೋದರನಿಗೂ ಬಯಸದಿರುವ ತನಕ ನಿಮ್ಮ ಪೈಕಿ ಯಾರೂ ಸತ್ಯವಿಶ್ವಾಸಿಯಾಗಲಾರ. (ಬುಖಾರಿ, ಮುಸ್ಲಿಂ)

♦ ಜನರಿಗೆ ಇಮಾಮಾಗಿ ನಮಾಝ್ ಮಾಡುವವನು ಲಘೂಕರಿಸಲಿ. ಅವರ ಪೈಕಿ ಬಲಹೀನನೂ ರೋಗಿಯೂ ವಯೋವೃದ್ಧನೂ ಇರಬಹುದು. ಏಕಾಂಗಿಯಾಗಿ ನಮಾಝ್ ಮಾಡುವಾಗ ಉದ್ದೇಶಿಸಿದಷ್ಟು ದೀರ್ಘಮಾಡಲಿ. (ಬುಖಾರಿ, ಮುಸ್ಲಿಂ)

♦ ಪರಸ್ಪರ ಅಸೂಯೆ ಪಡುವವರು, ಬೆಲೆಯೇರಿಸಿ ಹೇಳುವವರು, ವಿದ್ವೇಷಿಗಳು, ಹೊಣೆಗಾರಿಕೆಗಳಿಂದ ನುಣುಚಿಕೊಳ್ಳುವವರು, ವ್ಯಾಪಾರಕ್ಕೆ ಎದುರಾಗಿ ವ್ಯಾಪಾರ ಮಾಡುವವರು ಆಗಬಾರದು. ನೀವೆಲ್ಲರೂ ಅಲ್ಲಾಹನ ದಾಸರೂ ಪರಸ್ಪರ ಸಾಹೋದರ್ಯವುಳ್ಳವರೂ ಆಗಿರಿ. (ಮುಸ್ಲಿಂ)

♦ ಒಬ್ಬ ಮುಸ್ಲಿಮನಿಗೆ ಮತ್ತೊಬ್ಬ ಮುಸ್ಲಿಮನೊಡನೆ ಆರು ಕರ್ತವ್ಯಗಳಿವೆ: 1. ಸಲಾಂ ಹೇಳುವುದು. 2. ಆಮಂತ್ರಣವನ್ನು ಸ್ವೀಕರಿಸುವುದು. 3. ಅವಶ್ಯಪಟ್ಟರೆ ಉಪದೇಶಿಸುವುದು. 4. ಸೀನಿದರೆ ಅವನಿಗೋಸ್ಕರ ಪ್ರಾರ್ಥಿಸುವುದು. 5. ರೋಗಬಾಧಿತನಾದರೆ ಸಂದರ್ಶಿಸುವುದು. 6. ಮೃತಪಟ್ಟರೆ ಜನಾಝವನ್ನು ಅನುಗಮಿಸುವುದು. (ಮುಸ್ಲಿಂ)

♦ ಹೇ ಅಲ್ಲಾಹ್, ಅನಾಥರು, ಮಹಿಳೆಯರು ಎಂಬೀ ಅಬಲರ ಹಕ್ಕುಗಳನ್ನು ಅವಗಣಿಸುವವರನ್ನು ನಾನು ಪಾಪಿಗಳಾಗಿ ಕಾಣುತ್ತೇನೆ. (ನಸಾಈ)

# ಇಸ್ಲಾಮ್ ಶಾಂತಿಯ ಧರ್ಮ



*ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋಚ್ಚ ನೇತಾರರೂ ಐದನೆಯ ಖಲೀಫರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಬೆನಿನ್ ದೇಶದ ಯುನಿವರ್ಸಿಟಿಯಲ್ಲಿ ಮಾಡಿದ ಭಾಷಣ.*

ಪ್ರಿಯ ವಿದ್ಯಾರ್ಥಿಗಳೇ ಮತ್ತು ಯುನಿವರ್ಸಿಟಿಯ ಉದ್ಯೋಗಿಗಳೇ ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹ್.

ಇಸ್ಲಾಮ್ ಶಾಂತಿಯ ಧರ್ಮವಾಗಿದೆ ಎಂಬ ವಿಷಯವನ್ನು ವಿಶದೀಕರಿಸಲು ನನ್ನೊಂದಿಗೆ ಅಪೇಕ್ಷಿಸಲಾಗಿದೆ. ಭಾಷಣದ ಸಮಯ ಸೀಮಿತವಾಗಿರುವುದರಿಂದ ಈ ವಿಷಯದ ಬಗ್ಗೆ ಸಂಕ್ಷಿಪ್ತವಾಗಿ ಮಾತ್ರ ವಿವರಿಸಲು ಸಾಧ್ಯ.

ಲೋಕದಲ್ಲಿ ಯಹೂದಿ, ಕ್ರೈಸ್ತ, ಹಿಂದೂ, ಬೌದ್ಧ ಧರ್ಮ ಮೊದಲಾದವುಗಳಿರುವಾಗ ಇಸ್ಲಾಮ್ ಧರ್ಮದ ಬಗ್ಗೆ ಮಾತ್ರ ಅದು ಶಾಂತಿಯ ಧರ್ಮವಾಗಿದೆಯೋ ಎಂಬ ಪ್ರಶ್ನೆಯನ್ನು ಅದರ ವಿಲಕ್ಷಣತೆಯ ಕಾರಣದಿಂದ ಕೇಳಲಾಗುತ್ತಿದೆಯೋ ಎಂಬ ಯೋಚನೆ ಸ್ಫುರಿಸುತ್ತದೆ.

ಇದಕ್ಕೆ ಕಾರಣವೇನೆಂದರೆ, ಇಸ್ಲಾಮ್ ಧರ್ಮ ಸ್ಥಾಪಿತವಾಗಿ ಕೆಲವು ವರ್ಷಗಳ ನಂತರ ಇಸ್ಲಾಮ್ ವಿರೋಧಿ ಶಕ್ತಿಗಳು ಇಸ್ಲಾಮ್, ಉಗ್ರಗಾಮಿ ಮತ್ತು ಹಿಂಸೆಯನ್ನು ಪ್ರತಿಪಾದಿಸುವ ಧರ್ಮವೆಂದೂ ಅದು ಖಡ್ಗ ಬಲದಿಂದ ಬಲಾತ್ಕಾರವಾಗಿ ಇಸ್ಲಾಮನ್ನು ನಂಬುವಂತೆ ಜನರನ್ನು ಬಲವಂತಪಡಿಸುತ್ತದೆ ಎಂದೂ ಪ್ರಚಾರ ಮಾಡಲು ತೊಡಗಿದ್ದವು. ಇದು ಸುಳ್ಳು ಪ್ರಚಾರವಾಗಿದೆ. ಮಕ್ಕದಲ್ಲಿದ್ದ ಮುಸ್ಲಿಮರು ಮಕ್ಕದ ಜನರಿಂದ ಹಿಂಸಾಚಾರಗಳಿಗೆ ಗುರಿಯಾಗಿ ಹಿಂಸೆಯನ್ನು ಮೌನವಾಗಿ ಅನುಭವಿಸುತ್ತಿದ್ದರು. ಕೊನೆಗೆ ಅವರು ಮದೀನಕ್ಕೆ ವಲಸೆ ಹೋದರು. ಆದರೆ ಮಕ್ಕದ ಅವಿಶ್ವಾಸಿಗಳು ಅವರನ್ನು ಅಲ್ಲಿಯೂ ಬೆನ್ನಟ್ಟಿ ಯುದ್ಧವನ್ನು ಅವರ ಮೇಲೆ ಹೇರಿದರು. ಆ ಬಗ್ಗೆ ಮುಂದೆ ಪ್ರಸ್ತಾಪಿಸುವೆನು. ಇಸ್ಲಾಮ್ ಧರ್ಮವು ಖಡ್ಗ ಬಲದಿಂದ ಹಬ್ಬಿತು ಎಂದು ಪ್ರಚಾರ ಮಾಡುವವರ ವಿರುದ್ಧವಿರುವ ಒಂದು ಸಾಕ್ಷ್ಯವೇನೆಂದರೆ, ಮಕ್ಕದ ಜನರು ವಿವಿಧ ರೀತಿಯ ಆಕ್ಷೇಪಗಳನ್ನು ಇಸ್ಲಾಮ್ ವಿರುದ್ಧ ಮಾಡಿದ್ದರೂ ಮುಸ್ಲಿಮರು ಅವಿಶ್ವಾಸಿಗಳನ್ನು ಖಡ್ಗ ಬಲದಿಂದ ಧರ್ಮ ಪರಿವರ್ತನೆ ಮಾಡಲು ಬಲಾತ್ಕಾರ ಮಾಡಿದ್ದರೆಂದು ಎಂದೂ ಅವಿಶ್ವಾಸಿಗಳು ಆಕ್ಷೇಪಿಸಿರಲಿಲ್ಲ ಎಂಬುದಕ್ಕೆ ಚರಿತ್ರೆಯು ಸಾಕ್ಷಿಯಾಗಿದೆ.

ಎರಡನೆಯದಾಗಿ, ಇಸ್ಲಾಮಿಗೆ ಕೆಟ್ಟ ಹೆಸರು ನೀಡಲ್ಪಡಲು ಕಾರಣವೇನೆಂದರೆ, ಪ್ರಜ್ಞಾಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ಕೆಲವು ಮುಸ್ಲಿಮ್ ಗುಂಪುಗಳು ಮತ್ತು ಸಂಘಟನೆಗಳು ಇಸ್ಲಾಮ್ ಧರ್ಮಕ್ಕೆ ನೀಡಿದ ಕುರೂಪ, ಭೀಭತ್ಸ, ಉಗ್ರಗಾಮಿ ರೂಪವಾಗಿದೆ. ಈ ಗುಂಪುಗಳಿಗೆ ಮತ್ತು ಸಂಘಟನೆಗಳಿಗೆ ದೌರ್ಭಾಗ್ಯವಶಾತ್ ಸ್ವಾರ್ಥ ಹಿತಾಸಕ್ತಿಗಳು ಮಾತ್ರ ಇವೆ.

ಒಂದು ಧರ್ಮದ ಸೌಂದರ್ಯವನ್ನು ಮತ್ತು ಅದರ ನ್ಯೂನತೆಗಳನ್ನು ವೀಕ್ಷಿಸಲು ಆ ಧರ್ಮದ ಮೂಲ ಪವಿತ್ರ ಗ್ರಂಥದ ತತ್ವೋಪದೇಶಗಳನ್ನು ಮೂಲಾಧಾರವಾಗಿಟ್ಟುಕೊಂಡು ಅಧ್ಯಯನ ಮಾಡಬೇಕಾದುದು ನ್ಯಾಯಬದ್ಧವಾದ ವಿಧಾನವಾಗಿದೆ. ಹೀಗೆ ಮಾಡುವುದಿಲ್ಲವಾದರೆ ಪ್ರತಿಯೊಬ್ಬನು ಪ್ರತಿಯೊಂದು ಅನ್ಯಧರ್ಮವನ್ನು ಮನಬಂದಂತೆ ಟೀಕಿಸುವನು. ಉದಾಹರಣೆಗೆ, ಕ್ರೈಸ್ತ ಧರ್ಮದ ತತ್ವ ಪವಿತ್ರ ಬೈಬಲ್ ಪ್ರಕಾರ ಹೀಗಿದೆ:

"ಆದರೆ ನಾನು ನಿಮಗೆ ಹೇಳುವುದೇನೆಂದರೆ – ಕೆಡುಕನನ್ನು ಎದುರಿಸಬೇಡ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನು ಒಡ್ಡು." (ಮತ್ತಾಯನ ಸುವಾರ್ತೆ 5:39).

ಆದರೆ, ಬೋಸ್ನಿಯಾ, ಇರಾಖ್ ಮತ್ತು ಅನ್ಯದೇಶಗಳ ಮೇಲೆ ಅಮೇರಿಕ ಮತ್ತು ಪಾಶ್ಚಿಮಾತ್ಯ ದೇಶಗಳು ದುರಾಕ್ರಮಣಗಳನ್ನು ಮಾಡುತ್ತಿವೆ. ಕ್ರೈಸ್ತ ದೇಶಗಳ ವರ್ತನೆಯನ್ನು ನೋಡಿ ಕ್ರೈಸ್ತ ಧರ್ಮದ ಉಪದೇಶ, ಒಬ್ಬನು ನಿಮ್ಮೆದುರಿಗೆ ತಲೆಎತ್ತಿ ನಿಂತರೆ ಅವನನ್ನು ತುಳಿದು ಹಾಕಿ ಕೊಲ್ಲಬೇಕು ಎಂದಾಗಿದೆ ಎಂದು ಆಕ್ಷೇಪಿಸುವುದಾದರೆ ಅದು ಬಹಳ ದೊಡ್ಡ ಅನ್ಯಾಯವಾಗುವುದು. ಆದುದರಿಂದ ಇಸ್ಲಾಮಿನ ನೈಜ ಉಪದೇಶಗಳೇನೆಂದು ತಿಳಿದುಕೊಳ್ಳಲು ಪವಿತ್ರ ಖುರ್‌ಆನನ್ನು ಅಧ್ಯಯನ ಮಾಡಬೇಕು ಮತ್ತು ಅದು ನೀಡುವ ಉಪದೇಶವೇನೆಂದು ನೋಡಬೇಕು. ಪವಿತ್ರ ಖುರ್‌ಆನಿನ ಉಪದೇಶಗಳನ್ನು ಮರೆತುಬಿಟ್ಟ ಮುಸ್ಲಿಮರ ವರ್ತನೆಯನ್ನು ಆಧಾರವಾಗಿಟ್ಟುಕೊಳ್ಳಬಾರದು.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನಿಲುವೇನೆಂದರೆ, ಪವಿತ್ರ ಖುರ್‌ಆನ್ ತತ್ವಗಳು ಶಾಂತಿಯನ್ನು ಪ್ರೋತ್ಸಾಹಿಸುತ್ತವೆ.  ನಾವು ಇಸ್ಲಾಮಿನ ಸಂದೇಶವನ್ನು ಲೋಕದ ಪ್ರತಿಯೊಂದು ಮೂಲೆಗೂ ತಲಪಿಸಬೇಕಾಗಿದೆ. ಆದುದರಿಂದ ನಾನು ಪವಿತ್ರ ಖುರ್‌ಆನಿನ ತತ್ವಗಳನ್ನು ಮೊದಲು ವಿವರಿಸುವೆನು. ಅನಂತರ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಆ ತತ್ವಗಳನ್ನು ಅನುಷ್ಠಾನಕ್ಕೆ ಹೇಗೆ ತಂದರೆಂಬುದನ್ನು ಪ್ರಸ್ತಾಪಿಸುವೆನು. ಅವರಿಗೆ ಪವಿತ್ರ ಖುರ್‌ಆನಿನ ತತ್ವಗಳು ಅವತೀರ್ಣಗೊಂಡಿದ್ದುವು. ಅವರು ಎಂದಾದರೂ ಯಾವುದೇ ರೀತಿಯ ಕ್ರೌರ್ಯ, ಹಿಂಸಾಚಾರ ಅಥವಾ ಉಗ್ರಗಾಮಿ ಭಯೋತ್ಪಾದನೆಯನ್ನು ಬೆಂಬಲಿಸಿದ್ದರೇ? ಆ ಮೇಲೆ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆಗಳನ್ನು ಆಧಾರವಾಗಿಟ್ಟುಕೊಂಡು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರಾದ ಮಿರ್ಝಾ ಗುಲಾಮ್ ಅಹ್ಮದ್(ಅ) – ಅವರು ಖಾದಿಯಾನಿನ ನಿವಾಸಿಯೂ ತಾನು ವಾಗ್ದತ್ತ ಮಸೀಹ್ ಎಂದು ವಾದಿಸಿದವರೂ ಆಗಿದ್ದರು – ನೀಡಿದ ವಿಶದೀಕರಣಗಳನ್ನು ಪ್ರಸ್ತಾಪಿಸುವೆನು.

ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ: "ಯಾರಾದರೂ ಒಬ್ಬ ವ್ಯಕ್ತಿಯನ್ನು ಕೊಲೆಗೈದುದಕ್ಕಾಗಿ ಅಥವಾ ರಾಜ್ಯದಲ್ಲಿ ಕಲಹವನ್ನುಂಟುಮಾಡಿದುದಕ್ಕಾಗಿ ಹೊರತು, (ನಿರಪರಾಧಿಯಾದ) ಒಬ್ಬನನ್ನು ಯಾರಾದರೂ ಕೊಂದರೆ ಅವನು ಮನುಷ್ಯರೆಲ್ಲರನ್ನೂ ಕೊಂದಂತಾಗುತ್ತದೆ. (5:33).

ಪವಿತ್ರ ಖುರ್‌ಆನಿನ ಈ ವಚನಕ್ಕೆ ವ್ಯಾಖ್ಯಾನ ನೀಡುತ್ತಾ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಹೇಳುತ್ತಾರೆ: "ಒಬ್ಬ

ವ್ಯಕ್ತಿಯನ್ನು ಅನ್ಯಾಯದಿಂದ ಕೊಂದರೆ, ವಿದ್ರೋಹ ಮಾಡದ, ಶಾಂತಿಭಂಗವನ್ನುಂಟುಮಾಡದ, ದೇಶದಲ್ಲಿ ಕಲಹವನ್ನುಂಟುಮಾಡದ ಒಬ್ಬನನ್ನು ಕೊಂದರೆ ಹಾಗೆ ಕೊಲ್ಲುವವನು ಮನುಷ್ಯರನ್ನೆಲ್ಲ ಕೊಂದಂತೆ ಆಗುವುದು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ನಿಷ್ಕಾರಣವಾಗಿ ಒಬ್ಬನನ್ನು ಕೊಲ್ಲುವುದು ಮಾನವರನ್ನೆಲ್ಲ ಕೊಂದಂತೆ ಎಂದು ಸರ್ವಶಕ್ತನಾದ ಅಲ್ಲಾಹನು ಹೇಳಿರುವನು. ನಿಷ್ಕಾರಣವಾಗಿ ಒಬ್ಬನನ್ನು ಕೊಲ್ಲುವುದು ಎಂತಹ ಗುರುತರವಾದ ಪಾಪ ಕೃತ್ಯವೆಂದು ಈ ವಚನದಿಂದ ಸ್ಪಷ್ಟವಾಗುತ್ತದೆ.

(ಚಶ್ಮಯೆ ಮಅರಿಫತ್ ಪುಟ 23–24).

ಇಸ್ಲಾಮ್ ಧರ್ಮದ ಸುಂದರ ತತ್ವ ಇದಾಗಿದೆ: ಅನ್ಯಾಯದಿಂದ ಕೊಲ್ಲುವುದು ಮತ್ತು ನಿಷ್ಕಳಂಕನಾದವನ ರಕ್ತಪಾತ ಮಾಡುವುದು ಮಾನವರನ್ನೆಲ್ಲ ಹತ್ಯೆ ಮಾಡಿದುದಕ್ಕೆ ಸಮಾನವಾಗಿದೆ. ಎಂದರೆ, ಒಬ್ಬ ನಿರಪರಾಧಿಯ ಹತ್ಯೆ ಸಾವಿರಾರು ನಿಷ್ಕಳಂಕ ಜನರ ನರ ಹತ್ಯೆಗೆ ಸಮಾನವಾಗಿದೆ. ಸಾವಿರಾರು ಜನರನ್ನು ಹತ್ಯೆ ಮಾಡಿದವನಿಗೆ ಎಂತಹ ಘೋರ ಶಿಕ್ಷೆ ವಿಧಿಸಲ್ಪಡುವುದು ಎಂಬುದನ್ನು ಪ್ರತಿಯೊಬ್ಬನು ಊಹಿಸಬಹುದಾಗಿದೆ. ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ನೀಡಿದ ಸುಂದರ ಉಪದೇಶ ಮೇಲಿನಂತಿರುವಾಗ ಯಾರು ಈ ಉಪದೇಶದ ವಿರುದ್ಧ ವರ್ತಿಸುತ್ತಾನೋ ಅವನು ಇಸ್ಲಾಮಿನ ತತ್ವಗಳಿಗೆ ವಿರುದ್ಧವಾಗಿ ವರ್ತಿಸುತ್ತಾನೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರು ಈ ವಿಷಯದ ಬಗ್ಗೆ ಅಲ್ಲಾಹನ ಮಾರ್ಗದರ್ಶನ ಪ್ರಕಾರ ಚಿಂತಿಸಿ ಹೀಗೆ ಹೇಳುತ್ತಾರೆ:

"ಕರುಣೆಯನ್ನು ತ್ಯಜಿಸುವವನು ಧರ್ಮವನ್ನು ತ್ಯಜಿಸುವವನಾಗಿರುತ್ತಾನೆ. ಸಮರ್ಥನೀಯವಾದ ಕಾರಣವಿಲ್ಲದೆ ಒಬ್ಬನು ಇನ್ನೊಬ್ಬನನ್ನು ಕೊಂದರೆ ಅವನು ಲೋಕದಲ್ಲಿರುವ ಮಾನವರನ್ನೆಲ್ಲರನ್ನೂ ಕೊಂದವನಂತಾಗುತ್ತಾನೆ ಎಂದು ಪವಿತ್ರ ಖುರ್‌ಆನ್ ಉಪದೇಶಿಸುತ್ತಿದೆ. ನಾನು ಹೇಳುವುದೇನೆಂದರೆ, ಒಬ್ಬನು ತನ್ನ ಸಹೋದರನೊಂದಿಗೆ ಕಾರುಣ್ಯದಿಂದ ವರ್ತಿಸುವುದಿಲ್ಲವಾದರೆ ಅವನು ಲೋಕದ ಎಲ್ಲರೊಂದಿಗೂ ಕಾರುಣ್ಯ ರಹಿತನಾಗಿ ವರ್ತಿಸಿದವನ ಹಾಗಾಗುತ್ತಾನೆ."

(ಅಲ್‌ಹಕಮ್ ಸಂಪುಟ 9, ಸಂಚಿಕೆ 15, 30–4–1905).

ಪವಿತ್ರ ಖುರ್‌ಆನಿನ, ಮೇಲೆ ಉಲ್ಲೇಖಿಸಿದ ವಚನದ ಬಗ್ಗೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಆಸಕ್ತಿದಾಯಕ ನಿಷ್ಕರ್ಷ ಮಾಡಿದ್ದಾರೆ. ಇಸ್ಲಾಮ್ ತೀವ್ರವಾದಿ ಧರ್ಮವೆಂದು ಯೋಚಿಸುವವರು ತಪ್ಪು ಗ್ರಹಿಕೆಗೆ ಈಡಾಗಿದ್ದಾರೆ. ನೀವು ನಿಮ್ಮ ಸಹಜೀವಿಯೊಂದಿಗೆ ಕರುಣೆಯಿಂದ ವರ್ತಿಸುವುದಿಲ್ಲವಾದರೆ ನೀವು ಲೋಕದಿಂದ ಶಾಂತಿಯನ್ನೂ ಸೌಹಾರ್ದವನ್ನೂ ನಾಶ ಮಾಡುವವರಾಗುತ್ತೀರಿ ಎಂದು ಇಸ್ಲಾಂ ಹೇಳುತ್ತದೆ. ಹತ್ಯೆ ಮಾಡುವ ವಿಷಯ ಬಿಟ್ಟುಬಿಡಿರಿ; ನೀವು ಲೋಕದಲ್ಲಿರುವ ಪ್ರತಿಯೊಬ್ಬನೊಂದಿಗೆ ಕರುಣೆಯಿಂದ ವರ್ತಿಸಬೇಕು ಮತ್ತು ಇಸ್ಲಾಮಿನ ಶಾಂತಿ ಸಂದೇಶವನ್ನು ಲೋಕದಾದ್ಯಂತ ಹರಡಬೇಕು.

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಕರುಣೆಯಿಂದ ಜನರೊಂದಿಗೆ ವರ್ತಿಸಿದ ಬಗ್ಗೆ ಅಸಂಖ್ಯಾತ ಉದಾಹರಣೆಗಳಿವೆ. ಅವುಗಳಲ್ಲಿ ಕೆಲವನ್ನು ಸಂಕ್ಷಿಪ್ತವಾಗಿ ವಿವರಿಸುವೆನು. ಅವರಿಗೆ ತನ್ನ ಜನರ ಬಗ್ಗೆ ಇದ್ದ ಕಾಳಜಿಯ ಬಗ್ಗೆ ಅವುಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ.

ಒಬ್ಬನು ಇನ್ನೊಬ್ಬ ಅಥವಾ ಇನ್ನೊಬ್ಬಳ ಬಗ್ಗೆ ಕರುಣೆಯುಳ್ಳವನಾಗಿ ಅವರ ಏಳಿಗೆಯನ್ನು ಆಶಿಸುವನಾದರೆ ಅವರಿಗೋಸ್ಕರ ತನಗೆ ಸಾಧ್ಯವಿರುವಷ್ಟು ಪ್ರಯತ್ನ ಮಾಡುವನು. ಹಝ್ರತ್ ಪೈಗಂಬರರು(ಸ) ಎಷ್ಟು ಕರುಣೆದೋರುವವರೂ ತನ್ನ ಜನರ ಬಗ್ಗೆ ಕಾಳಜಿ ಹೊಂದಿದವರೂ ಆಗಿದ್ದರೆಂದರೆ ಆ ಜನರು ಅಸಂಖ್ಯಾತ ದೇವರುಗಳನ್ನು ನಂಬುವವರಾಗಿದ್ದರೂ ಅವರಿಗೋಸ್ಕರ ಪ್ರಾರ್ಥಿಸುತ್ತಿದ್ದರು. ಏಕದೇವನಿಗೆ ಸಹಭಾಗಿಗಳನ್ನು ಕಲ್ಪಿಸುವವರನ್ನು ತೀವ್ರವಾಗಿ ಶಿಕ್ಷಿಸುವುದಾಗಿ ಸರ್ವಶಕ್ತನಾದ ಅಲ್ಲಾಹನು ಹೇಳಿರುವುದರ ಬಗ್ಗೆ ಕಳವಳಗೊಂಡು ಅವರು ನಿತ್ಯ ಸಾಷ್ಟಾಂಗ ಪ್ರಣಾಮ ಮಾಡಿ ಅವರಿಗೋಸ್ಕರ ಪ್ರಾರ್ಥಿಸುತ್ತಿದ್ದರು. ತನ್ನ ಜನರು ಸುಧಾರಣೆ ಹೊಂದಬೇಕೆಂಬ ಬಗ್ಗೆ ಅವರ ಹೃದಯದಲ್ಲಿ ತೀವ್ರ ವೇದನೆಯಿತ್ತು. ಅವರು ಬಹಳ ವ್ಯಾಕುಲಚಿತ್ತರಾಗಿದ್ದರು. ಆಗ ಅಲ್ಲಾಹನು ಅವರೊಂದಿಗೆ ಹೇಳಿದನು: "ಅವರು ಈ ಮಾತಿನಲ್ಲಿ ನಂಬಿಕೆ ಇಡದಿದ್ದರೆ ಅವರ ಬಗ್ಗೆ ನೀನು ವ್ಯಾಕುಲಪಡುತ್ತಾ ನಿನ್ನ ಜೀವಕ್ಕೆ ಹಾನಿಯನ್ನು ಮಾಡುವಿಯೋ" (18:7).

ಸಂದೇಶವನ್ನು ಜನರಿಗೆ ತಲಪಿಸುವುದು ಮಾತ್ರ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಹೊಣೆಗಾರಿಕೆ ಎಂದು ಅವರಿಗೆ ತಿಳಿಸಲಾಯಿತು.

ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರರು(ಸ) ತನ್ನ ಶತ್ರುಗಳ ವಿರುದ್ಧ ಹೀಗೆ ಪ್ರಾರ್ಥಿಸಿದರು: "ಹೇ ಅಲ್ಲಾಹ್, ನನ್ನ ಜನರಿಗೆ ನೀನು ಮಾರ್ಗದರ್ಶನ ನೀಡು. ಏಕೆಂದರೆ ಅವರಿಗೆ (ಸತ್ಯವೇನೆಂದು) ತಿಳಿದಿಲ್ಲ."

ದುಸ್ಸಾನ್ ಗೋತ್ರದವರನ್ನು ಶಪಿಸಬೇಕೆಂದು ಹಝ್ರತ್ ಪೈಗಂಬರರೊಂದಿಗೆ(ಸ) ಆವಶ್ಯಪಟ್ಟಾಗ ಅವರು ಹೀಗೆ ಪ್ರಾರ್ಥಿಸಿದರು: "ಹೇ ಅಲ್ಲಾಹ್, ದುಸ್ಸಾನ್ ಗೋತ್ರದವರಿಗೆ ಮಾರ್ಗದರ್ಶನ ನೀಡು."

ಹಝ್ರತ್ ಪೈಗಂಬರರಿಗೆ(ಸ) ಮಾನವರ ಬಗ್ಗೆ ಇದ್ದ ಕಳವಳ ಮತ್ತು ಕಾರುಣ್ಯ ಆ ರೀತಿ ಇತ್ತು. ಜನರನ್ನು ಖಡ್ಗ ಬಲದಿಂದ ಧಾರ್ಮಿಕವಾಗಿ ಪರಿವರ್ತಿಸುವೆನೆಂದು ಹಝ್ರತ್ ಪೈಗಂಬರರು(ಸ) ಎಂದೂ ಹೇಳಿರಲಿಲ್ಲ. ಅವರು ಎಂದೂ ಜನರನ್ನು ನಿಂದಿಸಿರಲಿಲ್ಲ ಮತ್ತು ತನ್ನ ಶತ್ರುಗಳಿಗೆ ಕೆಡುಕುಂಟಾಗಲಿ ಎಂದು ಶಪಿಸಿರಲಿಲ್ಲ.

ಮಕ್ಕದ ಅವಿಶ್ವಾಸಿಗಳು ಹಝ್ರತ್ ಪೈಗಂಬರರನ್ನು(ಸ) ಮದೀನಕ್ಕೆ ವಲಸೆ ಹೋಗುವಂತೆ ಮಾಡಿದರು. ಅವರಿಗೆ ಮದೀನದಲ್ಲಿಯೂ ನೆಮ್ಮದಿಯಿಂದ ಜೀವಿಸಲು ಬಿಡಲಿಲ್ಲ. ಆದರೆ ಅವರು ಮಕ್ಕದ ಜನರನ್ನು ಭೇಟಿಯಾದಾಗಲೆಲ್ಲ ಅವರೊಂದಿಗೆ ಕಾರುಣ್ಯದಿಂದಲೇ ವರ್ತಿಸುತ್ತಿದ್ದರು. ಹಝ್ರತ್ ಪೈಗಂಬರರು(ಸ) ಮದೀನಕ್ಕೆ ವಲಸೆ ಹೋದ ನಂತರ ಮಕ್ಕದ ನಿವಾಸಿಗಳು ಘೋರ ಕ್ಷಾಮಕ್ಕೆ ತುತ್ತಾದರು. ಅವರು ಸತ್ತ ಮೃಗಗಳ ಮಾಂಸ ಮತ್ತು ಎಲುಬು ತಿಂದು ಜೀವ ಉಳಿಸಬೇಕಾಯಿತು. ಮಕ್ಕದ ಜನರ ನಾಯಕ ಅಬೂ ಸುಫ್‌ಯಾನ್ ಹಝ್ರತ್ ಪೈಗಂಬರರ(ಸ) ಬಳಿಗೆ ಬಂದು ಹೇಳಿದರು: "ಹೇ ಮುಹಮ್ಮದ್, ನೀವು ಸಂಬಂಧಿಕರೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸಬೇಕು ಎಂದು ಉಪದೇಶಿಸುತ್ತಿರುವಿರಿ. ನಿಮ್ಮ ಜನರು ಸಾಯುತ್ತಿದ್ದಾರೆ. ನೀವು ನಿಮ್ಮ ದೇವನೊಂದಿಗೆ ನಮ್ಮ ಪರವಾಗಿ ಪ್ರಾರ್ಥಿಸಿರಿ. ಈ ಕ್ಷಾಮ ದೂರ ಸರಿದು ಮಳೆ ಸುರಿಯುವಂತಾಗಲಿ. ಹಾಗೆ ಆಗದಿದ್ದರೆ ನಿಮ್ಮ ಊರಿನ ಜನರು ನಾಶವಾಗುವರು."

ಅಬೂ ಸುಫ್‌ಯಾನರೊಂದಿಗೆ ಹಝ್ರತ್ ಪೈಗಂಬರರು(ಸ)

ಹೇಳಿದರು: "ನೀವು ಬಹಳ ಧೈರ್ಯಶಾಲಿ ಆಗಿರುವಿರಿ. ಮಕ್ಕದ ಜನರು ನಮ್ಮ ವಿರುದ್ಧ ಅತಿಕ್ರಮಣ ಮಾಡುತ್ತಿದ್ದರೂ ನೀವು ಅವರ ಪರವಾಗಿ ಪ್ರಾರ್ಥಿಸಲು ಅಪೇಕ್ಷಿಸುತ್ತಿರುವಿರಿ."

ಹಝ್ರತ್ ಪೈಗಂಬರರು[ಸ] ಕಾರುಣ್ಯದ ಸಾಕಾರ ರೂಪವಾಗಿದ್ದ ಕಾರಣ ಅವರು ಪ್ರಾರ್ಥನೆ ಮಾಡುವುದಿಲ್ಲ ಎಂದು ಹೇಳಲಿಲ್ಲ. ತನ್ನ ಊರಿನ ಜನರು ನಾಶವಾಗಬೇಕೆಂದು ಅವರು ಎಂದೂ ಇಚ್ಛಿಸಿರಲಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಕೈಗಳನ್ನೆತ್ತಿ ಕ್ಷಾಮ ನಿವಾರಣೆಯಾಗಲು ಮತ್ತು ಮಳೆ ಸುರಿಯಲು ಪ್ರಾರ್ಥಿಸಿದರು. ಅವರ ಪ್ರಾರ್ಥನೆ ಸ್ವೀಕರಿಸಲ್ಪಟ್ಟಿತು. ಎಷ್ಟು ಮಳೆ ಸುರಿಯಿತೆಂದರೆ ಮಕ್ಕದ ಖುರೈಶಿ ಗೋತ್ರದ ಜನರಿಗೆ ಸುಖ ಸಮೃದ್ಧಿಯ ಕಾಲ ಮರಳಿ ಬಂತು. ಆದರೆ ಅವರ ನಿರಾಕರಣೆ ಮತ್ತು ವಿರೋಧ ವರ್ಧಿಸಿತು. (ಬುಖಾರಿ: ಕಿತಾಬುತ್ತಫ್‌ಸೀರ್ ಸೂರಃ ಅರ್‍ರೂಮ್).

ವಾಸ್ತವ ಸ್ಥಿತಿ ಹೀಗಿರುವಾಗ ಹಝ್ರತ್ ಪೈಗಂಬರರು[ಸ] ಉಗ್ರವಾದ ಮತ್ತು ಭಯೋತ್ಪಾದನೆಯ ಉಪದೇಶ ನೀಡಿದರೆಂದು ಹೇಗೆ ಹೇಳಲು ಸಾಧ್ಯ?

ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ. ಯಾವಾತನು ದುಷ್ಟಶಕ್ತಿಗಳನ್ನು ತಿರಸ್ಕರಿಸಿ ಅಲ್ಲಾಹನನ್ನು ನಂಬುತ್ತಾನೋ ಖಂಡಿತವಾಗಿಯೂ ಆತನು ಸುದೃಢವಾದೊಂದು ಕೈಯಾಸರೆಯನ್ನು ಹಿಡಿದಿರುವನು (ಎಂದು ತಿಳಿದುಕೊಳ್ಳಲಿ). ಅದು ಎಂದಿಗೂ ಮುರಿದು ಹೋಗುವಂಥದ್ದಲ್ಲ. ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ." (2:257).

ಈ ವಚನದ ಪ್ರಾಯೋಗಿಕ ಉದಾಹರಣೆಯನ್ನು ಈ ಕೆಳಗೆ ವಿವರಿಸಲಾಗುವ ಒಂದು ಘಟನೆಯಿಂದ ತಿಳಿಯಬಹುದಾಗಿದೆ. ಬನೂ ನಝೀರ್ ಎಂಬ ಯಹೂದಿ ಗೋತ್ರದವರು ಮದೀನದಲ್ಲಿ ಶಾಂತಿಯನ್ನು ಕಾಪಾಡುವ ತಮ್ಮ ಪ್ರತಿಜ್ಞೆಯನ್ನು ಪಾಲಿಸದ ಕಾರಣದಿಂದ ಅವರನ್ನು ಮದೀನದಿಂದ ಗಡಿಪಾರು ಮಾಡಲಾಗಿತ್ತು. ಆ ಸಮಯದಲ್ಲಿ ಮದೀನದ ಮುಸ್ಲಿಮ್ ನಿವಾಸಿಗಳಾದ ಅನ್‌ಸಾರ್‌ಗಳ ಅನೇಕ ಮಕ್ಕಳು ಈ ಗೋತ್ರದವರೊಂದಿಗಿದ್ದರು. ಇಸ್ಲಾಮ್‌ಗೆ ಮೊದಲು ಅಜ್ಞಾನ ಕಾಲದಲ್ಲಿ ಮದೀನದ ಔಸ್ ಮತ್ತು ಖಿಜ್‌ರಜ್ ಎಂಬ ಅರಬಿ ಗೋತ್ರಗಳಲ್ಲಿ ಒಂದು ಸಂಪ್ರದಾಯ ಜಾರಿಯಲ್ಲಿತ್ತು. ಗಂಡು ಮಗುವಿಲ್ಲದವರು ಪ್ರತಿಜ್ಞೆ ಮಾಡುತ್ತಿದ್ದರು – ತಮಗೆ ಮುಂದಿನ ಮಗು ಗಂಡಾಗಿ ಜನಿಸಿದರೆ ಅವನನ್ನು ಯಹೂದಿಯನ್ನಾಗಿ ಮಾಡುವೆವು ಎಂದು. ಆದುದರಿಂದ ಔಸ್ ಮತ್ತು ಖಿಜ್‌ರಜ್ ಗೋತ್ರದ ಅನೇಕ ಹುಡುಗರನ್ನು ಯಹೂದಿ ಕುಟುಂಬಗಳಿಗೆ ನೀಡಲಾಗಿತ್ತು. ಬನೂ ನಝೀರ್ ಗೋತ್ರದ ಯಹೂದಿಗಳನ್ನು ಗಡಿಪಾರು ಮಾಡಿದಾಗ ಮುಸ್ಲಿಮರು ತಮ್ಮ ಮಕ್ಕಳನ್ನು ಯಹೂದಿಯರಿಂದ ಮರಳಿ ಪಡೆಯಲು ಬಯಸಿದರು. ಆದರೆ ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ ಎಂಬ ಪವಿತ್ರ ಖುರ್‌ಆನಿನ ಆಜ್ಞೆ ಪ್ರಕಾರ ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಮುಸ್ಲಿಮರನ್ನು ತಡೆದರು. ನೀವು ನಿಮ್ಮ ಮಕ್ಕಳನ್ನು ಯಹೂದಿಯರಿಗೆ ನೀಡಿದಾಗ ಯಹೂದಿಯರು ಆ ಮಕ್ಕಳನ್ನು ಯಹೂದಿ ಧರ್ಮದವರನ್ನಾಗಿ ಮಾಡಿರುವಾಗ ನೀವು ಆ ಮಕ್ಕಳನ್ನು ಮರಳಿ ಪಡೆಯಲು ಸಾಧ್ಯವಿಲ್ಲ ಎಂದು ಹೇಳಿದರು. ಆ ಮಕ್ಕಳು ಬನೂ ನಝೀರ್ ಗೋತ್ರದ ಜೊತೆ ಹೋಗಲು ಅನುಮತಿಸಿದರು.

ಹಝ್ರತ್ ಉಮರ್‌ರವರ[ರ] ಒಬ್ಬ ಗುಲಾಮನು, ತಾನು ಹಝ್ರತ್ ಉಮರ್‌ರವರ[ರ] ಗುಲಾಮನಾಗಿದ್ದರೂ ಹಝ್ರತ್ ಉಮರ್ ತನ್ನನ್ನು ಮುಸ್ಲಿಮನಾಗಲು ನಿರ್ಬಂಧಿಸಲಿಲ್ಲ ಎಂದು ಹೇಳಿದನು. ಹಝ್ರತ್ ಉಮರ್[ರ] ಪ್ರೀತಿ ವಾತ್ಸಲ್ಯಗಳಿಂದ ಆ ಗುಲಾಮನೊಂದಿಗೆ ಮುಸ್ಲಿಮನಾಗಲು ಉಪದೇಶಿಸುತ್ತಾ ಇದ್ದರೂ ಆ ಗುಲಾಮನು ನಿರಾಕರಿಸುತ್ತಿದ್ದನು. ಆಗ ಹಝ್ರತ್ ಉಮರ್[ರ] "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ" ಎಂದು ಹೇಳಿ ಮೌನವಾಗಿರುತ್ತಿದ್ದರು. ಕೊನೆಗೆ ಹಝ್ರತ್ ಉಮರ್[ರ] ತಾನು ಮೃತನಾಗುವ ಮೊದಲು ಆ ಗುಲಾಮನನ್ನು ವಿಮೋಚಿಸಿದರು. ಆದುದರಿಂದ ಇಸ್ಲಾಮಿನಲ್ಲಿ ಬಲಾತ್ಕಾರವಾಗಲಿ, ಶಾಂತಿಭಂಗವಾಗಲಿ ಇದೆ ಎಂದು ಆಪಾದಿಸಲು ಹೇಗೆ ತಾನೆ ಸಾಧ್ಯ?

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ವಾಗ್ದತ್ತ ಮಸೀಹರು[ಅ] ಹೇಳುತ್ತಾರೆ: "ಇಸ್ಲಾಮ್ ಖಡ್ಗ ಬಲದಿಂದ ಪ್ರಚಾರಗೊಂಡಿತು ಎಂದು ವಿರೋಧಿಗಳು ಗ್ರಹಿಸಿದುದಾದರೂ ಹೇಗೆ! ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ ಎಂದು. ಹೀಗಿರುವಾಗ ಬಲಾತ್ಕಾರ ಮಾಡಬೇಕೆಂಬ ಆಜ್ಞೆ ನೀಡಿದುದು ಯಾರು? ಹಾಗೆ ನಿರ್ಬಂಧಿಸಲು ಅವರ ಬಳಿ ಇದ್ದ ಆಯುಧವಾದರೂ ಏನು? ಬಲಾತ್ಕಾರದಿಂದ ಧರ್ಮ ಪರಿವರ್ತನೆಗೆ ತುತ್ತಾದವರು ಹಝ್ರತ್ ಪೈಗಂಬರರ[ಸ] ಶಿಷ್ಯರ ಹಾಗೆ ವಿಧೇಯತೆಯನ್ನೂ ನಿಷ್ಠೆಯನ್ನೂ ಪ್ರಕಟಿಸುವರೇ? ಇನ್ನೂರು ಮುನ್ನೂರು ಸಂಖ್ಯೆಯಲ್ಲಿದ್ದಾಗ ಅವರು ಪ್ರತಿಫಲೇಚ್ಛೆ ಇಲ್ಲದೆ ಸಾವಿರಗಟ್ಟಲೆ ಶತ್ರುಗಳ ವಿರುದ್ಧ ಹೋರಾಡಿದರು. ಅವರ ಸಂಖ್ಯೆ ಸಾವಿರವಿದ್ದಾಗ ಲಕ್ಷಗಟ್ಟಲೆ ಶತ್ರುಗಳ ವಿರುದ್ಧ ಹೋರಾಡಿ ಗೆದ್ದರು. ಅವರು ತಮ್ಮ ಧರ್ಮವನ್ನು ಸಂರಕ್ಷಿಸಲು ಕುರಿಗಳಂತೆ ತಮ್ಮ ಶಿರಗಳನ್ನು ಬಲಿದಾನವಾಗಿ ನೀಡಿ ಸ್ವಂತ ರಕ್ತದಿಂದ ಇಸ್ಲಾಮಿನ ಸತ್ಯವನ್ನು ಸಾಕ್ಷೀಕರಿಸಿದರು ಮತ್ತು ಏಕದೇವ ತತ್ವವನ್ನು ಹರಡಲು ಅವರು ಸಿದ್ಧರಾದರು. ದುರಂತಗಳನ್ನು ಸಹಿಸಿಕೊಂಡು ಆಫ್ರಿಕದ ಮರಳಾರಣ್ಯದವರೆಗೆ ಇಸ್ಲಾಮ್ ಧರ್ಮವನ್ನು ಹರಡಿದರು. ಮತ್ತೊಂದು ಕಡೆ ಅವರು ಕಷ್ಟಗಳನ್ನು ಸಹಿಸಿಕೊಂಡು ಚೀನಾ ದೇಶವನ್ನು ಸಹ ತಲಪಿದರು. ಆಕ್ರಮಣಗಾರರಾಗಿ ಅಲ್ಲ, ನಿಸ್ಸಂಗರಾದ ದರ್ವೇಶ್‌ಗಳ (ವಿರಾಗಿಗಳ) ಹಾಗೆ ಅವರು ಆ ದೇಶಗಳಿಗೆ ಪ್ರವೇಶಿಸಿದ್ದರು.

ನೀವು ಪ್ರಾಮಾಣಿಕತೆಯಿಂದ ಸಾಕ್ಷ್ಯ ಹೇಳಿರಿ – ಬಲಾತ್ಕಾರದಿಂದ ಮುಸ್ಲಿಮರಾದವರು ಹೀಗೆ ಮಾಡಲು ಸಾಧ್ಯವೇ? ನಾಲಗೆಯಲ್ಲಿ ಮಾತ್ರ ವಿಶ್ವಾಸವಿದ್ದು ಹೃದಯದಲ್ಲಿ ಅವಿಶ್ವಾಸಿಗಳಾಗಿದ್ದ ಜನರು ಮಾಡುವ ಕೆಲಸಗಳು ಹೀಗಾಗುವವೋ? ಅಲ್ಲ, ಖಂಡಿತವಾಗಿಯೂ ಅಲ್ಲ. ಧಾರ್ಮಿಕ ವಿಶ್ವಾಸದ ಪ್ರಕಾಶದಿಂದ ಬೆಳಗಿದ ಹೃದಯ ಹೊಂದಿದವರು ಮಾತ್ರ ಹೀಗೆ ಮಾಡಬಲ್ಲರು. ಅವರ ಹೃದಯದಲ್ಲಿ ಏಕದೇವ ವಿಶ್ವಾಸ ಮಾತ್ರವಿತ್ತು. (ಪೈಗಾಮೆ ಸುಲ್ಹ್ – ರೂಹಾನಿ ಖಝಾಇನ್ ಸಂಪುಟ 23 ಪುಟ 468–469).

## ಧಾರ್ಮಿಕ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯ

ಧಾರ್ಮಿಕ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿ ಇಸ್ಲಾಮಿನ ಉಪದೇಶಗಳ ಪ್ರಾಯೋಗಿಕ ಉದಾಹರಣೆಗಳು ಅನೇಕ ಇವೆ. ಅವುಗಳ ಪೈಕಿ ಒಂದು ಉದಾಹರಣೆ ನಿಮ್ಮ ಮುಂದೆ ವಿವರಿಸುತ್ತೇನೆ. ಅನಂತರ ಹೆಚ್ಚಿನ ವಿಶದೀಕರಣದ ಆವಶ್ಯಕತೆ ಇರಲಾರದು.

"ಹಝ್ರತ್ ಪೈಗಂಬರರ(ಸ) ಪ್ರಜೆಗಳಾದ ಕೆಲವರು ತಮ್ಮ ಸ್ವಂತ ವಿಶ್ವಾಸವನ್ನು ಅವಲಂಬಿಸಲು ಇಚ್ಛಿಸಿದ್ದರು. ಹಝ್ರತ್ ಪೈಗಂಬರರು(ಸ) ಪ್ರತಿಯೊಬ್ಬನಿಗೆ ಧಾರ್ಮಿಕ ಸ್ವಾತಂತ್ರ್ಯವಿದೆ ಎಂದು ಪ್ರತಿಪಾದಿಸಿದರೂ ಅವರ ವಿರೋಧಿಗಳು ಈ ತತ್ವವನ್ನು ಅಂಗೀಕರಿಸಿರಲಿಲ್ಲ. ವಿರೋಧಿಗಳು ಸೋಲಿಸಲ್ಪಟ್ಟಾಗ ಹಝ್ರತ್ ಪೈಗಂಬರರು(ಸ) ಅವರನ್ನು ಅವಮಾನಿಸಲಿಲ್ಲ ಮತ್ತು ಅವರೊಂದಿಗೆ ಹೇಳಿದರು: ನಾನು ಯಾವ ತತ್ವಕ್ಕೋಸ್ಕರ ನಿಮ್ಮ ವಿರುದ್ಧ ಹೋರಾಡಿದ್ದೆನೋ ಆ ತತ್ವವನ್ನು ನಾನು ಕೈಬಿಡಲಾರೆ. ನಿಮ್ಮ ದೌರ್ಜನ್ಯ ಭರಿತ ಮನೋಭಾವದಿಂದ ನೀವು ತಪ್ಪಾಗಿ ವರ್ತಿಸಿದಿರಿ. ಆದರೆ ನಿಮ್ಮ ಹಕ್ಕುಗಳು ಸಂರಕ್ಷಿಸಲ್ಪಡುವುವು. ನಿಮ್ಮ ವಿರೋಧ ದೋಷಾರೋಪ ಮಾಡುವುದಿಲ್ಲ. ನೀವು ಧಾರ್ಮಿಕ ವಿಶ್ವಾಸಗಳಿಗೆ ಸಂಬಂಧಿಸಿ ಪೂರ್ಣವಾಗಿ ಸ್ವತಂತ್ರರಾಗಿರುವಿರಿ. ನೀವು ನಮ್ಮ ಝಿಮ್ಮಿ (ಮುಸ್ಲಿಮ್ ದೇಶದ ಮುಸ್ಲಿಮೇತರ ಪ್ರಜೆ) ಆಗಿರುವಿರಿ. ಅಲ್ಲಾಹನು ಮತ್ತು ಅವನ ಸಂದೇಶವಾಹಕ ನಿಮ್ಮ ಸಂರಕ್ಷಣೆಯ ಹೊಣೆಗಾರಿಕೆ ಹೊತ್ತವರಾಗಿರುವರು." (ನಿಸಾಬುಲ್ ರಆ್ಯ ಫೀ ತಖ್ರೀಜ್, ಆಹಾದಿಸುಲ್ ಹಿದಾಯಾ ಸಂಪುಟ 4 ಪುಟ 381 – ಈಜಿಪ್ಟ್‌ನಲ್ಲಿ ಮುದ್ರಿತ).

ಪವಿತ್ರ ಖುರ್ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: "ಎಲೈ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ." (5:9).

ಪವಿತ್ರ ಖುರ್ಆನಿನ ಈ ಉಪದೇಶವನ್ನು ಅನುಷ್ಠಾನಕ್ಕೆ ಹೇಗೆ ತರಲಾಯಿತೆಂದು ಪರಿಶೋಧಿಸುವ. ಕೆಳಗೆ ಪ್ರಸ್ತಾಪಿಸುವ ಉದಾಹರಣೆಯನ್ನು ಪರಿಶೋಧಿಸಿದ ನಂತರ ಇಸ್ಲಾಮ್, ಶಾಂತಿ, ಸೌಹಾರ್ದ, ಭಾವೈಕ್ಯತೆ ಮತ್ತು ನ್ಯಾಯಪಾಲನೆ ಮಾಡುವ ಧರ್ಮವಲ್ಲವೆಂದು ಹೇಳಲು ಹೇಗೆ ತಾನೆ ಸಾಧ್ಯ?

ಹೀಗೆ ವರದಿಯಾಗಿದೆ: "ಮುಹಯ್ಯಸ ಎಂಬ ಸಹಾಬಿ (ಪೈಗಂಬರರ ಶಿಷ್ಯ) ಖೈಬರ್ ಯುದ್ಧದಲ್ಲಿ ಕೊಲ್ಲಲ್ಪಟ್ಟರು. ಕೊಲ್ಲಲ್ಪಟ್ಟವರ ವಾರಸುದಾರರು ಕೊಂದವನಿಗೆ ಮರಣ ದಂಡನೆ ನೀಡಬೇಕೆಂದು ಆವಶ್ಯಪಟ್ಟರು. ಆಗ ಹಝ್ರತ್ ಪೈಗಂಬರರು(ಸ) ಕೇಳಿದರು: ಕೊಂದವರು ಯಾರೆಂದು ಪ್ರಮಾಣ ಮಾಡಿ ಹೇಳಲು ನಿಮಗೆ ಸಾಧ್ಯವಿದೆಯೇ? ವಾರಸುದಾರರು ಹೇಳಿದರು: ನಾವು ಅಲ್ಲಿರದ ಕಾರಣ ನಾವು ಹೇಗೆ ತಾನೆ ಪ್ರಮಾಣ ಮಾಡಿ ಹೇಳಲು ಸಾಧ್ಯ? ಹಝ್ರತ್ ಪೈಗಂಬರರು(ಸ) ಹೇಳಿದರು: ಸಾಕ್ಷ್ಯಾಧಾರ ದೊರಕದಿದ್ದರೆ ಮರಣ ದಂಡನೆ ನೀಡಲು ಸಾಧ್ಯವಿಲ್ಲ. ಒಂದು ಸಾಧ್ಯತೆ ಇದೆ. ಖೈಬರಿನ ಯಹೂದಿಯರು ಅವರ ಸ್ವಂತ ನಿಯಮಗಳ ಪ್ರಕಾರ ಐವತ್ತು ಸಾರಿ ಆಣೆ ಹಾಕಿ ಕೊಲೆ ಮಾಡಿದವನು ಯಾರೆಂದು ತಿಳಿದಿಲ್ಲವೆಂದು ಹೇಳಬೇಕು. ಮುಹಯ್ಯಸರ ವಾರಸುದಾರರು ಹೇಳಿದರು: ಈ ಯಹೂದಿಯರನ್ನು ನಂಬಲು ಹೇಗೆ ತಾನೆ ಸಾಧ್ಯ; ಅವರು ಸುಳ್ಳು ಪ್ರಮಾಣ ಮಾಡುವರು. ಹಝ್ರತ್ ಪೈಗಂಬರರು(ಸ) ಹೇಳಿದರು: ನಿಯಮ ಪ್ರಕಾರ ಆ ರೀತಿ ಮಾಡಬೇಕಲ್ಲದೆ ಪಾಟೀಸವಾಲು ಮಾಡುವುದು ಅನುಮತಿಸಲ್ಪಟ್ಟಿಲ್ಲ. ಪಕ್ಷಪಾತದಿಂದ ವರ್ತಿಸಲು ಸಹ ಸಾಧ್ಯವಿಲ್ಲ. ಅನಂತರ ಪೈಗಂಬರರು(ಸ) ವಾರಸುದಾರರಿಗೆ ಮುಹಯ್ಯಸರ ಹತ್ಯೆಗೆ ಪರಿಹಾರ ದ್ರವ್ಯ ನೀಡಿದರು."
(ತಜ್‌ರೀದ್ ಅಲ್ ಬುಖಾರಿ).

ನಾನು ಉಲ್ಲೇಖಿಸಿದ ಪವಿತ್ರ ಖುರ್ಆನ್ ವಚನಗಳು ಸ್ಪಷ್ಟಪಡಿಸು ವುದೇನೆಂದರೆ, ಇಸ್ಲಾಮಿನ ತತ್ವಗಳ ಪ್ರಕಾರ ಧರ್ಮಕ್ಕೆ ಸಂಬಂಧಿಸಿ ಯಾವ ಬಲಾತ್ಕಾರವೂ ಅನುಮತಿಸಲ್ಪಟ್ಟಿಲ್ಲ. ಪ್ರತಿಯೊಬ್ಬನು ತನ್ನ ಮನಸ್ಸಾಕ್ಷಿಗೆ ಅನುಸಾರವಾಗಿ ವಿಶ್ವಾಸವನ್ನು ಹೊಂದುವ ಸ್ವಾತಂತ್ರ್ಯವನ್ನು ಅಲ್ಲಾಹನು ನೀಡಿದ್ದಾನೆ. ನಾನು ಇದರ ಮೊದಲು ನೀಡಿದ ಗುಲಾಮನ ಉದಾಹರಣೆಯನ್ನು ನೋಡಿರಿ. ಅವನನ್ನು ಮುಸ್ಲಿಮನಾಗಲು ನಿರ್ಬಂಧಿಸಿರಲಿಲ್ಲ. ಪವಿತ್ರ ಖುರ್ಆನ್ ಮನಸ್ಸಾಕ್ಷಿಯ ಸ್ವಾತಂತ್ರ್ಯದ ಬಗ್ಗೆ ಅನೇಕ ವಚನಗಳಲ್ಲಿ ವಿವರಿಸಿದೆ. ಅವುಗಳನ್ನೆಲ್ಲ ಈಗ ಪ್ರಸ್ತಾಪಿಸಲು ಸಾಧ್ಯವಾಗದು.

ಇಸ್ಲಾಮ್ ಧರ್ಮದ ಸ್ಪಷ್ಟವಾದ ಈ ಉಪದೇಶಗಳ ಪ್ರಕಾರ ಹಝ್ರತ್ ಪೈಗಂಬರರು(ಸ) ಮತ್ತು ಅವರ ಶಿಷ್ಯರು ಒಂದು ಕೈಯಲ್ಲಿ ಖಡ್ಗವನ್ನೂ ಇನ್ನೊಂದು ಕೈಯಲ್ಲಿ ಪವಿತ್ರ ಖುರ್ಆನನ್ನೂ ಹಿಡಿದುಕೊಂಡು ಲೋಕದಲ್ಲಿ ಶಾಂತಿಯನ್ನು ಕೆಡಿಸಿರದಿದ್ದಲ್ಲಿ ಈ ತಥಾಕಥಿತ ಪವಿತ್ರ ಯುದ್ಧಗಳೆಂದರೇನು? ಜಿಹಾದ್ ಎಂದರೇನು? ಈ ಜಿಹಾದ್ ಎಂಬ ಶಬ್ದ ಪ್ರತಿಯೊಬ್ಬನು ಉಚ್ಚರಿಸುತ್ತಾ ಲೋಕದ ಅಶಾಂತಿಗೆ ಮುಸ್ಲಿಮರು ಕಾರಣವೆಂದು ಆಪಾದಿಸಲ್ಪಡುತ್ತಿರುವುದೇಕೆ?

ಹಝ್ರತ್ ಪೈಗಂಬರರ(ಸ) ಜೀವಿತ ಕಾಲದಲ್ಲಿ ಯುದ್ಧಗಳನ್ನು ಪ್ರಾರಂಭಿಸಿದುದು ಅವರೇ ಎಂದು ಆಪಾದಿಸಲ್ಪಡುತ್ತಿರುವುದು ಆಶ್ಚರ್ಯಕರವಾಗಿದೆ. ಆದರೆ ನಾವು ನ್ಯಾಯಪೂರ್ಣವಾಗಿ ವಾಸ್ತವಿಕಾಂಶಗಳನ್ನು ತಿಳಿದುಕೊಳ್ಳಲು ಆ ಕಾಲದ ಸ್ಥಿತಿಯನ್ನು ಪರಿಶೋಧಿಸಬೇಕಾಗಿದೆ. ಈ ವಿಷಯದ ಬಗ್ಗೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಹೀಗೆ ಹೇಳಿದ್ದಾರೆ:

"ಹಝ್ರತ್ ಪೈಗಂಬರರು(ಸ) ಮಕ್ಕದ ಅವಿಶ್ವಾಸಿಗಳಿಂದ 13 ವರ್ಷಗಳ ಕಾಲ ಅನುಭವಿಸಿದ ಹಿಂಸಾಚಾರಗಳನ್ನು ನೆನಪಿಸುವಾಗ ನಮ್ಮನ್ನು ಅಳುವಂತೆ ಮಾಡುತ್ತದೆ. ಆದರೆ ಹಝ್ರತ್ ಪೈಗಂಬರರು(ಸ) ಖಡ್ಗವೆತ್ತಲಿಲ್ಲ ಮತ್ತು ಶತ್ರುಗಳ ಕಟುವಾದ ಬೈಗಳಿಗೆ ಕಟುವಾಗಿ ಪ್ರತಿಕ್ರಿಯೆ ನೀಡಲಿಲ್ಲ. ಪೈಗಂಬರರ(ಸ) ಅನೇಕ ಶಿಷ್ಯರು ಚಿತ್ರಹಿಂಸೆ ನೀಡಲ್ಪಟ್ಟು ಕೊಲ್ಲಲ್ಪಟ್ಟರು. ಅವರು ಮತ್ತು ಅವರ ಶಿಷ್ಯರು ಎಲ್ಲ ವಿಧಗಳ ಹಿಂಸಾಚಾರಗಳಿಗೆ ಗುರಿಯಾದರು. ಪೈಗಂಬರರಿಗೆ ವಿಷವನ್ನು ನೀಡಲಾಯಿತು ಮತ್ತು ಕೊಲ್ಲಲು ಗೂಢ ತಂತ್ರಗಳನ್ನು ಹೆಣೆಯಲಾಯಿತು. ಆದರೆ ವಿರೋಧಿಗಳು ಜಯ ಗಳಿಸಲಿಲ್ಲ. ಕೊನೆಗೆ ಮಕ್ಕದ ಧುರೀಣರು ಮತ್ತು ನೇತಾರರು ಹಝ್ರತ್ ಪೈಗಂಬರರನ್ನು ಹತ್ಯೆಮಾಡಲು ಒಮ್ಮತದಿಂದ ನಿರ್ಧರಿಸಿದರು. ಆಗ ಅಲ್ಲಾಹನು ಹಝ್ರತ್ ಪೈಗಂಬರರೊಂದಿಗೆ ಮಕ್ಕವನ್ನು ಬಿಟ್ಟು ಹೋಗಲು ಆಜ್ಞಾಪಿಸಿದನು. ಅಲ್ಲಾಹನ ಆಜ್ಞೆ ಪ್ರಕಾರ ಅವರು ಮದೀನಕ್ಕೆ ವಲಸೆ ಹೋದರು. ಆದರೆ ಶತ್ರುಗಳು ಅವರನ್ನು ಅಲ್ಲಿ ಕೂಡ ನೆಮ್ಮದಿಯಿಂದ ಜೀವಿಸಲು ಬಿಡಲಿಲ್ಲ. ಶತ್ರುಗಳ ಹಿಂಸಾಚಾರ ಮಿತಿಮೀರಿದಾಗ ಮತ್ತು ನಿಷ್ಕಳಂಕರಾದ ಮುಸ್ಲಿಮರನ್ನು ಶತ್ರುಗಳು ಹತ್ಯೆ ಮಾಡಿದ ಕಾರಣ ಅವರು ಶಿಕ್ಷೆಗೆ ಅರ್ಹರಾದರು. ಅಂತಹ ಸಂದರ್ಭದಲ್ಲಿ ಮುಸ್ಲಿಮರ ಆತ್ಮರಕ್ಷಣೆಗೆ ಪ್ರತಿರೋಧಕ ಯುದ್ಧ ಮಾಡಲು ಅನುಮತಿ ನೀಡಲಾಯಿತು. ಶತ್ರುಗಳು ನಿಷ್ಕಳಂಕರಾದ ಜನರನ್ನು ಕೊಂದು

ಅವರ ಸ್ವತ್ತನ್ನು ಕಿತ್ತುಕೊಂಡಿದ್ದರು. ಅಂತಹ ಜನರಿಗೆ ಮಕ್ಕದ ವಿಜಯದ ಸಂದರ್ಭದಲ್ಲಿ ಕ್ಷಮೆಯನ್ನು ನೀಡಲಾಯಿತು. ಆದುದರಿಂದ ಹಝ್ರತ್ ಪೈಗಂಬರರು(ಸ) ಮತ್ತು ಶಿಷ್ಯರು ಧರ್ಮ ಪ್ರಚಾರಕ್ಕೋಸ್ಕರ ಯುದ್ಧ ಮಾಡಿದರೆಂದು ಆಪಾದಿಸುವುದು ಬಹಳ ದೊಡ್ಡ ತಪ್ಪು ಆರೋಪವೂ ದೌರ್ಜನ್ಯವೂ ಆಗಿದೆ." (ಮಸೀಹ್ ಹಿಂದೂಸ್ಥಾನ್‌ಮೇ ಪುಟ 7–8)

ಪ್ರತಿರೋಧಕ ಯುದ್ಧವನ್ನು ಮಾಡಲು ಅಲ್ಲಾಹನು ಅನುಮತಿ ನೀಡಿದ್ದರೂ ಅತಿರೇಕದಿಂದ ವರ್ತಿಸಬಾರದೆಂದೂ ಆಜ್ಞಾಪಿಸಲಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: "ಫಿತ್ನ (ಹಿಂಸಾಚಾರ) ಇಲ್ಲದಾಗಿ ಧ್ವರ್ಮ (ಸ್ವೀಕಾರ) ಅಲ್ಲಾಹನಿಗೋಸ್ಕರವಾಗುವ ವರೆಗೆ ನೀವು ಅವರೊಡನೆ ಯುದ್ಧ ಮಾಡಿರಿ. ಅವರು ವಿರಮಿಸಿದರೆ, (ಅರಿತುಕೊಳ್ಳಿರಿ) ದುಷ್ಕರ್ಮಿಗಳಲ್ಲದವರ ಮೇಲೆ ಆಕ್ರಮಣ ಸಲ್ಲದು." (2:194).

ಯುದ್ಧ ಮಾಡಲು ಅನುಮತಿಸಿದುದು ಪ್ರತಿರೋಧಾತ್ಮಕ ಯುದ್ಧ ಮಾಡಲು ಮಾತ್ರವಾಗಿದೆ. ಅದರ ಉದ್ದೇಶ ಕೆಡುಕನ್ನು ನಿವಾರಿಸುವುದಾಗಿದೆ. ಆದುದರಿಂದ ಶತ್ರುಗಳು ಹಿಂದೆ ಸರಿದರೆ ಆಕ್ರಮಣ ಮಾಡಬಾರದೆಂದು ಆಜ್ಞಾಪಿಸಲಾಗಿದೆ. ಯುದ್ಧದ ಮೂಲೋದ್ದೇಶ ಶಾಂತಿಸ್ಥಾಪನೆ ಮಾಡುವುದಾಗಿದೆ. ಯುದ್ಧ ಮಾಡಲು ಅನುಮತಿ ನೀಡಿದಾಗ ಕೂಡ ಶಾಂತಿಸ್ಥಾಪನೆ ಮಾಡುವ ಸುಂದರ ತತ್ವವನ್ನು ಪ್ರತಿಪಾದಿಸಲಾಗಿದೆ.

ಹಝ್ರತ್ ಪೈಗಬರರು(ಸ) ಯುದ್ಧಕ್ಕೆ ಸಂಬಂಧಿಸಿ ಈ ಕೆಳಗಿನ ಆಜ್ಞೆಗಳನ್ನು ನೀಡಿದ್ದರು:

1. ಸ್ತ್ರೀಯರನ್ನು ಕೊಲ್ಲಬಾರದು.
2. ಮಕ್ಕಳನ್ನು ಕೊಲ್ಲಬಾರದು.
3. ವೃದ್ಧರನ್ನು ತಡೆಗಟ್ಟಬಾರದು; ಕೊಲ್ಲಬಾರದು.
4. ನಿರಾಶ್ರಿತರನ್ನು, ಸನ್ಯಾಸಿಗಳನ್ನು, ವಿರಾಗಿಗಳನ್ನು ಹಿಂಸಿಸಬಾರದು.
5. ಯಾರಿಗೂ ಬೆಂಕಿ ಹಚ್ಚಿ ಶಿಕ್ಷಿಸಬಾರದು.
6. ಮೃಗಗಳನ್ನು ಕೊಲ್ಲಬಾರದು.
7. ಮರಗಳನ್ನು ಕಡಿಯಬಾರದು.
8. ಶತ್ರು ಸೈನಿಕರ ಕಿವಿ, ಮೂಗುಗಳನ್ನು ಕತ್ತರಿಸಬಾರದು. (ಶತ್ರುಗಳು ಹಾಗೆ ಮಾಡುತ್ತಿದ್ದರು.)

ಯುದ್ಧದಲ್ಲಿ ಜಯಗಳಿಸಿದಾಗ ಹಝ್ರತ್ ಪೈಗಂಬರರು(ಸ) ಹೀಗೆ ಆಜ್ಞಾಪಿಸುತ್ತಿದ್ದರು: 1. ಗಾಯ ಗೊಂಡವರನ್ನು ಕೊಲ್ಲಬಾರದು. 2. ಓಡಿ ಹೋಗುವವರನ್ನು ಹಿಂಬಾಲಿಸಿ ಕೊಲ್ಲಬಾರದು.

ಯುದ್ಧ ಕೈದಿಗಳೊಂದಿಗೆ ಕಾರುಣ್ಯದಿಂದ ವರ್ತಿಸಬೇಕೆಂದು ಹಝ್ರತ್ ಪೈಗಂಬರರು(ಸ) ಉಪದೇಶಿಸಿದುದು ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ:

"ಬದರ್ ಯುದ್ಧದಲ್ಲಿ ಸೆರೆ ಹಿಡಿಯಲಾದ ಸೆರೆಯಾಳುಗಳು ಸ್ವತಃ ಹೀಗೆ ಹೇಳಿದರು: ಅಲ್ಲಾಹನಾಣೆ! ನಾವು ಮೃಗಗಳ ಮೇಲೆ ಸವಾರಿ ಮಾಡುತ್ತಿದ್ದೆವು ಮತ್ತು ಮುಸ್ಲಿಮರು ಕಾಲುನಡೆ ಸಂಚರಿಸುತ್ತಿದ್ದರು. ಅವರು ಹಸಿವೆಯಿಂದ ಇದ್ದರೂ ನಮಗೆ ಆಹಾರ ನೀಡಿದರು. ಅವರು ದಾಹದಿಂದಿದ್ದರೂ ನಮಗೆ ನೀರು ಕುಡಿಸಿದರು. (ಬುಖಾರಿ, ಮುಸ್ಲಿಮ್, ತಿರ್‌ಮಿಧೀ, ಅಬೂ ದಾಊದ್).

ಇಸ್ಲಾಮ್ ರಣೋತ್ಸಾಹ ಭರಿತ, ಯುದ್ಧ ಪ್ರಿಯ ಉಗ್ರವಾದಿ ಧರ್ಮವೆಂದು ಆಪಾದಿಸುವವರು ರಣೋತ್ಸಾಹ ಭರಿತ ಧರ್ಮ ಮೇಲೆ ಉಲ್ಲೇಖಿಸಿದಂತಹ ಉಪದೇಶಗಳನ್ನು ನೀಡುವುದೇ ಎಂದು ಚಿಂತಿಸಬೇಕು. ಕೆಲವು ಜನರು ಮಾಡುವ ಅಕ್ರಮ ಕೃತ್ಯಗಳನ್ನು ಇಸ್ಲಾಮಿನ ಮಡಿಲಿಗೆ ಚಿಮ್ಮಿಸಿ ಅದನ್ನು ಇಸ್ಲಾಮ್ ಎಂದು ಕರೆಯಬೇಡಿರಿ.

ಇಂದಿನ ಕಾಲದಲ್ಲಿ ಮನುಷ್ಯನು ತನ್ನನ್ನು ಬಹಳ ಹೆಚ್ಚು ಪ್ರಗತಿ ಗಳಿಸಿದವನೆಂದೂ ಬುದ್ಧಿಶಾಲಿಯೆಂದೂ ಪರಿಗಣಿಸುತ್ತಿರುವಾಗ ಅವನು ಚಿಂತಿಸಬೇಕು – ಆಕಾಶದಿಂದ ಬಾಂಬ್ ದಾಳಿ ನಡೆಸುತ್ತಿರುವುದು, ನಗರಗಳ ಮೇಲೆ ಮತ್ತು ಜನವಾಸ ಕೇಂದ್ರಗಳ ಮೇಲೆ ಕ್ಷಿಪಣಿಗಳನ್ನು ಹಾರಿಸಿ ಆಕ್ರಮಿಸುವುದು ಮನುಷ್ಯನ ಶ್ರೇಷ್ಠ ಮಾನವೀಯ ಮೌಲ್ಯಗಳನ್ನು ಪ್ರದರ್ಶಿಸುತ್ತಿವೆಯೋ ಎಂದು. ಇಂತಹ ಸ್ವಚ್ಛಂದ ಬಾಂಬ್ ದಾಳಿಗಳಿಂದ ಎಷ್ಟು ನಿರಪರಾಧಿ ಜನರ ರಕ್ತವನ್ನು ಹರಿಸಿ ಅಲ್ಲಲ್ಲಿ ಕೊಲ್ಲುತ್ತಿದ್ದಾರೆ. ಅರಾಜಕತೆ ಇರುವ ಪ್ರದೇಶಗಳಲ್ಲಿ ವೃದ್ಧರ, ಮಹಿಳೆಯರ ಮತ್ತು ಮಕ್ಕಳ ಶವ ಯಾತ್ರೆಗಳು ಪ್ರತಿದಿನ ಸಂಭವಿಸುತ್ತಿವೆ. ಅಂತಹ ಸಮಾಚಾರಗಳು ನಮ್ಮ ಕಣ್ಣುಗಳ ಮುಂದಿನಿಂದ ಮರೆಯಾಗಿಲ್ಲ.

ಇಸ್ಲಾಮಿನ ಸುಂದರ ಮತ್ತು ಶಾಂತಿಗೆ ಪ್ರೋತ್ಸಾಹ ನೀಡಿದ ತತ್ವಗಳು ವಿವಿಧ ಗುಂಪುಗಳಾಗಿದ್ದ ಮಾನವರನ್ನು ಒಂದು ಭ್ರಾತೃ ಸಂಘವಾಗಿ ರೂಪಿಸಿದ ಬಗ್ಗೆ ಒಬ್ಬ ಕ್ರೈಸ್ತ ಚರಿತ್ರೆಗಾರ ಜೋರ್ಜಿ ಝೈದಾನ್ ಬರೆದದ್ದನ್ನು ಕೊನೆಯದಾಗಿ ನಿಮ್ಮ ಮುಂದೆ ಇರಿಸುತ್ತೇನೆ. ಅವರು ಹೀಗೆ ಬರೆದರು:

"ಮುಸ್ಲಿಮರು ವಿದ್ಯಾಭ್ಯಾಸದಲ್ಲಿ ವೇಗವಾಗಿ ಪ್ರಗತಿ ಗಳಿಸಲು ಮೂಲ ಕಾರಣವೇನೆಂದರೆ, ಇಸ್ಲಾಮಿನ ಖಲೀಫರು ಎಲ್ಲ ಜನಾಂಗಗಳ ಮತ್ತು ಧರ್ಮಗಳ ವಿದ್ವಾಂಸರನ್ನು ಬಹಳ ಗೌರವಿಸುತ್ತಿದ್ದರು ಮತ್ತು ಅವರಿಗೆ ಪಾರಿತೋಷಿಕಗಳನ್ನು ನೀಡುತ್ತಿದ್ದರು. ಅವರಿಗೆ ವಿದ್ವಾಂಸರ ಧರ್ಮದ ಬಗ್ಗೆ, ಅವರ ರಾಷ್ಟ್ರೀಯತೆ, ಜಾತಿ, ವಿಶ್ವಾಸ ಮೊದಲಾದುವುಗಳ ಬಗ್ಗೆ ಲಕ್ಷ್ಯವಿರಲಿಲ್ಲ. ಈ ವಿದ್ವಾಂಸರಲ್ಲಿ, ಕ್ರೈಸ್ತರು, ಯಹೂದಿಯರು, ಸಾಬಿಯನರು, ಜಾಲವಿದ್ಯೆಗಾರರು, ಕಣಿ ಹೇಳುವವರು ಮತ್ತು ಪ್ರತಿಯೊಂದು ಇತರ ಗುಂಪಿನ ಜನರಿದ್ದರು. ಖಲೀಫರು ಈ ಜನರನ್ನು ಬಹಳ ಆದರಭಾವದಿಂದ ಕಾಣುತ್ತಿದ್ದರು. ಮುಸ್ಲಿಮ್ ನಾಯಕರು ಮತ್ತು ಗವರ್ನರ್‌ಗಳಿಗಿದ್ದ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳು ಮುಸ್ಲಿಮೇತರರಿಗೂ ಇದ್ದುವು. (ತಾರಿಖ್ ತಮದ್ದುನಲ್ ಇಸ್ಲಾಮಿ – ಸಂಪುಟ 3 ಪುಟ 194).

ಈ ಉಲ್ಲೇಖವನ್ನು ಓದಿದ ನಂತರ ಯಾರಾದರೂ ಇಸ್ಲಾಮ್ ಶಾಂತಿಯ ಧರ್ಮವಲ್ಲವೆಂದು ಹೇಳುವುದಾದರೆ ಅದು ಘೋರ ಅನ್ಯಾಯವಾಗುವುದು.

ಸೀಮಿತ ಸಮಯದ ಕಾರಣ ನಾನು ನೀಡಿದ ಸಂಕ್ಷಿಪ್ತ ವಿವರಣೆಯಿಂದ ಇಸ್ಲಾಮಿನ ಶಾಂತಿಗೆ ಸಂಬಂಧಿಸಿದ ಉಪದೇಶಗಳು ನಿಮಗೆ ಮನವರಿಕೆಯಾಗಿರಬಹುದೆಂದು ಭಾವಿಸುತ್ತೇನೆ.

ನನ್ನ ಭಾಷಣವನ್ನು ಲಕ್ಷ್ಯವಿಟ್ಟು ಗೌರವ ಭಾವದಿಂದ ಆಲಿಸಿದುದಕ್ಕೋಸ್ಕರ ತಮಗೆ ಕೃತಜ್ಞನಾಗಿದ್ದೇನೆ.

ನಾನು ಇನ್ನೊಮ್ಮೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

# ಇಸ್ಲಾಮಿನ ಧಾರ್ಮಿಕ ಸಹಿಷ್ಣುತೆ ಮತ್ತು ಸ್ವಾತಂತ್ರ್ಯ




**ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋಚ್ಚ ನೇತಾರರಾದ ಪಂಚಮ ಖಲೀಫ, ಯು.ಎಸ್.ಎ.ದ ವರ್ಜೀನಿಯಾದಲ್ಲಿ ಮಸ್‌ರೂರ್ ಮಸ್‌ಜಿದ್ ಉದ್ಘಾಟನೆಯ ಸಂದರ್ಭದಲ್ಲಿ (3–11–2018) ಮಾಡಿದ ಭಾಷಣ.**

*ಹಝ್ರತ್ ಮುಹಮ್ಮದ್ ಪೈಗಂಬರರು[ಸ] ತನ್ನನ್ನು ಭೇಟಿಯಾಗಲು ಆಗಮಿಸಿದ ನಜ್‌ರಾನಿನ ಕ್ರೈಸ್ತ ಜನರನ್ನು ತನ್ನ ಮಸ್‌ಜಿದ್‌ನಲ್ಲಿ ಆರಾಧಿಸಲು ಅಹ್ವಾನಿಸಿ ಅನ್ಯ ಧರ್ಮಗಳ ಬಗ್ಗೆ ಇಸ್ಲಾಮ್ ಹೊಂದಿರುವ ಗೌರವದ ನಿಲುವನ್ನು ಪ್ರಾಯೋಗಿಕವಾಗಿ ಪ್ರದರ್ಶಿಸಿದರು. ಇಲ್ಲಿನ ಹೊಸ ಮಸ್‌ಜಿದ್‌ಗೆ ಸಂಬಂಧಿಸಿದವರು ಸಹ ಗೌರವಿಸುವ ಮತ್ತು ಸಹಕಾರ ನೀಡುವ ನಿಲುವನ್ನು ಅವಲಂಬಿಸುವರೆಂದು ಹಝ್ರತ್ ಖಲೀಫರು ತನ್ನ ಪ್ರತೀಕ್ಷೆಯನ್ನು ತನ್ನ ಭಾಷಣದಲ್ಲಿ ಪ್ರತಿಬಿಂಬಿಸಿದರು.*

ಸಾಂಪ್ರದಾಯಕ ಪ್ರಾರ್ಥನೆಗಳನ್ನು ಮಾಡಿದ ನಂತರ ಹಝ್ರತ್ ಪಂಚಮ ಖಲೀಫರು ಹೀಗೆ ಹೇಳಿದರು: ಎಲ್ಲ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹಿ ವಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲಿರಲಿ.

ನಮ್ಮ ಆಮಂತ್ರಣವನ್ನು ಸ್ವೀಕರಿಸಿ ಈ ಮಸ್‌ಜಿದ್ ಉದ್ಘಾಟನೆಯ ಸಂಭ್ರಮದಲ್ಲಿ ನಮ್ಮೊಂದಿಗೆ ಭಾಗವಹಿಸಲು ಅತಿಥಿಗಳಾಗಿ ಆಗಮಿಸಿದ ನಿಮಗೆಲ್ಲರಿಗೂ ಮೊತ್ತಮೊದಲು ಕೃತಜ್ಞತೆಗಳನ್ನು ಅರ್ಪಿಸಲು ಈ ಸಂದರ್ಭದಲ್ಲಿ ಇಚ್ಛಿಸುತ್ತೇನೆ. ನಿಮಗೆ ಪ್ರಾಮಾಣಿಕವಾಗಿ ಕೃತಜ್ಞತೆ ಅರ್ಪಿಸಬೇಕಾದುದು ನನ್ನ ಧಾರ್ಮಿಕ ಕರ್ತವ್ಯವೂ ಆಗಿದೆ. ಏಕೆಂದರೆ ಇಸ್ಲಾಮಿನ ಪವಿತ್ರ ಪೈಗಂಬರ್ ಮುಹಮ್ಮದ್[ಸ] ಹೀಗೆ ನಮಗೆ ಕಲಿಸಿದ್ದಾರೆ: "ತನ್ನ ಸಹಜೀವಿಗಳಿಗೆ ಕೃತಜ್ಞತೆ ಅರ್ಪಿಸದವನು ಸರ್ವಶಕ್ತನಾದ ದೇವನಿಗೂ ಕೃತಜ್ಞತೆಯುಳ್ಳವನಾಗಲಾರ." ಈ ನಗರದ ನಿವಾಸಿಗಳಲ್ಲಿ ಬಹುಸಂಖ್ಯಾತರು ಮುಸ್ಲಿಮೇತರರಾಗಿದ್ದಾರೆ ಮತ್ತು ಅಹ್ಮದೀ ಮುಸ್ಲಿಮರ ಜನಸಂಖ್ಯೆ ಬಹಳ ಚಿಕ್ಕದಾಗಿದೆ.

ನಮ್ಮ ಜನಸಂಖ್ಯೆ ಬಹಳ ಕಡಿಮೆಯಾಗಿದ್ದರೂ ಇಲ್ಲಿನ ಸ್ಥಳೀಯ ಅಧಿಕಾರಿಗಳು ಮತ್ತು ಇಲ್ಲಿನ ಜನರು ಈ ಮಸ್‌ಜಿದ್ ನಿರ್ಮಿಸಲು ನಮಗೆ ಅನುಮತಿಸಿದುದು ನಿಮ್ಮ ಹೃದಯ ವೈಶಾಲ್ಯವನ್ನೂ ಸಹಿಷ್ಣುತೆಯ ಉನ್ನತಮಟ್ಟವನ್ನೂ ತಾವು ಹೊಂದಿರುವುದರ ದ್ಯೋತಕವಾಗಿದೆ. ನೀವು ಮುಸ್ಲಿಮೇತರರಾಗಿದ್ದರೂ ಇಂದಿನ ಈ ಧಾರ್ಮಿಕ ಸಮಾರಂಭದಲ್ಲಿ ಭಾಗವಹಿಸಲು ಆಗಮಿಸಿದುದು ನಿಮ್ಮ ವಿಶಾಲ ಮನೋಭಾವವನ್ನೂ ಸೂಚಿಸುತ್ತದೆ. ನಿಮ್ಮ ಸಹಿಷ್ಣುತಾ ಮನೋಭಾವದ ಕಾರಣದಿಂದ ನೀವು ಹೊಸ ಸಮುದಾಯಗಳನ್ನು ನಿಮ್ಮ ಸ್ಥಳೀಯ ಸಮಾಜದಲ್ಲಿ ಅಳವಡಿಸಲು ಮತ್ತು ಭಾವೈಕ್ಯ ಹೊಂದುವಂತೆ ಮಾಡಲು ಸಾಧ್ಯವಾಗುತ್ತದೆ.

ಇಂದಿನ ಕಾಲಘಟ್ಟದಲ್ಲಿ ಮುಸ್ಲಿಮರು ಮತ್ತು ಇಸ್ಲಾಮ್ ಸಾಮಾನ್ಯವಾಗಿ ಮೀಡಿಯಾದಿಂದ ಬಹಳ ಮಟ್ಟಿಗೆ ಋಣಾತ್ಮಕವಾಗಿ ಗಮನಿಸಲ್ಪಡುತ್ತವೆ. ಮೀಡಿಯಾದ ಪ್ರತಿಕೂಲ ಪ್ರಸಾರಕ್ಕೆ ಮುಖ್ಯ ಕಾರಣ ಅಲ್ಪಸಂಖ್ಯೆಯ ಮುಸ್ಲಿಮ್ ನಾಮಧಾರಿಗಳು ತೀವ್ರವಾದಿಗಳಾಗಿ ಅತ್ಯಂತ ಜಿಗುಪ್ಸಾತ್ಮಕವಾಗಿ ವರ್ತಿಸುತ್ತಿದ್ದಾರೆ ಮತ್ತು ತಮ್ಮ ದ್ವೇಷಭರಿತ ಕೃತ್ಯಗಳನ್ನು ಇಸ್ಲಾಮ್ ಧರ್ಮದ ಹೆಸರಲ್ಲಿ ಮಾಡುತ್ತಿದ್ದಾರೆ. ಇದರ ಪರಿಣಾಮವಾಗಿ ಅನೇಕ ಮುಸ್ಲಿಮೇತರರು ಇಸ್ಲಾಮ್ ಬಗ್ಗೆ ಭಿನ್ನಾಭಿಪ್ರಾಯಗಳನ್ನೂ ಭಯವನ್ನೂ ಹೊಂದಿದ್ದಾರೆ.

ವಾಸ್ತವಿಕವಾಗಿ ಅವರು ಹೆಚ್ಚು ಹೆಚ್ಚಾಗಿ ಭಾವಿಸುವುದೇನೆಂದರೆ ಇಸ್ಲಾಮ್ ಸಮಾಜಕ್ಕೆ ಬೆದರಿಕೆಯೊಡ್ಡುವ ತೀವ್ರವಾದವನ್ನೂ ಹಿಂಸಾಚಾರವನ್ನೂ ಪ್ರೋತ್ಸಾಹಿಸುವ ಧರ್ಮವಾಗಿದೆ ಎಂದು. ಇಂತಹ ಪರಿಸ್ಥಿತಿಯಲ್ಲಿ ಇಲ್ಲಿನ ಸ್ಥಳೀಯ ಜನರು ಈ ಮಸ್‌ಜಿದ್ ನಿರ್ಮಿಸಲು ಅನುಮತಿಸಿದುದು ಮತ್ತು ನೀವೆಲ್ಲರೂ ನಮ್ಮೊಂದಿಗೆ ಈ ಸಮಾರಂಭದಲ್ಲಿ ಭಾಗವಹಿಸುತ್ತಿರುವುದು ಅತ್ಯಂತ ಪ್ರಶಂಸಾರ್ಹವಾಗಿದೆ. ನಾನು ತಮಗೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಇನ್ನೊಮ್ಮೆ ಅರ್ಪಿಸುತ್ತೇನೆ. ನಾನು ನಿಮಗೆ ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ – ಇಸ್ಲಾಮಿನ ಬಗ್ಗೆ ಮೀಡಿಯಾ ನೀಡುವ ಚಿತ್ರಣ ಇಸ್ಲಾಮ್ ಧರ್ಮದ ನೈಜ ಸ್ಥಿತಿಗೆ ಸಂಪೂರ್ಣ ವಿರುದ್ಧವಾಗಿದೆ.

ಕೆಲವು ಗುಂಪುಗಳು ಮತ್ತು ವ್ಯಕ್ತಿಗಳು ತಮ್ಮ ಹೇಯ ದುಷ್ಕೃತ್ಯಗಳನ್ನು ಸಮರ್ಥಿಸಲು ಇಸ್ಲಾಮಿನ ನಾಮವನ್ನು ಬಳಸುತ್ತಿದ್ದಾರೆ. ಆದರೆ ಅವರ ಹಿಂಸಾಚಾರ ಮತ್ತು ತೀವ್ರವಾದಕ್ಕೆ ಇಸ್ಲಾಮಿನ ನೈಜ ತತ್ವಗಳೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಇಸ್ಲಾಮ್ ಉಪದೇಶಿಸುವುದು ಶಾಂತಿ, ಪ್ರೀತಿ, ಸೌಹಾರ್ದ ಮತ್ತು ಭ್ರಾತೃತ್ವವನ್ನಾಗಿದೆ. ಸತ್ಯವೇನೆಂದರೆ, "ಇಸ್ಲಾಮ್" ಎಂಬ ಅರಬಿ ಶಬ್ದದ ಅರ್ಥ "ಶಾಂತಿ" ಎಂದಾಗಿದೆ. ಇಸ್ಲಾಮ್ ಧರ್ಮದ ಹೆಸರು ಮತ್ತು ಅಸ್ತಿಭಾರ ಶಾಂತಿ ಎಂದಾಗಿರುವಾಗ ಅದು ಸಮಾಜದ ಶಾಂತಿ ಮತ್ತು ನೆಮ್ಮದಿಯನ್ನು ಕೆಡಿಸುವಂತಹದನ್ನು ಅನುಮತಿಸುವುದು ಅಥವಾ ಪ್ರೋತ್ಸಾಹಿಸುವುದು ಅಸಾಧ್ಯವಾಗಿದೆ.

ಅಂತಹ ಧರ್ಮದ ಉಪದೇಶಗಳು ಶಾಂತಿಯನ್ನು ಪೋಷಿಸಬೇಕಾದುದು ಹಾಗೂ ಪ್ರೀತಿ ಮತ್ತು ಕರುಣೆಯನ್ನು ಮಾನವರಲ್ಲಿ ಹರಡುವುದು ಅತ್ಯಾವಶ್ಯಕವಾಗಿದೆ. ಇಸ್ಲಾಮೀ ನಿಯಮಗಳ ಮತ್ತು ಉಪದೇಶಗಳ ಅಧಿಕೃತ ಮೂಲ ಗ್ರಂಥವಾದ ಪವಿತ್ರ ಖುರ್‌ಆನ್‌ನಿಂದ ನಾವು ಕಲಿತುಕೊಂಡದ್ದು ಇವುಗಳನ್ನೇ ಆಗಿದೆ. ಆದಿಯಿಂದ ಅಂತ್ಯದ ತನಕ ಪವಿತ್ರ ಖುರ್‌ಆನ್ ಶಾಂತಿ ಪ್ರತಿಪಾದಿಸುವ ಗ್ರಂಥವಾಗಿದೆ. ಅದರಲ್ಲಿ ಸಾರ್ವಲೌಕಿಕ ಮಾನವೀಯ ಮೌಲ್ಯಗಳನ್ನೂ ಮಾನವರ ಹಕ್ಕುಗಳನ್ನೂ ಪ್ರತಿಪಾದಿಸಲಾಗಿದೆ. ಮಾನವೀಯತೆಯಲ್ಲಿ ಮನುಷ್ಯರನ್ನೆಲ್ಲ ಒಗ್ಗೂಡಿಸಲು ಮತ್ತು ಪ್ರತಿಯೊಬ್ಬ ವ್ಯಕ್ತಿಯು ಸ್ವತಂತ್ರನಾಗಿ, ಸಮಾನತೆಯಿಂದ, ಅನಿರ್ಬಂಧಿತನಾಗಿ, ನ್ಯಾಯನಿಷ್ಠನಾಗಿ ಜೀವಿಸುವ ಖಾತರಿ ನೀಡುತ್ತಿದೆ.

ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಬರೆಯಲಾಗಿದೆ – ಸರ್ವಶಕ್ತ ದೇವನಾದ ಅಲ್ಲಾಹನು ಲೋಕಕ್ಕೆ ಪ್ರವಾದಿಗಳನ್ನು ಕಳುಹಿಸಿ ಮಾನವರಿಗೆ ಮೂಲಭೂತ ಮಾನವೀಯ ಮೌಲ್ಯಗಳನ್ನು ಮತ್ತು ನೈತಿಕತೆಯನ್ನು ಕಲಿಸಿದನು. ಪ್ರವಾದಿಗಳನ್ನು ಕಳುಹಿಸಿದುದರ ಉದ್ದೇಶ ಸರ್ವಶಕ್ತನಾದ ದೇವನ ಮತ್ತು ಅವನ ಸೃಷ್ಟಿಗಳ ಮಧ್ಯೆ ಸಂಬಂಧ ಬೆಳೆಯುವಂತೆ ಮಾಡುವುದು ಮತ್ತು ಮಾನವರು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸುವ ಬಗ್ಗೆ ಅವರ ಗಮನ ಹರಿಸುವುದಾಗಿದೆ. ಈ ಮಹತ್ವಪೂರ್ಣ ಉದ್ದೇಶಗಳನ್ನು ಈಡೇರಿಸಲು ಸರ್ವಶಕ್ತನಾದ ದೇವನು ತನ್ನ ಸಂದೇಶವಾಹಕರನ್ನು ಲೋಕದ ಎಲ್ಲ ಜನಾಂಗಗಳಿಗೆ ಕಳುಹಿಸಿದನು ಎಂದು ಮುಸ್ಲಿಮರಾದ ನಾವು ನಂಬುತ್ತೇವೆ. ಎಲ್ಲ ಪ್ರವಾದಿಗಳು ಅತ್ಯುತ್ತಮ ನೈತಿಕ ಮೌಲ್ಯಗಳನ್ನು ಉಪದೇಶಿಸಿದರು ಮತ್ತು ಅನುಷ್ಠಾನಕ್ಕೆ ತಂದರೆಂದು ಪ್ರಮುಖ ಧರ್ಮಗಳ ಚರಿತ್ರೆಗಳು ಸಾಕ್ಷ್ಯ ಹೇಳುತ್ತವೆ.

ಆದುದರಿಂದ ಇಸ್ಲಾಮಿನ ಉಪದೇಶಗಳು ಮಾನವರನ್ನು ಏಕೀಕರಿಸುತ್ತವೆ ಮತ್ತು ಪರಸ್ಪರ ಪ್ರೀತಿ, ಗೌರವವನ್ನು ಅವರ ಧಾರ್ಮಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಪರಿಗಣಿಸದೆ ಬೆಳೆಸಲು ಪ್ರೋತ್ಸಾಹಿಸುತ್ತವೆ. ಈ ಧರ್ಮವು ಪ್ರತಿಬಂಧಗಳನ್ನು ಮುರಿದು ಹಾಕಿ ಶಾಂತಿಭರಿತ ಸಹಿಷ್ಣುತೆಯಿಂದ ಕೂಡಿದ ಸಂವಾದವನ್ನು ಉತ್ತೇಜಿಸುತ್ತಿದೆ. ಒಬ್ಬ ನೈಜ ಮುಸ್ಲಿಮನು ಅನ್ಯ ಧರ್ಮವನ್ನೂ ಅದರ ಅನುಯಾಯಿಗಳನ್ನೂ ಹಿಂಸಾಚಾರಗಳಿಗೆ ಗುರಿಪಡಿಸುವುದು ಮತ್ತು ವಿರೋಧಿಸುವುದು ಊಹಾತೀತವಾದುದಾಗಿದೆ. ಯಾವುದೇ ಸ್ಥಳದಲ್ಲಿ ಯಾವುದೇ ಕಾಲದಲ್ಲಿ ಇಸ್ಲಾಮ್ ತೀವ್ರವಾದವನ್ನು ಪ್ರೋತ್ಸಾಹಿಸಿರಲಿಲ್ಲ ಮತ್ತು ಯಾವುದೇ ರೀತಿಯ ಹಿಂಸಾಚಾರವನ್ನು ಉತ್ತೇಜಿಸಲೂ ಇಲ್ಲ.

ಎಲ್ಲಿಯಾದರೂ ಯಾವಾಗಲಾದರೂ ಒಬ್ಬ ಮುಸ್ಲಿಮ್ ಭಯೋತ್ಪಾದಕ ಕೃತ್ಯ ನಡೆಸಿದ್ದರೆ ಅಥವಾ ಯಾವುದಾದರೂ ಉಗ್ರವಾದ ಅಥವಾ ಮತಭ್ರಾಂತಿ ಪ್ರಕಟಿಸಿದ್ದರೆ ಅದಕ್ಕೆ ಕಾರಣ ಅವನು ಅಥವಾ ಅವಳು ಇಸ್ಲಾಮ್ ಧರ್ಮದ ನೈಜ ತತ್ವಗಳಿಂದ ಪೂರ್ಣವಾಗಿ ದೂರ ಸರಿದುದಾಗಿದೆ. ಅಂತಹ ಜನರು ಮತ್ತು ಅಂತಹ ಕೃತ್ಯಗಳು ಇಸ್ಲಾಮಿನ ಪವಿತ್ರ ನಾಮವನ್ನು ಅಪಕೀರ್ತಿಗೊಳಪಡಿಸುತ್ತವೆ ಮತ್ತು ಕಳಂಕಿತಗೊಳಿಸುತ್ತವೆ. ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯದಲ್ಲಿ ಸರ್ವಶಕ್ತ ದೇವನಾದ ಅಲ್ಲಾಹನು ತನ್ನನ್ನು ಸರ್ವಲೋಕಗಳ ಪ್ರಭುವೆಂದು ಹೇಳಿದ್ದಾನೆ. ಅವನು ಸರ್ವ ಮಾನವರ ಪರಿಪಾಲಕನಾಗಿದ್ದಾನೆ.

ಇದರ ಅರ್ಥವೇನೆಂದರೆ, ಜನರ ಧರ್ಮ ಮತ್ತು ವಿಶ್ವಾಸವನ್ನು ಪರಿಗಣಿಸದೆ ಸರ್ವಶಕ್ತನಾದ ದೇವನು ಎಲ್ಲರನ್ನೂ ಪರಿಪಾಲನೆ ಮಾಡುತ್ತಾನೆ. ಸರ್ವಶಕ್ತನಾದ ದೇವನ ಕಾರುಣ್ಯ ಮತ್ತು ಅನುಗ್ರಹದ ಕಾರಣದಿಂದ ಅವನ ಅಸ್ತಿತ್ವವನ್ನು ನಿರಾಕರಿಸುವ ನಾಸ್ತಿಕರು ಮತ್ತು ಯಾವುದೇ ಧರ್ಮವನ್ನು ಅವಲಂಬಿಸದವರು ಕೂಡ ಇಹಲೋಕದ ಅನುಗ್ರಹಗಳನ್ನೂ ಪ್ರತಿಫಲಗಳನ್ನೂ ಅನುಭವಿಸುತ್ತಿದ್ದಾರೆ. ಪವಿತ್ರ ಖುರ್‌ಆನ್ ಅಲ್ಲಾಹನನ್ನು ಸರ್ವಲೋಕಗಳ ಪ್ರಭು ಎಂದು ಪ್ರಕಟಿಸುವುದರೊಂದಿಗೆ ಅವನು ಪರಮದಯಾವಂತನೂ ಕಾರುಣ್ಯನಿಧಿಯೂ ಆಗಿದ್ದಾನೆಂದು ಹೇಳುತ್ತಿದೆ. ಇದೇ ರೀತಿ ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು, ಇಸ್ಲಾಮಿನ ಪ್ರವಾದಿ ಮುಹಮ್ಮದ್ ಪೈಗಂಬರ್(ಸ) ಸಕಲಮಾನವರಿಗೆ ಕಾರುಣ್ಯವಾಗಿದ್ದಾರೆ ಎಂದು ಹೇಳಿದ್ದಾನೆ.

ಇಸ್ಲಾಮಿನ ಪೈಗಂಬರರು(ಸ) ತನ್ನ ಜೀವಿತದ ಪ್ರತಿಯೊಂದು ಕ್ಷಣ ಕ್ಷಣದಲ್ಲಿಯೂ ಎಲ್ಲ ಜನರಿಗೆ ಧಾರಾಳ ಪ್ರೀತಿ ಮತ್ತು ಗೌರವ ನೀಡುತ್ತಿದ್ದರೆಂಬುದು ಸಂಶಯಾತೀತವಾಗಿ ಸ್ಪಷ್ಟವಾಗಿದೆ. ಅವರ ಪವಿತ್ರ ಮತ್ತು ಶ್ರೇಷ್ಠ ಹೃದಯ ಸಹಾನುಭೂತಿ ಭರಿತವಾಗಿತ್ತು ಮತ್ತು ಅವರು ಯಾವಾಗಲೂ ಮಾನವರ ಏಳಿಗೆಯನ್ನು ಆಶಿಸುತ್ತಿದ್ದರು ಹಾಗೂ ಅನ್ಯರ ಕಷ್ಟಗಳನ್ನು ನಿವಾರಿಸಲು ಸದಾ ಪರಿಶ್ರಮಿಸುತ್ತಿದ್ದರು. ಎಲ್ಲ ಮನುಷ್ಯರಿಗೆ ಗೌರವ ನೀಡಲು ಮತ್ತು ಮಾನವೀಯ ಮೌಲ್ಯಗಳನ್ನು ಸಂರಕ್ಷಿಸಲು ಅವರು ತನ್ನ ಅನುಯಾಯಿಗಳಿಗೆ ಉಪದೇಶಿಸಿದರು. ಉದಾಹರಣೆಗೆ, ಒಮ್ಮೆ ಅವರು ಕುಳಿತುಕೊಂಡು ಇದ್ದಲ್ಲಿಂದ ಕೂಡಲೇ ಎದ್ದರು. ಒಂದು ಶವಸಂಸ್ಕಾರ ಮೆರವಣಿಗೆ ಸಾಗಿ ಹೋಗುತ್ತಿತ್ತು. ಆಗ ಅವರ ಒಬ್ಬ ಶಿಷ್ಯ ಹೇಳಿದರು– ಅದು ಒಬ್ಬ ಯಹೂದಿಯ ಶವಸಂಸ್ಕಾರ ಮೆರವಣಿಗೆ ಎಂದು. ಆಗ ಇಸ್ಲಾಮಿನ ಪ್ರವಾದಿ ಕೇಳಿದರು: ಅದು ಒಬ್ಬ ಮನುಷ್ಯನದಲ್ಲವೇ?

ಮಾನವರ ಬಗ್ಗೆ ಇಸ್ಲಾಮಿನ ಪೈಗಂಬರರಿಗಿದ್ದ ಹೃತ್ಪೂರ್ವಕ ಪ್ರೀತಿಯನ್ನು ಇದು ಸೂಚಿಸುತ್ತಿದೆ. ಅವರು ತನ್ನ ಅನುಯಾಯಿಗಳಿಗೆ ಅನ್ಯಧರ್ಮದವರೊಂದಿಗೆ ಸಹಾನುಭೂತಿಯಿಂದ ವರ್ತಿಸಲು, ಅವರ ಭಾವನೆಗಳಿಗೆ ಗೌರವ ನೀಡಿ ಅವರ ಆವಶ್ಯಕತೆಗಳನ್ನು ಪರಿಗಣಿಸಲು ಕಲಿಸಿದುದಾಗಿ ಪ್ರಕಟಿಸುತ್ತದೆ.

ಇಸ್ಲಾಮ್ ಧಾರ್ಮಿಕ ಸ್ವಾತಂತ್ರ್ಯ ನೀಡುತ್ತಿದೆಯೋ ಎಂದು ಅನೇಕ ಜನರು ಕೇಳುತ್ತಾರೆ. ಇದಕ್ಕೆ ಉತ್ತರ ನೀಡಲು ಪವಿತ್ರ ಪೈಗಂಬರ್ ಮುಹಮ್ಮದರ(ಸ) ಜೀವಿತದ ಒಂದು ಘಟನೆಯನ್ನು ವಿವರಿಸುವೆನು.

ಅರಬ್ ದೇಶದ ನಜ್ರಾನ್‌ನಿಂದ ಕ್ರೈಸ್ತ ಜನರ ಒಂದು ಪ್ರತಿನಿಧಿ ಸಂಘ ಪವಿತ್ರ ಪೈಗಂಬರ್ ಮುಹಮ್ಮದ್(ಸ)ರನ್ನು ಭೇಟಿಯಾಗಲು ಮದೀನಕ್ಕೆ ಆಗಮಿಸಿದ್ದಿತು. ಸ್ವಲ್ಪ ಸಮಯ ಕಳೆದಾಗ ಆ ಜನರು ತಳಮಳಗೊಂಡಂತೆ ತೋರಿತು. ಆಗ ಪವಿತ್ರ ಪೈಗಂಬರರು ಅವರ ಆತಂಕದ ಕಾರಣವೇನೆಂದು ಕೇಳಿದರು. ಅವರು ಹೇಳಿದರು: ನಮ್ಮ ಪ್ರಾರ್ಥನೆಯ ಸಮಯವಾಗಿದೆ. ನಮಗೆ ಪ್ರಾರ್ಥಿಸಲು ಪ್ರಶಸ್ತವಾದ ಸ್ಥಳವಿಲ್ಲ. ಆಗ ಪವಿತ್ರ ಪೈಗಂಬರರು ಅವರನ್ನು ತನ್ನ ಮಸ್‌ಜಿದ್‌ನಲ್ಲಿ ಅವರ ಆಚಾರ ಪ್ರಕಾರ ಪ್ರಾರ್ಥಿಸಲು ಆಮಂತ್ರಿಸಿದರು. ಈ ಉದಾತ್ತ ಘನವಂತಿಕೆಯ ಉದಾಹರಣೆಯಿಂದ ಪವಿತ್ರ ಪೈಗಂಬರರು ಸಹಿಷ್ಣುತೆ, ಧಾರ್ಮಿಕ ಸ್ವಾತಂತ್ರ್ಯ, ಆರಾಧನೆಯ ಸ್ವಾತಂತ್ರ್ಯ ಮೊದಲಾದುವುಗಳ ಮಾದರಿಯನ್ನು ಸರ್ವ ಮಾನವರಿಗೆ ತೋರಿಸಿಕೊಟ್ಟರು.

ಹೀಗಿದ್ದರೂ ಕೆಲವು ಜನರು ಕೇಳುತ್ತಾರೆ – ಆದಿಕಾಲೀನ ಮುಸ್ಲಿಮರು ಯುದ್ಧಗಳನ್ನು ಮಾಡಿದುದು ಏಕೆಂದು. ನಾನು ಒಂದು

ವಿಷಯವನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಇಸ್ಲಾಮ್, ದೇಶಗಳನ್ನು ಜಯಿಸಲು ಮತ್ತು ಜನರನ್ನು ಬಲಾತ್ಕಾರದಿಂದ ಮುಸ್ಲಿಮರನ್ನಾಗಿ ಮಾಡಲು ಬಲವನ್ನು ಪ್ರಯೋಗಿಸಲು ಎಂದೂ ಅನುಮತಿಸಿರಲಿಲ್ಲ. ಆದಿಕಾಲದ ಮುಸ್ಲಿಮರಿಗೆ ಬಲಪ್ರಯೋಗ ಮಾಡಲು ಅನುಮತಿ ನೀಡಿದ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೇಳಿದೆ – ಅನುಮತಿ ನೀಡಿದುದು ಶಾಂತಿಯನ್ನೂ ಭದ್ರತೆಯನ್ನೂ ಕಾಪಾಡಲಿಕ್ಕೂ ಧಾರ್ಮಿಕ ಸ್ವಾತಂತ್ರ್ಯ ಮತ್ತು ವಿಶ್ವಾಸದ ಸ್ವಾತಂತ್ರ್ಯವನ್ನು ನೀಡಲಿಕ್ಕೂ ಆಗಿದೆ ಎಂದು.

ಪವಿತ್ರ ಖುರ್‌ಆನ್ ವಿವರಿಸಿದೆ. ಬಲಪ್ರಯೋಗ ಮಾಡಲು ಅನುಮತಿಸಿದುದು ಇಸ್ಲಾಮನ್ನು ಮಾತ್ರ ರಕ್ಷಿಸಲಿಕ್ಕಲ್ಲ. ಎಲ್ಲ ಜನರ ಹಕ್ಕುಗಳನ್ನು ರಕ್ಷಿಸಲು, ಅವರಿಗೆ ಇಷ್ಟವಿರುವ ಧರ್ಮದಲ್ಲಿ ಜೀವಿಸಲು ಖಾತರಿ ನೀಡಲು ಈ ಅನುಮತಿ ನೀಡಲಾಗಿದೆ. ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 41ರಲ್ಲಿ ಮುಸ್ಲಿಮರಿಗೆ ಪ್ರತಿರೋಧಾತ್ಮಕ ಯುದ್ಧ ಮಾಡಲು ಅನುಮತಿ ನೀಡಿದ ಬಗ್ಗೆ ಹೀಗೆ ವಿವರಿಸಿದೆ: ಇಸ್ಲಾಮಿನ ವಿರೋಧಿಗಳು ಮುಸ್ಲಿಮರ ವಿರುದ್ಧ ಯುದ್ಧ ಮಾಡುತ್ತಿರುವುದು ವೈಯಕ್ತಿಕ, ರಾಷ್ಟ್ರೀಯ ಅಥವಾ ರಾಜಕೀಯ ಕಾರಣದಿಂದಲ್ಲ. ಅವರು ಧರ್ಮಗಳ ಬಗ್ಗೆ ದ್ವೇಷದ ಕಾರಣದಿಂದಲೇ ಯುದ್ಧಕ್ಕೋಸ್ಕರ ಉತ್ತೇಜಿತರಾಗಿದ್ದಾರೆ.

ಪವಿತ್ರ ಖುರ್‌ಆನಿನ ಈ ವಚನ ಮುಸ್ಲಿಮರಿಗೆ ಎಚ್ಚರಿಕೆ ನೀಡಿದೆ. ದೌರ್ಜನ್ಯವನ್ನೂ ಅನ್ಯಾಯವನ್ನೂ ಕೊನೆಗೊಳಿಸಲು ಬಲವತ್ತಾದ ಕ್ರಮಗಳನ್ನು ಕೈಗೊಳ್ಳದಿದ್ದರೆ ಎಲ್ಲ ಧರ್ಮಗಳು ಮತ್ತು ಧಾರ್ಮಿಕ ಹಾಗೂ ವಿಶ್ವಾಸ ಸ್ವಾತಂತ್ರ್ಯಗಳು ಕೊನೆಗೊಳ್ಳುವುವು. ಈ ವಚನ ಸ್ಪಷ್ಟವಾಗಿ ಹೇಳಿದೆ – ಚರ್ಚುಗಳು, ಯಹೂದಿಯರ ಆರಾಧನಾಲಯಗಳು, ದೇವಸ್ಥಾನಗಳು, ಮಸ್‌ಜಿದ್‌ಗಳು ಮತ್ತು ಇತರ ಆರಾಧನಾಲಯಗಳು ಸಂರಕ್ಷಿಸಲ್ಪಡಲು ವಿರೋಧಿಗಳ ಆಕ್ರಮಣಗಳನ್ನು ಪ್ರತಿರೋಧಿಸದಿದ್ದರೆ ಸಾಧ್ಯವಾಗಲಾರದು.

ಆದುದರಿಂದ ಪವಿತ್ರ ಖುರ್‌ಆನ್ ಸ್ವಾತಂತ್ರ್ಯಗಳನ್ನು ನಿಯಂತ್ರಿಸುವುದಕ್ಕೆ ಅಥವಾ ತಡೆಗಟ್ಟುವುದಕ್ಕೆ ಬದಲಾಗಿ ವಾಸ್ತವಿಕವಾಗಿ ಅದು ಧಾರ್ಮಿಕ ಸ್ವಾತಂತ್ರ್ಯ ಪ್ರತಿಪಾದಿಸುವ ಪ್ರಥಮ ಮತ್ತು ಅಗ್ರಗಣ್ಯ ಸಾರ್ವತ್ರಿಕ ಚಾರ್ಟರ್ ಆಗಿದೆ. ಇಸ್ಲಾಮ್, ವಿಶ್ವಾಸದ ಸ್ವಾತಂತ್ರ್ಯವನ್ನು ಮೂಲಭೂತ ಮಾನವೀಯ ಹಕ್ಕು ಎಂದು ಅಂಗೀಕರಿಸಿದೆ. ಆದುದರಿಂದ ಮಸ್‌ಜಿದ್‌ಗಳು ಧಾರ್ಮಿಕ ಸ್ವಾತಂತ್ರ್ಯದ ಚಿಹ್ನೆಗಳೂ ಪ್ರೀತಿ, ಪರಸ್ಪರ ಗೌರವ ಮತ್ತು ಅನುಕಂಪದ ಪ್ರಕಾಶಿಸುವ ಮಾರ್ಗದರ್ಶಕ ಜ್ಯೋತಿಗಳೂ ಆಗಿವೆ.

ನೀವು ಅಹ್ಮದೀ ಮುಸ್ಲಿಮರೊಂದಿಗೆ ಹಿಂದೆ ಸಂಪರ್ಕಿಸಿದಾಗ ನೀವು ಅವರಿಂದ ಪ್ರೀತಿ ಮತ್ತು ಗೌರವವನ್ನು ಪಡೆದಿರಬಹುದೆಂದು ನಾನು ಖಂಡಿತವಾಗಿಯೂ ಭಾವಿಸುತ್ತೇನೆ. ಈಗ ಈ ಮಸ್‌ಜಿದ್ ಅಧಿಕೃತವಾಗಿ ಉದ್ಘಾಟಿಸಲ್ಪಟ್ಟಿದೆ. ಈ ಭಾವನೆ ವರ್ಧಿಸುವುದು. ಶಾಂತಿ ಮತ್ತು ಮಾನವೀಯತೆಯ ಬಗ್ಗೆ ನಮ್ಮ ಸಂದೇಶ ಉಚ್ಚಧ್ವನಿಯಿಂದ ಮಾರ್ದನಿಗೊಂಡು ಎಲ್ಲ ದಿಕ್ಕುಗಳಲ್ಲಿಯೂ ಪ್ರತಿಧ್ವನಿಸುವುದು. ಈ ಮಸ್‌ಜಿದ್‌ನ ನೆರೆಹೊರೆಯವರ ಹಕ್ಕುಗಳನ್ನು ಈಡೇರಿಸಿ ಕೊಡಲು ಸ್ಥಳೀಯ ಅಹ್ಮದೀ ಮುಸ್ಲಿಮರು ತಮ್ಮ ಪ್ರಯತ್ನಗಳನ್ನು ವರ್ಧಿಸುವರು.

ಪವಿತ್ರ ಖುರ್‌ಆನ್ ನೆರೆಹೊರೆಯವರ ಹಕ್ಕುಗಳನ್ನು ಈಡೇರಿಸಲು ಮತ್ತು ಅವರೊಂದಿಗೆ ಪ್ರೀತಿಯಿಂದ ವರ್ತಿಸಲು ಮುಸ್ಲಿಮರಿಗೆ ಪುನರಾವರ್ತಿಸಿ ಉಪದೇಶಿಸಿದೆ. ನಾವು ನೆರೆಹೊರೆಯವರು ಎಂದು ಹೇಳುವುದು ಮಸ್‌ಜಿದ್‌ಗೆ ಸಮೀಪವಾಗಿ ವಾಸಿಸುವ ಜನರನ್ನು ಮತ್ತು ಅಹ್ಮದಿಯರ ಮನೆಗಳಿಗೆ ಸಮೀಪವಾಗಿ ವಾಸಿಸುವ ಜನರನ್ನು ಮಾತ್ರವಲ್ಲ. ಪವಿತ್ರ ಖುರ್‌ಆನಿನ ಪ್ರಕಾರ ನೆರೆಹೊರೆಯವರ ವಲಯ ವಿಶಾಲವಾಗಿದೆ. ಒಬ್ಬ ವ್ಯಕ್ತಿಯ ಸಹಉದ್ಯೋಗಿಗಳು, ಅಧೀನವಾಗಿರುವ ನೌಕರರು, ಪ್ರಯಾಣ ಕಾಲದ ಜೊತೆಗಾರರು ಮತ್ತು ಬೇರೆ ಅನೇಕ ಜನರು ಈ ವರ್ಗಕ್ಕೆ ಸೇರಿರುತ್ತಾರೆ. ವಾಸ್ತವಿಕವಾಗಿ ಈ ನಗರದ ಎಲ್ಲ ಜನರು ನಮ್ಮ ನೆರೆಹೊರೆಯವರೇ ಆಗಿದ್ದಾರೆ. ಅವರೊಂದಿಗೆ ಪ್ರೀತಿ, ದಯೆ ಮತ್ತು ಔದಾರ್ಯದಿಂದ ವರ್ತಿಸುವುದು ನಮ್ಮ ಧಾರ್ಮಿಕ ಕರ್ತವ್ಯವಾಗಿದೆ.

ಸ್ಥಳೀಯ ಅಹ್ಮದೀ ಮುಸ್ಲಿಮರು ನಾನು ಹೇಳಿದ ಹಾಗೆ ಜೀವಿಸುವವರಾಗಲಿ ಮತ್ತು ಪ್ರತಿದಿನ ನಮ್ಮ ನಡೆ ನುಡಿಗಳಲ್ಲಿ ಇಸ್ಲಾಮಿನ ಮುಖ್ಯ ಸಂದೇಶವಾದ ಪ್ರೀತಿ ಮತ್ತು ಮಾನವೀಯತೆಯನ್ನು ತಮ್ಮ ವ್ಯಕ್ತಿತ್ವಗಳಲ್ಲಿ ಪ್ರತಿಬಿಂಬಿಸುವವರಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಅವರು ಇಸ್ಲಾಮಿನ ಶಾಂತಿ ಮತ್ತು ಸೌಹಾರ್ದತೆಯ ಸಂದೇಶವನ್ನು ಇಲ್ಲಿ ಮಾತ್ರವಲ್ಲ ದೇಶದಾದ್ಯಂತ ಹರಡುವವರಾಗಲಿ.

ಇಲ್ಲಿರುವ ಅಹ್ಮದೀ ಮುಸ್ಲಿಮರು ತಮ್ಮ ನೆರೆಹೊರೆಯವರೊಂದಿಗೆ ಪ್ರೀತಿ ಮತ್ತು ಅನುಭೂತಿಯಿಂದ ವರ್ತಿಸುವವರಾಗಲಿ ಮತ್ತು ಇಸ್ಲಾಮಿನ ಬಗ್ಗೆ ಮುಸ್ಲಿಮೇತರರಲ್ಲಿರಬಹುದಾದ ಭಯ ಮತ್ತು ಆತಂಕ ಬೇಗನೆ ನಿವಾರಣೆ ಹೊಂದುವಂತಾಗಲಿ. ನಮ್ಮ ಅತ್ಯಂತ ಶ್ರೇಷ್ಠ ಗ್ರಂಥವಾದ ಪವಿತ್ರ ಖುರ್‌ಆನಿನ ಶ್ರೇಷ್ಠ ಉಪದೇಶಗಳು ಅಹ್ಮದೀ ಮುಸ್ಲಿಮರಲ್ಲಿ ಪ್ರಕಟವಾಗುವಂತಾಗಲಿ ಮತ್ತು ಸ್ಥಳೀಯ ಜನರು ಇಸ್ಲಾಮ್ ವಾಸ್ತವಿಕವಾಗಿ ಹೇಗಿದೆ ಎಂದು ಅರಿತುಕೊಳ್ಳುವಂತಾಗಲಿ.

ಪವಿತ್ರ ಖುರ್‌ಆನಿನ ಉಪದೇಶಗಳ ಪರಿಪೂರ್ಣ ಪ್ರತೀಕವಾಗಿದ್ದ ಪವಿತ್ರ ಪ್ರವಾದಿ ಮುಹಮ್ಮದ್‌ರ(ಸ) ಔದಾರ್ಯಪೂರ್ಣ ಮತ್ತು ಶಾಂತಿ ಭರಿತ ಸ್ವಭಾವಗುಣಗಳು ಯುನೈಟೆಡ್ ಸ್ಟೇಟ್ಸ್ ಮತ್ತು ಇತರ ದೇಶಗಳ ಜನರು ಅರಿತುಕೊಳ್ಳುವಂತಾಗಲಿ. ಎಲ್ಲ ವಿಶ್ವಾಸಗಳನ್ನು ಹೊಂದಿದ ಎಲ್ಲ ಜನರು ಸ್ಥಳೀಯ ಮಟ್ಟದಲ್ಲಿ, ಪ್ರಾದೇಶಿಕ ಮಟ್ಟದಲ್ಲಿ, ರಾಷ್ಟ್ರೀಯ ಮಟ್ಟದಲ್ಲಿ ಮತ್ತು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಒಗ್ಗೂಡಿ ಲೋಕದಾದ್ಯಂತ ಶಾಂತಿಯನ್ನು ಹರಡುವ ಕಾರ್ಯದಲ್ಲಿ ನಿರತರಾಗಬೇಕೆಂದು ನನ್ನ ಹೃತ್ಪೂರ್ವಕ ಪ್ರಾರ್ಥನೆಯಾಗಿದೆ.

ನಾನು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ನಾವು ಈ ಲೋಕದಿಂದ ಅಗಲಿ ಹೋದ ನಂತರ ನಮ್ಮ ಮಕ್ಕಳು ಮತ್ತು ಮುಂದಿನ ಪೀಳಿಗೆಗಳು ನಮ್ಮನ್ನು ಪ್ರೀತಿ ವಾತ್ಸಲ್ಯಗಳಿಂದ ಸ್ಮರಿಸುವವರಾಗಲಿ. ತಮ್ಮ ಹಿರಿಯರು ಪ್ರೀತಿ, ಶಾಂತಿ ಮತ್ತು ಭ್ರಾತೃತ್ವದ ಭಾವನೆಯನ್ನು ಮಾನವರಲ್ಲಿ ಹರಡಲು ತಮ್ಮಿಂದ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿದರೆಂದು ಮತ್ತು ಶಾಂತಿಭರಿತ ಪ್ರಜ್ಞಾವಂತ ಲೋಕವನ್ನು ಅಗಲಿ ಹೋದರೆಂದು ದೃಢವಾಗಿ ಹೇಳುವವರಾಗಲಿ. ಆದರೆ ಇದಕ್ಕೆ ವಿರುದ್ಧವಾಗಿರುವುದನ್ನು ಅವರು ಯೋಚಿಸುವರೆಂಬುದು ನಮಗೆ ಅಸಹ್ಯವಾಗಿದೆ. ನಮ್ಮ ಮಕ್ಕಳು ನಮ್ಮನ್ನು ತಿರಸ್ಕಾರಭಾವದಿಂದ ಕಾಣುವವರಾಗದಿರಲಿ. ತಮ್ಮ ಭವಿಷ್ಯವನ್ನು ಹಾಳುಗೆಡವಿದ ಯುದ್ಧ ಪ್ರಿಯರೆಂದೂ ಯುದ್ಧ ಮತ್ತು ವಿನಾಶದ ಬಳುವಳಿ ಬಿಟ್ಟು ಹೋದವರೆಂದೂ ನಮ್ಮ ಬಗ್ಗೆ ಅವರು ಯೋಚಿಸುವವರಾಗದಿರಲಿ.

ಆದುದರಿಂದ ನಮ್ಮ ಮುಂದಿನ ಪೀಳಿಗೆಗಳನ್ನು ಸಂರಕ್ಷಿಸಲು ನಾವು ನಮ್ಮ ಭಿನ್ನಾಭಿಪ್ರಾಯಗಳನ್ನು ದೂರಸರಿಸಿ ಪರಸ್ಪರ ಹಕ್ಕುಗಳನ್ನು

**34ನೇ ಪುಟಕ್ಕೆ**

# ಮನುಕುಲದ ರಕ್ಷಣೆಗಾಗಿ ದೇವನೊಂದಿಗೆ ಸಂಬಂಧ ಮತ್ತು ಪ್ರೀತಿ ಅವಶ್ಯ

ಇನ್ಸಾನ್ (ಮನುಷ್ಯ) ಎಂಬ ಅರಬೀ ಪದ ಎರಡು ಪ್ರೇಮಗಳ ಸಮ್ಮಿಳನ ಎಂಬ ಅರ್ಥವನ್ನು ನೀಡುತ್ತದೆ. ಒಂದು ದೇವನೊಡನೆ ಇರುವ ಪ್ರೇಮ; ಮತ್ತೊಂದು ಮನುಷ್ಯನೊಡನೆ ಇರುವ ಪ್ರೇಮ. ಒಬ್ಬ ವ್ಯಕ್ತಿಯ ಹೃದಯದಲ್ಲಿ ದೇವನೊಂದಿಗೆ ಪ್ರೇಮವಿಲ್ಲದೆ ಸೃಷ್ಟಿಗಳೊಂದಿಗೆ ಪ್ರೇಮ ಮತ್ತು ಸಹಾನುಭೂತಿ ಇರುವುದಾದರೆ ಅವನನ್ನು ಪರಿಪೂರ್ಣ ಮನುಷ್ಯ ಎಂದು ಕರೆಯಲಾಗದು. ಅದೇ ರೀತಿಯಲ್ಲಿ ಹೃದಯದಲ್ಲಿ ದೇವನೊಡನೆ ಪ್ರೇಮವಿದ್ದು ಸೃಷ್ಟಿಗಳೊಂದಿಗೆ ಪ್ರೇಮ ಮತ್ತು ಸಹಾನುಭೂತಿ ಇಲ್ಲದ ವ್ಯಕ್ತಿಯೂ ಮನುಷ್ಯ ಎಂದು ಕರೆಯಲ್ಪಡಲು ಅರ್ಹನಲ್ಲ. ಮಾತ್ರವಲ್ಲ, ಅವನ ವಾದವೇ ತಪ್ಪೆಂದು ಸಾಬೀತಾಗುವುದು. ಏಕೆಂದರೆ, ಒಬ್ಬ ವ್ಯಕ್ತಿ ತನ್ನ ಸೃಷ್ಟಿಕರ್ತನೊಂದಿಗೆ ಸಂಬಂಧ ಮತ್ತು ಪ್ರೇಮವಿರಿಸಿಕೊಂಡು ದೇವನ ಸೃಷ್ಟಿಗಳೊಂದಿಗೆ ಸಹಾನುಭೂತಿ ಮತ್ತು ಪ್ರೇಮವಿರಿಸದಿರಲು ಸಾಧ್ಯವಿಲ್ಲ.

ನಾನು ಯಾವುದೇ ಅಲ್ಲಾಹ್, ದೇವರು, ವಾಹೆ ಗುರು, God ಇತ್ಯಾದಿಯಲ್ಲಿ ವಿಶ್ವಾಸವಿರಿಸುವುದಿಲ್ಲವೆಂದೂ ಮನುಷ್ಯಕುಲದೊಂದಿಗೆ ಪ್ರೀತಿ ಮತ್ತು ಸಹಾನುಭೂತಿ ತೋರಿಸುವುದು ಮಾತ್ರವಾಗಿದೆ ನನ್ನ ಧರ್ಮವೆಂದೂ ಒಬ್ಬ ವ್ಯಕ್ತಿ ಹೇಳಬಹುದಾಗಿದೆ. ಇಂದು ಹೆಚ್ಚಾಗಿ ಇದೇ ರೀತಿಯ ಚಿಂತನೆಗಳನ್ನು ಕಾಣಬಹುದಾಗಿದೆ. ಇಂತಹ ಯೋಚನೆಗಳಿರುವ ವ್ಯಕ್ತಿಯನ್ನು ಪರಿಪೂರ್ಣ ಮನುಷ್ಯನೆಂದು ಹೇಳಲಾಗದು. ಏಕೆಂದರೆ ದೇವನೊಡನೆ ಇರುವ ಪ್ರೀತಿಯಿಂದಲೇ ಮನುಷ್ಯನೊಡನೆ ನೈಜ ಪ್ರೀತಿ ಉಂಟಾಗುತ್ತದೆ.

ಕೇವಲ ಮನುಕುಲದೊಂದಿಗೆ ಸಹಾನುಭೂತಿ ಮತ್ತು ಪ್ರೀತಿ ಮನುಷ್ಯತ್ವದ ತಿರುಳು ಎಂದಾದರೆ, ಇಂತಹ ಅಥವಾ ಇದಕ್ಕಿಂತ ಮಿಗಿಲಾದ ಸಹಾನುಭೂತಿಯ ದೃಶ್ಯಗಳನ್ನು ನಾವು ಇತರ ಜೀವಜಾಲಗಳಲ್ಲಿ ಕಾಣುತ್ತಿರುತ್ತೇವೆ. ಈ ಸ್ಥಿತಿಯಲ್ಲಿ ಮನುಷ್ಯನಿಗಿರುವ ಶ್ರೇಷ್ಠತೆ ಏನು? ಪವಿತ್ರ ಖುರ್‌ಆನಿನಲ್ಲಿ ಮನುಷ್ಯನ ಗುಣಪಾಠಕ್ಕಾಗಿ ಒಂದು ಘಟನೆ ವಿವರಿಸಲ್ಪಟ್ಟಿದೆ:

ಹಝ್ರತ್ ಆದಮರ[ಅ] ಎರಡು ಗಂಡುಮಕ್ಕಳಲ್ಲಿ ಒಬ್ಬನು ಮತ್ತೊಬ್ಬನನ್ನು ಕೊಂದನು. ಆಗ ತನ್ನ ಸಹೋದರನ ಮೃತದೇಹವನ್ನು ಹೇಗೆ ಹೂಳಬೇಕೆಂದು ಅವನಿಗೆ ತೋರಿಸಿಕೊಡಲಿಕ್ಕಾಗಿ, ಮಣ್ಣನ್ನು ಕೊರೆಯುತ್ತಿರುವ ಒಂದು ಕಾಗೆಯನ್ನು ಅಲ್ಲಾಹನು ಕಳುಹಿಸಿದನು. ಆಗ ಅವನು ಹೇಳಿದನು: 'ಅಕಟಾ, ಈ ಕಾಗೆಯಂತಾಗಿ ನನ್ನ ಸಹೋದರನ ಮೃತ ದೇಹವನ್ನು ದಫನ ಮಾಡಲು ನನಗೆ ಸಾಧ್ಯವಾಗಲಿಲ್ಲವಲ್ಲಾ! (5:32)

ಆ ಕೊಲೆಗಾರನಿಗೆ ದೇವನೊಂದಿಗೆ ಸಂಬಂಧ ಇದ್ದಿದ್ದರೆ, ದೇವನ ಭಯ ಅಥವಾ ಪ್ರೀತಿ ಅವನ ಹೃದಯದಲ್ಲಿ ಇರುತ್ತಿದ್ದರೆ, ಅವನು ಎಂದಿಗೂ ತನ್ನ ಸಹೋದರನನ್ನು ಕೊಲ್ಲುತ್ತಿರಲಿಲ್ಲ. ಒಟ್ಟಿನಲ್ಲಿ ಇಂದು ಲೋಕದಲ್ಲಿ ಎಲ್ಲ ಕಡೆ ಅಶಾಂತಿ, ಅಸಮಾಧಾನ, ಸ್ವಾರ್ಥ ಮತ್ತು ಭಯೋತ್ಪಾದನೆಯ ಸ್ಥಿತಿ ವ್ಯಾಪಿಸಿದೆ. ತನ್ನ ಯಥಾರ್ಥ ಸೃಷ್ಟಿಕರ್ತನೊಡನೆ ಮನುಷ್ಯನಿಗೆ ಇರಬೇಕಾದ ಸಂಬಂಧ ಮುರಿಯಲ್ಪಟ್ಟಿದೆ ಎಂಬುವುದೇ ಅದರ ಮೂಲ ಮತ್ತು ಮುಖ್ಯವಾದ ಕಾರಣ. ಈ ಸಂಬಂಧವನ್ನು ನೆಲೆನಿಲ್ಲಿಸಿಕ್ಕಾಗಿ ದೇವನು ಪ್ರವಾದಿಗಳು, ಋಷಿಗಳು, ಮುನಿಗಳು ಮತ್ತು ಅವತಾರ ಪುರುಷರನ್ನು

ಕಳುಹಿಸುತ್ತಿರುತ್ತಾನೆ. ಈ ಅಂತಿಮ ಕಾಲಘಟ್ಟದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಂ ಅಹ್ಮದ್‌ರಿಗೆ[ಅ] ಅಲ್ಲಾಹನು ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ದಾಸತ್ವದಲ್ಲಿ ಪ್ರವಾದಿತ್ವದ ಸ್ಥಾನ ಕೊಟ್ಟು, ಮನುಷ್ಯಕುಲದ ಸಂಬಂಧ ದೇವನೊಂದಿಗೆ ಜೋಡಿಸಲು ಲೋಕದ ಸಕಲ ಸಮುದಾಯಗಳಿಗಾಗಿ ಕಳುಹಿಸಿದನು.

ಹಝ್‌ರತ್ ಮಿರ್ಝಾ ಗುಲಾಂ ಅಹ್ಮದ್[ಅ] ಹೇಳುತ್ತಾರೆ: "ದೇವ ಮತ್ತು ಅವನ ಸೃಷ್ಟಿಗಳ ಸಂಬಂಧದಲ್ಲಿ ಉಂಟಾದ ಮಾಲಿನ್ಯವನ್ನು ದೂರ ಮಾಡಿ ಪ್ರೀತಿ ಮತ್ತು ನಿಷ್ಠೆಯ ನಂಟನ್ನು ಪುನಃ ಸ್ಥಾಪಿಸಲಿಕ್ಕಾಗಿ ಹಾಗೂ ಸತ್ಯದ ಪ್ರಕಟಣೆಯಿಂದ ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸಿ ಮೈತ್ರಿಗೆ ಬುನಾದಿ ಹಾಕಲು ಅಲ್ಲಾಹನು ನನ್ನನ್ನು ನಿಯೋಜಿಸಿದ್ದಾನೆ."

(ಲೆಕ್ಚರ್ ಲಾಹೋರ್, ರೂಹಾನೀ ಖಿಝಾಇನ್, ಭಾಗ 20,ಪುಟ 180)

ಜೀವಂತ ದೇವನನ್ನು ಮನುಕುಲಕ್ಕೆ ಪರಿಚಯಪಡಿಸಿ ಕೊಡಲು ತಮ್ಮನ್ನೇ ಮುಂದಿರಿಸುತ್ತಾ ಅವರು ಸ್ಪಷ್ಟವಾಗಿ ಹೀಗೆ ಘೋಷಿಸಿದರು:

"ಎಲ್ಲ ಪ್ರವಾದಿಗಳ ಮುಂದೆ ಪ್ರಕಟವಾಗುತ್ತಿದ್ದ, ಹಝ್‌ರತ್ ಮೂಸಾರ[ಅ] ಮುಂದೆ ತೂರ್ ಪರ್ವತದಲ್ಲಿ ಪ್ರಕಟವಾದ, ಹಝ್‌ರತ್ ಈಸಾ ಮಸೀಹರ ಮುಂದೆ ಶಈರ್ ಬೆಟ್ಟದಲ್ಲಿ ಪ್ರಕಟವಾದ ಮತ್ತು ಹಝ್‌ರತ್ ಮುಹಮ್ಮದ್ ಮುಸ್ತಫಾರ[ಸ] ಮುಂದೆ ಫಾರಾನ್ ಪರ್ವತದಲ್ಲಿ ಪ್ರಕಟವಾದ ಅದೇ ಸರ್ವಶಕ್ತ ಮತ್ತು ಪರಿಶುದ್ಧನಾದ ದೇವನು ನನ್ನ ಮುಂದೆ ಪ್ರಕಟವಾಗಿರುವನು. ಅವನು ನನ್ನೊಂದಿಗೆ ಮಾತನಾಡಿದನು. ಅವನು ಹೇಳಿದನು: 'ಅತ್ಯುನ್ನತನಾದ ನನ್ನ ಆರಾಧನೆಗಾಗಿ ಸಕಲ ಪ್ರವಾದಿಗಳನ್ನು ಕಳುಹಿಸಲಾಗಿತ್ತು. ನಾನು ಏಕನಾದ ಸೃಷ್ಟಿಕರ್ತ ಮತ್ತು ಮಾಲೀಕನಾಗಿರುವೆನು. ನನಗೆ ಸಹಭಾಗಿಯಾಗಿ ಯಾರೂ ಇಲ್ಲ. ನಾನು ಹುಟ್ಟುವುದರಿಂದಲೂ ಮರಣ ಹೊಂದುವುದರಿಂದಲೂ ಪರಿಶುದ್ಧನಾಗಿರುವೆನು."

(ಝಮೀಮ ರಿಸಾಲ ಜಿಹಾದ್, ರೂಹಾನೀ ಖಿಝಾಇನ್, ಭಾಗ 17, ಪುಟ 29)

ಆ ಜೀವಂತ ದೇವನ ಕಡೆಗೆ ಆಮಂತ್ರಿಸುತ್ತಾ ಸ್ಪಷ್ಟವಾಗಿ ಅವರು ಹೇಳುತ್ತಾರೆ:

"ಸರ್ವಶಕ್ತನಾದ ಒಬ್ಬ ದೇವನಿದ್ದಾನೆಂದು ಈಗಲಾದರೂ ದೃಢವಿಶ್ವಾಸ ಹೊಂದದವನು ಎಷ್ಟು ದುರದೃಷ್ಟಶಾಲಿ ಆಗಿರುವನು. ನಮ್ಮ ಸ್ವರ್ಗ ನಮ್ಮ ದೇವನಾಗಿರುವನು. ನಮ್ಮ ಶ್ರೇಷ್ಠ ರಸಾನುಭೂತಿಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ಕಂಡಿದ್ದೇವೆ. ಎಲ್ಲ ಸೌಂದರ್ಯ ಅವನಲ್ಲಿ ನಾವು ದರ್ಶಿಸಿದೆವು. ಜೀವವನ್ನು ಬಲಿಯರ್ಪಿಸುವ ಮೂಲಕ ದೊರಕುವ ನಿಧಿಯಾಗಿರುವುದಾದರೂ ಅದು ಪಡೆಯಲು ಅರ್ಹವಾಗಿದೆ. ಎಲ್ಲವನ್ನೂ ತೆತ್ತು ಖರೀದಿಸುವ ಯೋಗ್ಯವಾದ ರತ್ನ ಇದಾಗಿದೆ. ಓ ಭಾಗ್ಯಹೀನರೇ, ನೀವು ಈ ನೀರಿನ ಝರಿಯ ಕಡೆಗೆ ಓಡಿ ಬನ್ನಿರಿ. ಅದು ನಿಮ್ಮ ದಾಹಕ್ಕೆ ಶಮನ ನೀಡುವುದು. ಅದು ನಿಮ್ಮನ್ನು ರಕ್ಷಿಸುವಂತಹ ಜೀವಿತದ ನೀರ ಧಾರೆಯಾಗಿದೆ. ನಾನು ಏನು ಮಾಡಲಿ? ಯಾವ ರೀತಿ ಈ ಶುಭವಾರ್ತೆಯನ್ನು ಹೃದಯಗಳಲ್ಲಿ ಮೂಡಿಸಲಿ. ನಾನು ಯಾವ ತಮಟೆ ಬಾರಿಸಿ ಬೀದಿಗಳಲ್ಲಿ ಡಂಗುರ ಸಾರಿ ನಿಮಗೆ ಒಬ್ಬ ದೇವನಿದ್ದಾನೆಂದು ಹೇಳುವುದನ್ನು ಆಲಿಸುವಂತೆ ಮಾಡಲಿ. ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಔಷಧಿಯಿಂದ ಚಿಕಿತ್ಸೆ ನಡೆಸಲಿ.

(ಕಿಶ್ತೀ ನೂಹ್, ರೂಹಾನೀ ಖಿಝಾಇನ್ ಭಾಗ 19, ಪುಟ 21, 22)

ಮನುಷ್ಯನು ಹೇಗಾದರೂ ತನ್ನ ಸೃಷ್ಟಿಕರ್ತ ಮತ್ತು ಮಾಲಿಕನಾದ ದೇವನನ್ನು ಗುರುತಿಸಿ ಅವನೊಂದಿಗೆ ಸಂಬಂಧ ಸ್ಥಾಪಿಸಿ ಅವನ ಪ್ರೀತಿ ಗಳಿಸುವಂತಾಗಲು ಸಹಾನುಭೂತಿಯ ಆವೇಶದಿಂದ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ) ಹೇಳುತ್ತಾರೆ:

"ನನ್ನ ಸಹಾನುಭೂತಿಯ ಆವೇಶದ ಮೂಲ ಕಾರಣವೇನೆಂದರೆ, ನಾನು ಚಿನ್ನದ ಒಂದು ಗಣಿ ಅಗೆದು ತೆಗೆದಿದ್ದೇನೆ ಮತ್ತು ರತ್ನಗಳ ಖನಿಜದ ಬಗ್ಗೆ ನನಗೆ ಅರಿವು ಲಭಿಸಿದೆ. ನನಗೆ ಅದೃಷ್ಟದಿಂದ, ಹೊಳೆಯುವ ಒಂದು ಅಮೂಲ್ಯ ವಜ್ರ ಆ ಗಣಿಯಿಂದ ಲಭಿಸಿದೆ. ಅದರ ಬೆಲೆ ಎಷ್ಟು ಅಧಿಕವೆಂದರೆ, ನಾನು ಮನುಕುಲದ ನನ್ನ ಈ ಎಲ್ಲ ಸಹೋದರರಿಗೆ ಅದರ ಬೆಲೆಯನ್ನು ವಿತರಿಸಿದರೆ, ಇಂದು ಲೋಕದಲ್ಲಿ ಅತ್ಯಧಿಕ ಚಿನ್ನ ಮತ್ತು ಬೆಳ್ಳಿಯಿರುವ ವ್ಯಕ್ತಿಗಿಂತ ಹೆಚ್ಚು ಶ್ರೀಮಂತರು ಅವರೆಲ್ಲರೂ ಆಗುವರು. ಆ ವಜ್ರ ಯಾವುದು? ಯಥಾರ್ಥ ದೇವನು. ಅವನನ್ನು ಪಡೆಯುವುದರ ಅರ್ಥ ಅವನನ್ನು ಗುರುತಿಸುವುದು, ಅವನಲ್ಲಿ ಯಥಾರ್ಥವಾದ ವಿಶ್ವಾಸ ಹೊಂದುವುದು, ನೈಜವಾದ ಸ್ನೇಹದೊಂದಿಗೆ ಅವನೊಂದಿಗೆ ಸಂಬಂಧ ಸ್ಥಾಪಿಸುವುದು ಮತ್ತು ನೈಜವಾದ ಅನುಗ್ರಹಗಳನ್ನು ಅವನಿಂದ ಪಡೆಯುವುದಾಗಿದೆ.........ಪ್ರತಿಯೊಂದು ವಸ್ತು ತನ್ನ ವರ್ಗವನ್ನು ಪ್ರೀತಿಸುತ್ತದೆ. ಸ್ವಾರ್ಥ ಸಾಧನೆ ತಲೆಹಾಕದಿದ್ದರೆ ಇರುವೆ ಕೂಡ (ಹೀಗೆ ಮಾಡುತ್ತದೆ). ಒಟ್ಟಿನಲ್ಲಿ, ಎಲ್ಲರಿಗಿಂತ ಹೆಚ್ಚು ಪ್ರೀತಿಸುವುದು ದೇವನ ಕಡೆಗೆ ಕರೆಯುವವನ ಕರ್ತವ್ಯವಾಗಿದೆ. ಆದ್ದರಿಂದ ನಾನು ಮನುಕುಲವನ್ನು ಅತ್ಯಧಿಕವಾಗಿ ಪ್ರೀತಿಸುತ್ತೇನೆ. ಆದರೆ ಅವರ ದುಷ್ಕೃತ್ಯಗಳ, ಎಲ್ಲ ವಿಧದ ದೌರ್ಜನ್ಯ, ದುನರ್ಡತೆ ಮತ್ತು ವಿದ್ರೋಹದ ಶತ್ರುವಾಗಿರುವೆನು. ಯಾವನೇ ವ್ಯಕ್ತಿಯ ಶತ್ರುವಲ್ಲ. ಆದ್ದರಿಂದ ನನಗೆ ಲಭಿಸಿರುವ ಸ್ವರ್ಗದ ಎಲ್ಲ ಭಂಡಾರಗಳ ಮತ್ತು ಅನುಗ್ರಹಗಳ ಕೀಲಿಗೈಯಾದ ಈ ಖಜಾನೆಯನ್ನು ಸ್ನೇಹದ ಆವೇಶದಿಂದ ಮನುಕುಲದ ಮುಂದಿರಿಸುತ್ತೇನೆ."

(ಅರ್‌ಬಈನ್ ಪುಸ್ತಕ ಸಂಖ್ಯೆ 1, ರೂಹಾನೀ ಖಝಾಇನ್ – ಭಾಗ 17, ಪುಟ 344, 345)

ಆದರಣೀಯ ಓದುಗರೇ, ಅಹ್ಮದಿಯ್ಯತ್ ಅಥವಾ ನೈಜ ಇಸ್ಲಾಮ್ ಒಂದು ಕಡೆ ಮನುಷ್ಯನ ಸಂಬಂಧವನ್ನು ದೇವನೊಂದಿಗೆ ಸರಿಯಾದ ರೀತಿಯಲ್ಲಿ ಸುದೃಢಗೊಳಿಸಲು ಪ್ರಯತ್ನಿಸುತ್ತದೆ. ಮತ್ತೊಂದೆಡೆ ಮನುಷ್ಯನು ಮನುಷ್ಯನನ್ನು ಪ್ರೀತಿಸಲು ಮತ್ತು ಸಹಾನುಭೂತಿ ತೋರಿಸಲು ತಾಕೀತು ಮಾಡುತ್ತದೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರ ಈ ಉಪದೇಶ ನಮಗೆ ಮಾರ್ಗದೀಪವಾಗಿದೆ:

"ನಮ್ಮ ತತ್ವ ಸಕಲ ಮನುಷ್ಯರೊಂದಿಗೆ ಸಹಾನುಭೂತಿ ತೋರಿಸುವುದಾಗಿದೆ. ಒಬ್ಬ ವ್ಯಕ್ತಿ ಒಬ್ಬ ಹಿಂದೂ ನೆರೆಯವನ ಮನೆಗೆ ಬೆಂಕಿ ಹತ್ತಿದ್ದಾಗಿ ನೋಡಿಯೂ ಬೆಂಕಿ ನಂದಿಸುವುದರಲ್ಲಿ ನೆರವಾಗಲು ಮುಂದಾಗುವುದಿಲ್ಲವಾದರೆ, ನಾನು ಸತ್ಯವಾಗಿಯೂ ಹೇಳುತ್ತೇನೆ – ಅವನು ನನ್ನ ಪೈಕಿಯವನಲ್ಲ. ಒಬ್ಬ ಕ್ರೈಸ್ತನನ್ನು ಯಾರಾದರೂ ಕೊಲೆ ಮಾಡುತ್ತಿರುವುದಾಗಿ ನಮ್ಮ ಶಿಷ್ಯರಲ್ಲಿ ಓರ್ವನು ನೋಡಿಯೂ ಅವನನ್ನು ರಕ್ಷಿಸಲು ಪ್ರಯತ್ನಿಸುವುದಿಲ್ಲವಾದರೆ, ಅವನು ನಮ್ಮ ಪೈಕಿಯವನಲ್ಲ ಎಂದು ನಾನು ಖಚಿತವಾಗಿ ಹೇಳುತ್ತೇನೆ."

(ಸಿರಾಜುಮುನೀರ್, ರೂಹಾನಿ ಖಝಾಇನ್ – ಭಾಗ 12, ಪುಟ 28)

ಕೊನೆಯದಾಗಿ, ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ (ಅಹ್ಮದಿಯಾ ಜಮಾಅತಿನ ಐದನೇ ಖಲೀಫ) ಫೆಬ್ರವರಿ 11, 2014ರಂದು ಗಿಲ್ಡ್ ಹಾಲ್ ಲಂಡನಿನಲ್ಲಿ ಸರ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಭವ್ಯ ಭಾಷಣದಿಂದ ಒಂದು ತುಣುಕನ್ನು ಮುಂದಿರಿಸುತ್ತೇವೆ. ಅವರು ಹೇಳುತ್ತಾರೆ:

"ತಮ್ಮನ್ನು ತಾವು ರಕ್ಷಿಸಲಿಕ್ಕಾಗಿ ಮತ್ತು ಮನುಷ್ಯಕುಲದ ಸಂರಕ್ಷಣೆಗಾಗಿ ಅಲ್ಲಾಹನ ಕಡೆಗೆ ಮರಳಬೇಕಾದುದು ಅನಿವಾರ್ಯವಾಗಿದೆ. ಹಝ್ರತ್ ಮೂಸಾ(ಅ) ಹಾಗೂ ಅವರ ಸಮುದಾಯವನ್ನು ಮರೆಯದ, ಹಝ್ರತ್ ಈಸಾ(ಅ)

ಮತ್ತು ಅವರ ಅನುಯಾಯಿಗಳನ್ನು ಮರೆಯದ ಆ ಜೀವಂತ ದೇವನೊಂದಿಗೆ ಸಂಬಂಧ ಇರಿಸಬೇಕಾದ ಆವಶ್ಯಕತೆ ಇದೆ, ಅವನು ಯಥಾರ್ಥ ಮುಸ್ಲಿಮರನ್ನು ಅವನ ಅನುಗ್ರಹ ಪಡೆಯುವುದರಿಂದ ವಂಚಿತಗೊಳಿಸಲಿಲ್ಲ. ಅದೇ ರೀತಿ ಪ್ರಾರ್ಥನೆ ಸ್ವೀಕರಿಸುವುದರಿಂದಲೂ ವಂಚಿತಗೊಳಿಸಲಿಲ್ಲ."

ಇವು ಗತಕಾಲದ ಕಥೆಗಳಲ್ಲ. ಬದಲಾಗಿ, ದೇವನ ಅಸ್ತಿತ್ವ ಸದಾ ನೆಲೆನಿಲ್ಲುವಂಥದ್ದಾಗಿದೆ. ಅವನು ಇಂದು ಸಹ ಜೀವಂತವಾಗಿರುವನು. ದೇವನು ತನ್ನ ವರಿಷ್ಠ ದಾಸರೊಂದಿಗೆ ಸಂಭಾಷಣೆ ಮಾಡುತ್ತಾನೆ ಮತ್ತು ಅವರಿಗೆ ತನ್ನ ಸತ್ಯ ದೃಷ್ಟಾಂತಗಳನ್ನು ತೋರಿಸುತ್ತಾನೆ ಎಂದು ಅಹ್ಮದಿಯಾ ಜಮಾಅತಿನ ಸ್ಥಾಪಕರು ನಮಗೆ ಕಲಿಸಿ ಕೊಟ್ಟಿದ್ದಾರೆ. ಆದ್ದರಿಂದ ಈ ಕಾಲದ ಇಮಾಮಿನ ಮಾತಿಗೆ ಕಿವಿಗೊಡುವುದು ನಮ್ಮ ಜವಾಬ್ದಾರಿಯಾಗಿದೆ. ನಾವು ಯಥಾರ್ಥ ರೀತಿಯಲ್ಲಿ ನಮ್ಮ ದೇವನನ್ನು ಗುರುತಿಸುವವರಾಗಬೇಕು. ಅಲ್ಲಾಹನು ಹಝ್ರತ್ ವಾಗ್ದತ್ತ ಮಸೀಹರ(ಅ) ಮೂಲಕ ದೃಷ್ಟಾಂತಗಳನ್ನು ತೋರಿಸಿದ್ದನು ಮತ್ತು ಈಗಲೂ ತೋರಿಸುತ್ತಿದ್ದಾನೆ ಎಂಬುದಕ್ಕೆ ನಾವು ಸಾಕ್ಷಿಗಳಾಗಿದ್ದೇವೆ."

ಒಟ್ಟಿನಲ್ಲಿ, ನಾವಿಂದು ನಮ್ಮ ನಾಡಿನ ಎಲ್ಲ ಸಹೋದರರನ್ನು ಸಂಬೋಧಿಸಿ, ಮನುಷ್ಯತ್ವಕ್ಕಾಗಿ ಏಕದೇವನ ಸಲುವಾಗಿ ವೇದನೆಭರಿತ ಮನವಿ ಮಾಡುತ್ತಿದ್ದೇವೆ. ಬನ್ನಿರಿ, ಏಕದೇವನಿಗಾಗಿ ತಮ್ಮ ಎಲ್ಲ ದ್ವೇಷ ಮತ್ತು ಮತ್ಸರಗಳನ್ನು ದೂರ ಮಾಡಿ, ಪರಸ್ಪರ ಪ್ರೀತಿ ಮತ್ತು ಪ್ರೇಮದಲ್ಲಿ ಉನ್ನತ್ತರಾಗಿ ಮನುಷ್ಯರ ಐಕ್ಯವನ್ನು ಸ್ಥಾಪಿಸಲು ಅಹ್ಮದಿಯಾ ಜಮಾಅತಿನೊಂದಿಗೆ ಧ್ವನಿಗೂಡಿಸಿ ತಮ್ಮ ಹೆಜ್ಜೆಯನ್ನು ಮುಂದಿಡೋಣ. ಭಾರತದಲ್ಲಿ ಮಾತ್ರವಲ್ಲ, ಲೋಕದ ಎಲ್ಲ ರಾಷ್ಟ್ರಗಳಲ್ಲಿ ಮೈತ್ರಿ, ಶಾಂತಿ, ಸಮಾಧಾನ, ಪ್ರೀತಿ ಮತ್ತು ಪ್ರೇಮದ ವಾತಾವರಣ ಸೃಷ್ಟಿಯಾಗಲಿ. ಈಗಲೂ ನಾವು ಈ ಮುಖ್ಯ ಮತ್ತು ಮೂಲ ಸತ್ಯವನ್ನು ಕಡೆಗಣಿಸಿದರೆ ಲೋಕದ ಶಾಂತಿ ಸಮಾಧಾನಕ್ಕೆ ಮುಂದೆ ಯಾವುದೇ ಭರವಸೆ ಇಲ್ಲ.

ہم اپنا فرض دوستو اب کر چکے ادا
اب بھی اگر نہ سمجھو تو سمجھائے گا خدا

ಸ್ನೇಹಿತರೇ, ನಾವು ನಮ್ಮ ಕರ್ತವ್ಯವನ್ನು ಈಡೇರಿಸಿದ್ದೇವೆ
ಈಗಲೂ ಮನವರಿಕೆ ಮಾಡದಿದ್ದರೆ ದೇವನೇ ಮನವರಿಕೆ ಮಾಡಿಸುವನು.

**Contact Details:** Ahmadiyya Muslim Jama'at India

**Head Office**

Shoba Noor-ul-Islam
Qadian, Distt. Gurdaspur, Punjab, Pin:143516

**Branch Office:**

No1 3rd Cross, Wilson Garden, Bangalore-560027 | Darussalam, Near Railway, Level Crossing, Pandeshwar-575001

www.alislam.org /www.ahmadiyyamuslimjamaat.in
Feedback www.ahmadiyyamuslimjamaat.in/feedback
National Toll Free Number: 1800 3010 2131 (9:00AM to 10:30PM)

MUSLIM TELEVISION AHMADIYYA INTERNATIONAL
www.mta.tv
Satellite: Asia sat 7s, Degree: 105.5 East, Frequency 3760 Symbol Rate: 26000 FEC: Auto / C.Band 4 Feet Dish Antenna
EutelsatE70B,Degree:70° East,Frequency:11211,SymbolRate:5111,Polarization-HorizontalQPSK-1/2,KU Band 2 feet Dish Antenna

# ಹಜ್ಜ್ ಕರ್ಮದ ಮಹತ್ವ

* ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಹಜ್ಜ್ ಇಸ್ಲಾಮಿನ ಅತಿ ಪ್ರಧಾನವಾದೊಂದು ಆರಾಧನಾಕರ್ಮವಾಗಿದೆ. ಲಕ್ಷಗಟ್ಟಲೆ ಮುಸ್ಲಿಮರು ಲೋಕದ ನಾನಾ ಕಡೆಗಳಿಂದ ಬಂದು ಹಜ್ಜ್ ವೇಳೆಯಲ್ಲಿ ಪವಿತ್ರ ಮಕ್ಕದಲ್ಲಿ ಒಟ್ಟುಗೂಡುತ್ತಾರೆ. ಅವರು ವಿವಿಧ ರಾಜ್ಯದವರೂ ವಿವಿಧ ರಾಷ್ಟ್ರಗಳಿಂದ ಬಂದವರೂ ವಿವಿಧ ಆಚಾರ ಸಂಪ್ರದಾಯಗಳನ್ನು ಕೈಗೊಂಡವರೂ ವಿವಿಧ ಭಾಷೆಗಳನ್ನಾಡುವವರೂ ಪರಸ್ಪರ ಪರಿಚಯವಿಲ್ಲದವರೂ ಆಗಿರಬಹುದು. ಭಾಷೆಯ ವ್ಯತ್ಯಾಸವಾಗಲಿ, ವಿಶ್ವಾಸಪರವಾದ ಭಿನ್ನತೆಯಾಗಲಿ, ವರ್ಣ ವರ್ಗ ಭೇದವಾಗಲಿ, ವೈಚಾರಿಕ ಅಂತರವಾಗಲಿ, ಕಾಲಾವಸ್ಥೆಯ ಏರುಪೇರಾಗಲಿ ಯಾವುದನ್ನೂ ಗಣ್ಯ ಮಾಡದ ರೀತಿಯಲ್ಲಿ ಮುಸಲ್ಮಾನರ ಹೃದಯಗಳನ್ನು ಏಕದೇವತತ್ವ ಐಕ್ಯಗೊಳಿಸಿದೆಯೆಂದೂ ದೇವನ ಕರೆಗೆ ಓಗೊಟ್ಟು ಯಾವುದೇ ತ್ಯಾಗಕ್ಕೂ ಸನ್ನದ್ಧರಾಗಿ ತಾವು ಒಂದು ಕಡೆಯಲ್ಲಿ ಸಮ್ಮೇಳಿಸಿರುತ್ತೇವೆಂದೂ ಅವರು ಆ ಮೂಲಕ ಘೋಷಿಸುತ್ತಾರೆ. ಅದೇ ಪ್ರಕಾರ ಮುಸ್ಲಿಮರು ತಮ್ಮ ಈ ವರ್ತನೆ ಮುಖಾಂತರ ಬಾಹ್ಯವಾದ ಹಜ್ಜ್ ಕರ್ಮ ಅಲ್ಲದೆ ಬೇರೊಂದು ವಿಚಾರ ಸಹ ಬಹಿರಂಗಪಡಿಸುತ್ತಾರೆ. ಅದೇನೆಂದರೆ, ಕಅ್‌ಬ ದೇವಮಂದಿರದ ಸಂರಕ್ಷಣೆಗಾಗಿ ತಾವು ಜೀವಾರ್ಪಣೆ ಮಾಡಲು ಸನ್ನದ್ಧರೆಂದು. ಮುಸ್ಲಿಮರಲ್ಲಿ ಈ ಚೇತನ ಎಷ್ಟರ ವರೆಗೆ ಬಾಕಿಯಿರುವುದೋ ಅಷ್ಟರ ತನಕ ಲೋಕದಲ್ಲಿ ಯಾವ ಶತ್ರುವಿಗೂ ಕಅ್‌ಬದ ಮೇಲೆ ಕಣ್ಣಿಡಲಿಕ್ಕಾಗಲಿ, ಮುಸಲ್ಮಾನರ ಐಕ್ಯವನ್ನು ಶಿಥಿಲೀಕರಿಸಲಿಕ್ಕಾಗಲಿ ಸಾಧ್ಯವಾಗದು. ಕಅ್‌ಬ ನೆಲೆಗೊಂಡಿರುವ ಕಾಲದ ವರೆಗೆ ಮುಸ್ಲಿಂ ಲೋಕದ ಐಕ್ಯವೂ ಬಾಕಿಯುಳಿದೀತು.

ಜಗತ್ತಿನ ಯಾವ್ಯಾವ ಭಾಗಗಳಲ್ಲಿ ದೇವನು ಮನುಷ್ಯರನ್ನು ಹರಡಿಸಿದ್ದಾನೆಂದು ಹಜ್ಜ್ ಮೂಲಕ ಲೋಕಕ್ಕೆ ಕಾಣಲು ಸಾಧ್ಯವಾಗುತ್ತದೆ. ವಿಜನವಾದ ಒಂದು ಮರುಭೂಮಿಯಿಂದ ಎದ್ದ ಆ ಇಸ್ಲಾಮಿಕ ಶಬ್ದ, ಸ್ವಜನರೇ ಅದನ್ನು ಕೇಳಲು ಸಿದ್ಧರಿಲ್ಲದಿದ್ದರೂ ಆ ಶಬ್ದವನ್ನು ಎತ್ತಿದ ವ್ಯಕ್ತಿಗೆ ಎಲ್ಲ ತರ ಕಷ್ಟಾನುಭವಗಳನ್ನು ಸಹಿಸಬೇಕಾಗಿ ಬಂದಿದ್ದರೂ, ಪ್ರಪಂಚದ ಎಲ್ಲ ಭಾಗಗಳಲ್ಲೂ ಪ್ರತಿಧ್ವನಿಸಿ ಲಕ್ಷಗಟ್ಟಲೆ ಜನರು ಸಮ್ಮೇಳಿಸಲಿಕ್ಕೆ ಹೇತುವಾಯಿತು. ಅವರು ಅಲ್ಲಾಹನ ಅತಿ ಮಹತ್ತಾದ ಒಂದು ದೃಷ್ಟಾಂತಕ್ಕೆ ದೃಕ್ಸಾಕ್ಷಿಗಳಾಗಿದ್ದು ಅದು ಅವರ ಸತ್ಯ ವಿಶ್ವಾಸವನ್ನು ದೃಢಪಡಿಸಿ ನವಚೈತನ್ಯವನ್ನು ನೀಡುತ್ತದೆ. ಮುಹಮ್ಮದ್ ಮುಸ್ತಫಾ[ಸ] ಎಲ್ಲಿ ಭೂಜಾತರಾದರೋ, ಲೋಕದಲ್ಲೆಲ್ಲ ಪ್ರತಿಧ್ವನಿಯ ಅಲೆಯೆಬ್ಬಿಸಿದ ಆ ಶಬ್ದ ಎಲ್ಲಿ ಮೊಳಗಿತೋ, ಆ ಸ್ಥಳಕ್ಕೆ ವಿದೂರ ವಿದೂರ ದೇಶಗಳಿಂದ ಲಕ್ಷಾನುಲಕ್ಷ ಜನರು ಆಕರ್ಷಿಸಲ್ಪಡುತ್ತಾರೆ. ಯಾವ ಪ್ರದೇಶದಲ್ಲಿ ಜನರ ದೌರ್ಜನ್ಯ ಮತ್ತು ಅತ್ಯಾಚಾರ ನಿಮಿತ್ತ ಮುಸ್ಲಿಮರಿಗೆ ತಮ್ಮ ತಾಯಿನಾಡು ಪರಿತ್ಯಜಿಸಬೇಕಾಯಿತೋ, ಎಲ್ಲಿ "ಲಾಇಲಾಹ ಇಲ್ಲಲ್ಲಾಹ್" ಎಂಬ ಧ್ವನಿ ಮೊಳಗಿಸಲು ಅನುಮತಿ ಇರಲಿಲ್ಲವೋ ಅದೇ ಮಕ್ಕ ನಗರದಲ್ಲಿ ಜನರು ಗುಂಪು ಗುಂಪಾಗಿ ಸಮ್ಮೇಳಿಸಿ ಪ್ರತಿಯೊಬ್ಬನ ನಾಲಗೆಯಿಂದ "ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್, ಲಾ ಇಲಾಹ ಇಲ್ಲಲ್ಲಾಹು ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್ ವಲಿಲ್ಲಾಹಿಲ್ ಹಮ್ದ್" ಮತ್ತು "ಲಬ್ಬೈಕ ಅಲ್ಲಾಹುಮ್ಮ ಲಬ್ಬೈಕ" ಎಂಬ ಶಬ್ದಗಳು ಹೊರಟು ಮುಗಿಲು ಮುಟ್ಟುತ್ತವೆ. ಅಲ್ಲಾಹನ ಮುಂದೆ ಸನ್ನದ್ಧರಾಗಿ ಅವರು ಈ ರೀತಿ ಹೇಳುವಂತೆ ತೋಚುವುದು: "ಹೇ ನಮ್ಮ ರಕ್ಷಕನೇ, ನಾವಿದೋ ನಿನ್ನ ಮುಂದೆ ಹಾಜರಾಗಿದ್ದೇವೆ. ನಿನಗೆ ಸಮಾನ ಯಾರೂ ಇಲ್ಲವೆಂದು ನಾವು ಸಾರುತ್ತೇವೆ. ದಾಸರನ್ನು ಕರೆದು ಒಂದುಗೂಡಿಸುವ ಅಧಿಕಾರ ನಿನಗೆ ಮಾತ್ರವೇ ಇದೆ."

ಪ್ರತಿ ವರ್ಷ ಲಕ್ಷೋಪಲಕ್ಷ ಮುಸ್ಲಿಮರು ಸಮ್ಮೇಳಿಸುವ ಪವಿತ್ರ ಕ್ಷೇತ್ರವಾಗಿದೆ ಮಕ್ಕ. ಪ್ರವಾದಿ ಮುಹಮ್ಮದ್[ಸ] ತಂದ ಧರ್ಮ ಇಂದು ಸಹ ಜೀವಂತವಿದೆಯೆಂದು ಅವರು ಆ ಮೂಲಕ ಸಾಕ್ಷ್ಯಾತ್ಕರಿಸುತ್ತಾರೆ. ಪೈಗಂಬರರ ದಾಸವೃಂದವು ಇಂದು ಸಹ ಆ ಶಬ್ದವನ್ನು ಎತ್ತರಿಸಲು ಬದುಕಿರುತ್ತದೆ. ಇಸ್ಲಾಮಿನ ಸಿರಗಳಲ್ಲಿ ಜೀವ ರಕ್ತ ಇಂದು ಕೂಡ ಹರಿಯುತ್ತಿದೆಯೆಂದಾಗಿದೆ ಲೋಕಕ್ಕೆ ಹಜ್ಜ್ ನೀಡುವ ಸಂದೇಶ. ಪ್ರವಾದಿ ಮುಹಮ್ಮದ್[ಸ]ರವರ ಮೇಲೆ ಪ್ರೀತಿಯಿರುವ ಜನರು ಇಸ್ಲಾಮಿಕ ಕೇಂದ್ರವಾದ ಪವಿತ್ರ ಮಕ್ಕದಲ್ಲಿ ಒಟ್ಟುಗೂಡುತ್ತಾರೆ. ಇಸ್ಲಾಂ ಧರ್ಮದೊಡನೆ ಮತ್ತು ಮುಹಮ್ಮದ್ ಪೈಗಂಬರರ ವ್ಯಕ್ತಿತ್ವದೊಡನೆ ತಮಗಿರುವ ಸಂಬಂಧವನ್ನು ಅವರು ಆ ಮೂಲಕ ಬಹಿರಂಗಪಡಿಸುತ್ತಾರೆ. ತಾವೆಷ್ಟು ದುರ್ಬಲರಾಗಿದ್ದರೂ ಮುಹಮ್ಮದ್ ಪೈಗಂಬರರ[ಸ] ಹೆಸರಿನಲ್ಲಿ ಅಭಿಮಾನಪಡುವವರೆಂದೂ ಸಾಮುದಾಯಿಕ ಜೀವಿತದ ಚೈತನ್ಯ ತಮ್ಮಲ್ಲಿ ಇಂದು ಸಹ ನೆಲೆಗೊಂಡಿರುತ್ತದೆಂದೂ ಅವರು ಆ ಮೂಲಕ ಸ್ಪಷ್ಟಪಡಿಸುತ್ತಾರೆ. ಆದ್ದರಿಂದಲೇ ಇಸ್ಲಾಂ ಧರ್ಮವು ಪ್ರಾರ್ಥನೆ, ವ್ರತ, ಝಕಾತಿನಂತೆ ಹಜ್ಜ್ ಕರ್ಮವನ್ನೂ ಕಡ್ಡಾಯಗೊಳಿಸಿದೆ. ಮನುಷ್ಯರು ಎಲ್ಲ ವಿಧ ಬಂಧಗಳನ್ನು ಬೇರ್ಪಡಿಸಿ ಹೃದಯವನ್ನು ದೇವನಲ್ಲಿ ಲೀನಗೊಳಿಸಬೇಕಾಗಿದೆಯೆಂದಷ್ಟೇ ಹಜ್ಜ್ ಕರ್ಮದ ಆಧ್ಯಾತ್ಮ ಲಕ್ಷ್ಯ. ಈ ಉದ್ದೇಶವನ್ನು ಈಡೇರಿಸಲಿಕ್ಕಾಗಿ ಹಜ್ಜ್ ಕರ್ಮವನ್ನು ವಿಧಿಸಲಾಗಿದ್ದು. ಸಾಮರ್ಥ್ಯವಿದ್ದವರು ತಮ್ಮ ಮನೆಮಾರುಗಳನ್ನು ಬಿಟ್ಟು ಪರಿಶುದ್ಧ ಮಕ್ಕದಲ್ಲಿ ಸಮ್ಮೇಳಿಸಬೇಕೆಂದು ಆದೇಶಿಸಿ, ಹಾಗೆ ಸ್ವಂತ ರಾಜ್ಯವನ್ನೂ ಬಂಧು ಮಿತ್ರಾದಿಗಳನ್ನೂ ಒಡಹುಟ್ಟಿದವರನ್ನೆಲ್ಲ ತ್ಯಜಿಸಲು ತಯಾರಾಗಬೇಕೆಂದು ಆಹ್ವಾನಿಸಲಾಗಿದೆ.

ನಾಲ್ಕು ಸಾವಿರ ವರ್ಷಗಳ ಮೊದಲು ಪ್ರವಾದಿ ಇಬ್ರಾಹೀಂ[ಅ] ಗೈದ ಮಹತ್ತಾದೊಂದು ತ್ಯಾಗದ ಕುರಿತು ಸ್ಮರಣೆಯನ್ನು ಹಜ್ಜ್ ನಮ್ಮ ಸ್ಮೃತಿಪಟಲದಲ್ಲಿ ಉಂಟುಮಾಡುತ್ತದೆ. ಆ ತ್ಯಾಗದ ಮಹತ್ತಾದ ಫಲಗಳನ್ನು ನಾವಿಂದು ಸಹ ಕಾಣುತ್ತಿದ್ದೇವೆ. ಊರ್ ಎಂಬ ರಾಜ್ಯದಲ್ಲಿ ನಾಲ್ಕು ಸಾವಿರವರ್ಷ ಮುಂಚೆ ಒಬ್ಬ ವಿಗ್ರಹಾರಾಧಕನ ಗೃಹದಲ್ಲಿ ಒಂದು ಶಿಶು ಹುಟ್ಟಿತು. ರಾತ್ರಿ ಹಗಲು ಮೂರ್ತಿ ಸೇವೆ ಮಾಡುತ್ತಾ ಬಿಂಬಾರಾಧನೆಯಲ್ಲಿ ಮುಳುಗಿದ್ದ ಒಂದು ಸಮಾಜದಲ್ಲಿ ಆ ಮಗು ಬೆಳೆಯಿತು. ಪ್ರಕಾಶೋಜ್ವಲವಾದ ಆತ್ಮದೊಂದಿಗೆ ಆ ಶಿಶು ಜನ್ಮತಾಳಿತ್ತು. ಬಾಲ್ಯದಲ್ಲೇ ವಿಗ್ರಹಗಳನ್ನು ಆ ಮಗು ದ್ವೇಷಿಸಿತು. ಲೋಕದಲ್ಲಿ ಅಧರ್ಮವೂ ಮಾರ್ಗಭ್ರಷ್ಟತೆಯೂ ವೃದ್ಧಿಗೊಂಡಾಗ, ದೇವನು ಅವನ ನಿಯಮಾನುಸಾರ ಒಬ್ಬ ಸುಧಾರಕನನ್ನು ನಿಯೋಜಿಸಲು ನಿಶ್ಚಯಿಸಿದಾಗ, ಹಝ್ರತ್ ಇಬ್ರಾಹೀಂ[ಅ]ರನ್ನು ಅದಕ್ಕಾಗಿ ಆರಿಸಿದನು. ಅವರನ್ನು ತನ್ನ ಅನುಗ್ರಹಗಳಿಂದ ಅಭಿಷೇಕ ಮಾಡಿದನು. ಅವನು ಇಬ್ರಾಹೀಂ[ಅ]ರನ್ನು ಕರೆದು ಹೇಳಿದನು: "ಇಬ್ರಾಹೀಂ, ನೀನು

ಹೋಗು; ನಿನ್ನ ಪುತ್ರನನ್ನು ಬಲಿಕೊಡು!" ಪ್ರವಾದಿ ಇಬ್ರಾಹೀಂ(ಅ) ಅದಕ್ಕೆ ಸನ್ನದ್ಧರಾದರು. ವೃದ್ಧಾಪ್ಯ ಕಾಲದಲ್ಲಿ ತನಗೆ ಹುಟ್ಟಿದ ಏಕ ಪುತ್ರನನ್ನು ಆ ಮರಳುಗಾಡಿನಲ್ಲಿ ಅವರು ಕರಕೊಂಡುಹೋಗಿ ಬಿಟ್ಟರು. ಅಲ್ಲಿ ತಿನ್ನಲಿಕ್ಕಾಗಲಿ, ಕುಡಿಯಲಿಕ್ಕಾಗಲಿ, ಏನೂ ಇರಲಿಲ್ಲವೆಂದು ಖುರ್‌ಆನ್ ಹೇಳುತ್ತದೆ. ಆಪತ್ಕರವೂ ಭಯಾನಕವೂ ಆದ ಒಂದು ಕಣಿವೆಯಾಗಿತ್ತು ಅದು. ದೇವನ ಮಹತ್ವವು ಪುನಃಸ್ಥಾಪಿಸಲ್ಪಡಲಿಕ್ಕೂ ದೇವನ ಶಬ್ದ ಎತ್ತರಿಸಲ್ಪಡಲಿಕ್ಕೂ ಆಗಿತ್ತು ಇಬ್ರಾಹೀಂ(ಅ) ತನ್ನ ಸುತನನ್ನೂ ಆ ಸುತನ ತಾಯಿಯನ್ನೂ ಅಲ್ಲಿ ತ್ಯಜಿಸಿದ್ದು. ಒಂದು ಚರ್ಮದ ಚೀಲದಲ್ಲಿ ನೀರು ಮತ್ತು ಖರ್ಜೂರದ ಒಂದು ಬುತ್ತಿ ಮಾತ್ರ ಆ ಮಗುವಿಗೂ ತಾಯಿಗೂ ನೀಡಲಾಗಿತ್ತು. ಈ ಮರಳುಗಾಡಿನಲ್ಲಿ ಅವರು ತಮ್ಮ ಜೀವಿತವನ್ನು ನಡೆಸಬೇಕೆಂದಾಗಿತ್ತು ದೇವೇಚ್ಛೆ. ಸ್ವಲ್ಪವೇ ನೀರು ಮತ್ತು ಖರ್ಜೂರ ಎಷ್ಟು ದಿನಕ್ಕೆ ಸಾಕಾದೀತೆಂದು ಅವರು ಯೋಚಿಸದಿರಲಿಲ್ಲ. ಮರಳ ಹರಳುಗಳು ಮತ್ತು ಸೂರ್ಯಪ್ರಕಾಶ ಹೊರತು ತನ್ನ ಮಗನಿಗೂ ಪತ್ನಿಗೂ ಬೇರೇನೂ ಆ ಮರುಭೂಮಿಯಲ್ಲಿ ಇಲ್ಲವೆಂದು ಇಬ್ರಾಹೀಂ(ಅ) ಮನಗಂಡಾಗ ಅವರಿಗೆ ಎದೆಗುದಿಯುಂಟಾಯಿತು. ಕಣ್ಣುಗಳಲ್ಲಿ ನೀರು ತುಂಬಿ ಬಂತು. ಬಾಷ್ಪದಿಂದ ತುಂಬಿದ ಅವರ ದೃಷ್ಟಿಯನ್ನೂ ಕಂಪಿಸುವ ಅದರಗಳನ್ನೂ ಹಝ್‌ರತ್ ಹಾಜರ(ರ) ಕಂಡರು. ಇದು ಭಯಾನಕವಾದ ಕೃತ್ಯವೆಂದು ಅವರಿಗೆ ತೋಚಿತು. ಅವರು ತನ್ನ ಪತಿಯು ಹಿಂದೆಯೇ ಹೋಗಿ ಎಲ್ಲಿ ನಮ್ಮನ್ನು ಬಿಟ್ಟು ಹೋಗುತ್ತಿದ್ದೀರೆಂದು ಕೇಳಿದರು. ಕುಡಿಯಲಿಕ್ಕೆ ನೀರಿಲ್ಲ; ತಿನ್ನಲಿಕ್ಕೆ ಆಹಾರವಿಲ್ಲ! ಇಬ್ರಾಹೀಂ(ಅ) ಉತ್ತರ ಹೇಳಲು ಪ್ರಯತ್ನಿಸಿದರೂ ಮಾತು ಹೊರಡಲಿಲ್ಲ. ಹಾಜರ ಆಗ ಕೇಳಿದರು: "ತಾವು ದೇವಾಜ್ಞೆಯಂತೆ ಈ ರೀತಿ ಮಾಡುತ್ತಿದ್ದೀರಾ? ಅಥವಾ ಸ್ವಇಚ್ಛೆಯಿಂದಲೋ?" ಇಬ್ರಾಹೀಂ(ಅ) ಆಕಾಶದೆಡೆ ತನ್ನ ಎರಡು ಕೈಗಳನ್ನೂ ಎತ್ತಿ ತೋರಿಸಿದರು. ತಾನು ದೈವಾಜ್ಞೆಯಂತೆ ಆ ರೀತಿ ಮಾಡುತ್ತಿದ್ದೇನೆಂದು ಅವರು ವ್ಯಕ್ತಪಡಿಸಿದರು. ಅದನ್ನರಿತಾಗ ವಿಶ್ವಾಸಿನಿಯೂ ದೃಢಚಿತ್ತೆಯೂ ಆಗಿದ್ದ ಆ ತರುಣೀಮಣಿಯಲ್ಲಿ ಒಂದು ಮಾರ್ಪಾಟು ಉಂಟಾಯಿತು. ಅವರು ಯುವತಿಯಾಗಿದ್ದರು. ಏಕ ಸಂತಾನ ಜೊತೆಯಲ್ಲಿ. ಅವರ ಮುಂದೆ ಮೃತ್ಯು ಗೋಚರವಾಗುತ್ತಿತ್ತು. ಆದರೂ ಆ ಸ್ತ್ರೀರತ್ನ ಕೂಡಲೇ ಧೈರ್ಯದಿಂದ ಹೇಳಿದರು: "ಹಾಗಾದರೆ ಮತ್ತೆ ಅಲ್ಲಾಹನೇ ನಮ್ಮನ್ನು ರಕ್ಷಿಸಿಕೊಳ್ಳುವನು! ಅವನು ನಮ್ಮನ್ನು ಕೈಬಿಡಲಾರನು."

ಕೊನೆಗೆ ನೀರು ಮುಗಿಯಿತು. ಖರ್ಜೂರ ಕೂಡ ಬಾಕಿಯುಳಿಯಲಿಲ್ಲ. ದೃಷ್ಟಿ ತಲಪುವ ದೂರದಲ್ಲೆಲ್ಲೂ ಜನಸಂಚಾರವಾಗಲಿ, ಭಕ್ಷ್ಯ ವಸ್ತುಗಳಾಗಲಿ ಕಾಣಿಸುವುದಿಲ್ಲವಾದರೂ ನೀರಡಿಕೆಯಿಂದ ನರಳಾಡುತ್ತಿರುವ ತನ್ನ ಮಗುವಿನ ಕ್ಲೇಶವನ್ನು ಕಂಡು ಸಹಿಸದೆ ಅವರು ಒಂದು ಗುಡ್ಡೆಯ ಮೇಲೆ ಹತ್ತಿ ನೋಡಿದರು. ಯಾರಾದರೂ ಮನುಷ್ಯ ಜೀವಿ ಕಾಣಿಸುತ್ತಾನೆಯೇ? ಹಾ! ಒಬ್ಬನಾದರೂ ಕಾಣಸಿಕ್ಕಿದರೆ ಸ್ವಲ್ಪ ನೀರು ಕೇಳಬಹುದಾಗಿತ್ತು! ಆದರೆ ಎಷ್ಟು ಶ್ರಮಿಸಿದರೂ ನೀರು ದೊರೆಯುವ ಯಾವ ಮಾರ್ಗವೂ ಕಾಣಲಿಲ್ಲ. ವ್ಯಾಕುಲತೆಯಿಂದಲೂ ದಿಗ್ಭ್ರಾಂತಿಯಿಂದಲೂ ಆ ಗುಡ್ಡೆಯಿಂದ ಇಳಿದು ಮತ್ತೊಂದು ಗುಡ್ಡೆಯನ್ನು ಹತ್ತಿ ನೋಡಿದರು. ಅಲ್ಲಿ ಸಹ ಜಲ ಸಿಕ್ಕುವ ಲಕ್ಷಣವೇನೂ ಕಾಣಲಿಲ್ಲ. ಈ ಉದ್ವಿಗ್ನತೆ ಮತ್ತು ಕಳವಳದಿಂದ ಅವರು ಏಳು ಸಲ ಗುಡ್ಡೆಗಳನ್ನು ಹತ್ತಿ ಇಳಿದರು. ಕೊನೆಗೆ ಏನು ಮಾಡಬೇಕೆಂದು ತೋಚದೆ ಪೇಚಾಡಿದರು. ಅವರು ದೇವನಿಗೆ ಮೊರೆಯಿಟ್ಟರು. ಆ ಸಂದಿಗ್ಧ ಘಟ್ಟದಲ್ಲಿ ಅವರಿಗೆ ದೇವವಾಣಿ ಕೇಳಿಸಿತು: "ಹೇ ಹಾಜರಾ, ನಿನ್ನ ಮಗುವಿಗಾಗಿ ಅಲ್ಲಾಹನು ಮಾರ್ಗ ತೆರೆದಿರುವನು. ಹೋಗು, ಮಗುವನ್ನು ನೋಡು....." ಹಝ್‌ರತ್ ಹಾಜರ(ರ) ಮಗುವಿನ ಬಳಿ ಹಿಂತಿರುಗಿ ಬಂದಾಗ, ಮಗು ದಾಹದಿಂದ ನರಳಿದ ಜಾಗದಲ್ಲಿ ನೀರಬುಗ್ಗೆಯೊಂದು ಸ್ಫುಟಿಯುತ್ತಿರುವುದನ್ನು ಕಂಡರು. ಅದೊಂದು ಜಲಧಾರೆಯಾಯಿತು. ಇದೇ ಜಲಧಾರೆ ನಂತರ "ಝಂಝಂ ಝಂಝಂ" ಎಂಬ ಹೆಸರಿನಿಂದ ಕರೆಯಲ್ಪಟ್ಟಿತು. ಸಂತೋಷಾಧಿಕ್ಯದಿಂದ ಹೊರಡುವ ಗಾನಕ್ಕೆ "ಝುಂ ಝುಂ" ಎಂದು ಹೇಳಲಾಗುತ್ತದೆ. ಹಾಜರರವರೇ ಈ ನೀರ ಚಿಲುಮೆಗೆ "ಝುಂ ಝುಂ" ಎಂದು ನಾಮಕರಣ ಮಾಡಿದರು. ಈ ಊಟೆಯಿಂದ ತನ್ನ ಪ್ರೀತಿಯ ಕಂದನಿಗೆ ರಕ್ಷೆ ದೊರೆತ ಅಮಿತ ಸಂತೋಷದಿಂದ ಆನಂದ ಗಾನ ಹಾಡಲು ತನಗೆ ಸಂದರ್ಭವೊದಗಿತ್ತಲ್ಲವೇ! ನೀರಿನ ಬಗ್ಗೆ ಅಲ್ಲಾಹನು ಈ ರೀತಿ ಒಂದು ಏರ್ಪಾಡು ಮಾಡಿದನು. ಇನ್ನು ಬೇಕಾದುದು ಆಹಾರ. ಅದೃಷ್ಟವಶಾತ್ ಒಂದು ವ್ಯಾಪಾರ ಸಂಘ ದಾರಿ ತಪ್ಪಿ ಹಝ್‌ರತ್ ಹಾಜರ(ರ) ವಾಸ ಹೂಡಿದ ಸ್ಥಳಕ್ಕೆ ಬಂದು ಮುಟ್ಟಿತು. ಆ ಯಾತ್ರಿಕ ಸಂಘಕ್ಕೆ ನೀರು ಬೇಕಾಗಿತ್ತು. ಅಲ್ಲಿ ಒಂದು ಜಲಾಶಯ ಕಂಡಾಗ ಆ ಸಂಘದವರು ಅಲ್ಲಿ ಶಿಬಿರ ಹೂಡಲು ಇಚ್ಛಿಸಿ, ಹಾಜರರೊಡನೆ ಅವರ ಪ್ರಜೆಗಳಾಗಿ ವಾಸ ಮಾಡಲು ತಮಗೆ ಅನುಮತಿ ನೀಡಬೇಕೆಂದು ಕೋರಿದರು. ಹಝ್‌ರತ್ ಹಾಜರ(ರ) ಅವರಿಗೆ ಒಪ್ಪಿಗೆ ನೀಡಿದಾಗ, ಅವರೀರ್ವರ ಪ್ರಜೆಗಳಾಗಿ ಅವರು ಅಲ್ಲಿ ಬೀಡುಬಿಟ್ಟರು. ಹೀಗೆ ಪ್ರಾಯಕ್ಕೆ ಬರುವ ಮೊದಲೇ ಅಲ್ಲಾಹನು ಹಝ್‌ರತ್ ಇಸ್ಮಾಈಲ್‌ರನ್ನು ರಾಜನನ್ನಾಗಿ ಮಾಡಿದನು!

ಇಂದು ಕೂಡ ಹಜ್ಜ್ ವೇಳೆಯಲ್ಲಿ ಹಝ್‌ರತ್ ಹಾಜರರವರ ಈ ಘಟನೆಯನ್ನು ಸ್ಮರಿಸಿಕೊಂಡು ಹಾಜಿಗಳು ಸಫಾ, ಮರ್ವಾ ಎಂಬ ಎರಡು ಗುಡ್ಡೆಗಳ ಮಧ್ಯೆ ಏಳು ಸಲ ಅತ್ತಿತ್ತ ಓಡುತ್ತಾರೆ. ತಾವು ಹಾಜರ(ರ) ಅವರ ಕಾಲ ಹೆಜ್ಜೆಗಳನ್ನು ಹಿಂಬಾಲಿಸುತ್ತೇವೆಂದು ಈ ಓಟ ಮೂಲಕ ಅವರು ಬಹಿರಂಗಪಡಿಸುತ್ತಾರೆ. ಅಲ್ಲಾಹನ ಮಾರ್ಗದಲ್ಲಿ ಯಾವಾಗಲಾದರೂ ತಮ್ಮ ಬಂಧು ಬಳಗವನ್ನೆಲ್ಲ ಬಿಟ್ಟು ಬಿಡಬೇಕಾದ ಸಂದರ್ಭ ಬಂದರೆ ತಾವು ವೈಮನಸ್ಯ ತೋರಿಸಲಿಕ್ಕಿಲ್ಲವೆಂದು ಅವರು ಈ ಮೂಲಕ ಪ್ರಕಟಪಡಿಸುತ್ತಾರೆ.

ಸಂಕ್ಷಿಪ್ತವಾಗಿ, ಹಜ್ಜ್ ಇಸ್ಲಾಮಿನಲ್ಲಿ ವಿಧಿಸಲಾದ ಅತಿ ಪ್ರಧಾನವಾದ ಒಂದು ಆರಾಧನಾಕರ್ಮವಾಗಿದೆ. ಅಲ್ಲಾಹನಿಗೋಸ್ಕರ ಜೀವಿತವನ್ನು ಬಲಿ ಕೊಡುವವರು ಸದಾ ಜೀವಂತರಾಗಿರುವುದು ಹೇಗೆಂಬ ಈ ಚಿತ್ರ ಮಕ್ಕಕ್ಕೆ ಹೋಗಿ ಹಜ್ಜ್ ಅನುಷ್ಠಿಸುವ ಪ್ರತಿಯೊಬ್ಬನ ಕಣ್ಮುಂದೆ ಪ್ರತ್ಯಕ್ಷವಾಗುತ್ತದೆ.

ಹಜ್ಜ್ ಮೂಲಕ ಮುಸ್ಲಿಮರೆಡೆಯಲ್ಲಿ ಒಂದು ಕೇಂದ್ರ ಪ್ರಜ್ಞೆ ಜನ್ಮ ತಾಳುತ್ತದೆ. ತಮ್ಮ ಹಾಗೂ ಬಾಹ್ಯ ಲೋಕದ ಆವಶ್ಯಕತೆಗಳ ಕುರಿತು ಆಲೋಚಿಸುವರೆ ಅವರಿಗೆ ಅದರ ಮೂಲಕ ಸಂದರ್ಭ ಒದಗುತ್ತದೆ. ಪರಸ್ಪರ ಪರಿಚಯಪಡಲಿಕ್ಕೂ ಅನ್ಯೋನ್ಯ ಒಳಿತುಗಳನ್ನು ವಿನಿಮಯ ಮಾಡಲಿಕ್ಕೂ ಅದು ಅವಕಾಶ ಮಾಡಿ ಕೊಡುತ್ತದೆ. ಆ ಮೂಲಕ ಸಾಹೋದರ್ಯ ಮತ್ತು ಪ್ರೀತಿ ಬಲಗೊಳ್ಳುತ್ತದೆ. ಆರ್ಥಿಕ ಸಾಮರ್ಥ್ಯವಿದ್ದು ಯಾತ್ರೆ ಮಾಡಲು ದೇಹಾರೋಗ್ಯವಿರುವ ಪ್ರತಿಯೊಬ್ಬ ಮುಸ್ಲಿಂ ಇಸ್ಲಾಮಿನ ಈ ಅತಿ ಪ್ರಧಾನವಾದ ಕರ್ಮವನ್ನು ಅನುಷ್ಠಿಸಲು ಬಾಧ್ಯನು. ಈ ಕಾಲದ ಧನಾಢ್ಯರ ಸಂಬಂಧಿಸಿದ ಮಟ್ಟಿಗೆ ಅತ್ಯಂತ ಹಿರಿದಾದ ಒಂದು ಸತ್ಕರ್ಮವು ಹಜ್ಜ್ ಎಂದು ನಾನು ತಿಳಿದಿದ್ದೇನೆ.

*

(ತಫ್ಹೀರ್ ಕಬೀರ್‌ನಿಂದ)

# ಮುಸ್ಲಿಮ್ ಮಹಿಳೆಯರು ದಬ್ಬಾಳಿಕೆಗೆ ಗುರಿಯಾಗುತ್ತಾರೆ ಎಂಬ ತಪ್ಪು ಗ್ರಹಿಕೆಯ ನಿವಾರಣೆ

* ರಿದಾ ಹಶ್‌ಮತ್, ವಿಂಡ್‌ಸರ್, ಕೆನಡ

ಆಧುನಿಕ ಸಮಾಜದಲ್ಲಿ ಇಸ್ಲಾಮ್ ಬಗ್ಗೆ ಬೃಹತ್ತಾದೊಂದು ತಪ್ಪು ಗ್ರಹಿಕೆ ಇದೆ. ಅದರ ಬಗ್ಗೆ ವಿಶದೀಕರಿಸಲು ಇಚ್ಛಿಸುತ್ತೇನೆ. ಇಸ್ಲಾಮಿನಲ್ಲಿ ಮಹಿಳೆಯರು ದಬ್ಬಾಳಿಕೆಗೆ ಗುರಿಯಾಗುತ್ತಾರೆ ಎಂಬುದೇ ಈ ತಪ್ಪುಗ್ರಹಿಕೆಯಾಗಿದೆ. ಇದು ಅನ್ಯಾಯವಾಗಿ ಹರಡುತ್ತಿರುವ ತಪ್ಪುಗ್ರಹಿಕೆಯಾಗಿದೆ. ಇಸ್ಲಾಮ್ ಧರ್ಮದ ಮಾರ್ಗದರ್ಶನಗಳ ಬಗ್ಗೆ ಚಾರಿತ್ರಿಕವಾಗಿ ಅಧ್ಯಯನ ಮಾಡದವರು ವಿಶಿಷ್ಟವಾಗಿ ಈ ಅಪಪ್ರಚಾರ ಮಾಡುತ್ತಿದ್ದಾರೆ.

ಇಸ್ಲಾಮ್ ಒಂದು ಸುಂದರ ಧರ್ಮವಾಗಿದೆ. ಅದರ ಅರ್ಥ ಶಾಂತಿ ಎಂದಾಗಿದೆ. ಅದು ಪುರುಷರು ಮತ್ತು ಮಹಿಳೆಯರಲ್ಲಿ ಎಲ್ಲ ಪ್ರಾಯದಲ್ಲೂ ಸಮಾನತೆಯನ್ನು ಸ್ಥಾಪಿಸಲು ಪರಿಶ್ರಮ ನಡೆಸುತ್ತಿದೆ. ಪಾಶ್ಚಿಮಾತ್ಯ ಮಹಿಳೆಯರು ಮತ್ತು ಪಾಶ್ಚಿಮಾತ್ಯ ಸಂಸ್ಕೃತಿ ಮುಸ್ಲಿಮ್ ಮಹಿಳೆಯರ ಬಗ್ಗೆ, ಅವರು ದಬ್ಬಾಳಿಕೆಗೆ ಗುರಿಯಾದವರೆಂದೂ ಹಕ್ಕುಗಳಿಂದ ವಂಚಿಸಲ್ಪಟ್ಟವರೆಂದೂ ಪದೇ ಪದೇ ವೀಕ್ಷಿಸುತ್ತಿದೆ. ಅವರ ಈ ಅಭಿಪ್ರಾಯ ಸತ್ಯವಾದುದು ಅಲ್ಲ. ಉದಾಹರಣೆಗೆ, ಅನೇಕ ಪಾಶ್ಚಿಮಾತ್ಯ ಸಮಾಜಗಳು ಮುಸ್ಲಿಮ್ ಮಹಿಳೆಯರು ತಮ್ಮ ಪತಿ ಮತ್ತು ಪಿತರ ಅಧೀನಕ್ಕೊಳಪಡುತ್ತಾರೆಂದೂ ಮಹಿಳೆಯರು ತಮ್ಮ ಬಗ್ಗೆ ಸ್ವಯಂ ನಿರ್ಧರಿಸುವ ಹಕ್ಕುಗಳನ್ನು ಕೂಡ ಕಿತ್ತುಕೊಳ್ಳಲಾಗುತ್ತಿದೆ ಎಂದೂ ಅಭಿಪ್ರಾಯಪಡುತ್ತವೆ.

ಹೀಗೆ ಆಕ್ಷೇಪಿಸುವವರು ಎಲ್ಲ ಪ್ರಾಯದ ಪುರುಷರು ಮತ್ತು ಮಹಿಳೆಯರು ಶಾಂತಿಯಿಂದ ಜೀವಿಸುವ, ಮಹಿಳೆಯರಿಗೂ ಪುರುಷರಿಗೂ ಸಮವಾದ ಹಕ್ಕುಗಳಿರುವ, ಮಹಿಳೆಯರಿಗೆ ವಿದ್ಯಾಭ್ಯಾಸ, ಸ್ವತ್ತು ಮತ್ತು ವಿವಾಹ ವಿಚ್ಛೇದನೆ ಹಕ್ಕುಗಳಿರುವ ಆದರ್ಶ ಸಮಾಜದ ಕಲ್ಪನೆಯನ್ನು ಹೊಂದಿರುತ್ತಾರೆ. ಆದರೆ ಅಂತಹ ಆದರ್ಶ ಸಮಾಜವನ್ನು ಅರಬ್ ದೇಶದಲ್ಲಿ ಇಸ್ಲಾಮಿನ ಪೈಗಂಬರರು(ಸ) 1400 ವರ್ಷಗಳ ಹಿಂದೆಯೇ ಸ್ಥಾಪಿಸಿದ್ದರೆಂದು ಅವರಿಗೆ ತಿಳಿದಿಲ್ಲ. ಮಹಿಳೆಯರಿಗೆ ಇಸ್ಲಾಮ್ ಅನೇಕ ಶತಮಾನಗಳ ಹಿಂದೆಯೇ ಈ ಎಲ್ಲ ಹಕ್ಕುಗಳನ್ನು ನೀಡಿತ್ತು. ಆದರೆ ಮಹಿಳೆಯರಿಗೆ ಮೂಲಭೂತ ಹಕ್ಕುಗಳನ್ನು ಇತರ ಸಮಾಜಗಳಲ್ಲಿ ಇಪ್ಪತ್ತನೆಯ ಶತಮಾನದ ಆರಂಭದ ತನಕ ನೀಡಿರಲಿಲ್ಲ. ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಮಹಿಳೆ ತನ್ನ ಪತಿಯ ಸಹಭಾಗಿತ್ವವಿಲ್ಲದೆ ಸ್ವತಂತ್ರಳಾಗಿ ಆಸ್ತಿ ಹೊಂದಿರುವ ಹಕ್ಕು 1882ರ ತನಕ ಪಡೆದಿರಲಿಲ್ಲ.

ಈ ಲೌಕಿಕ ಹಕ್ಕುಗಳೊಂದಿಗೆ ಇಸ್ಲಾಮ್ ಆಧ್ಯಾತ್ಮಿಕವಾಗಿ ಸಮಾನ ಹಕ್ಕುಗಳನ್ನು ಪುರುಷರಿಗೂ ಮಹಿಳೆಯರಿಗೂ ನೀಡಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ಪುರುಷನಾಗಲಿ, ಸ್ತ್ರೀಯಾಗಲಿ ಸತ್ಯವಿಶ್ವಾಸಿಯಾಗಿದ್ದುಕೊಂಡು ಸತ್ಕರ್ಮ ಮಾಡಿದರೆ ಖಂಡಿತವಾಗಿಯೂ ನಾವು ಅವರಿಗೆ ಪರಿಶುದ್ಧ ಜೀವನವನ್ನು ದಯಪಾಲಿಸುವೆವು. ಅವರ ಸದ್ವರ್ತನೆಗೆ ತಕ್ಕುದಾದ ಪ್ರತಿಫಲವನ್ನು ಸಹ ನಾವು ನಿಶ್ಚಯವಾಗಿಯೂ ನೀಡುವೆವು." (16:98).

ದಬ್ಬಾಳಿಕೆ ಬಗ್ಗೆ ಇನ್ನೊಂದು ತಪ್ಪು ಗ್ರಹಿಕೆ ಹಿಜಾಬ್‌ಗೆ ಸಂಬಂಧಿಸಿದೆ. ಅನೇಕ ಪಾಶ್ಚಿಮಾತ್ಯ ಮಹಿಳೆಯರು ಹಿಜಾಬನ್ನು ಮುಸ್ಲಿಮ್ ಮಹಿಳೆಯರು ಸ್ವತಂತ್ರರಾಗಿ ವರ್ತಿಸುವುದನ್ನು ತಡೆಯುವುದಕ್ಕಾಗಿರುವ ಶಾರೀರಿಕ ತಡೆಗಟ್ಟು ಎಂದು ಭಾವಿಸುತ್ತಾರೆ. ಆದರೆ ಹಿಜಾಬ್ ಇಸ್ಲಾಮ್ ಧರ್ಮ ಮಹಿಳೆಯರಿಗೆ ಒದಗಿಸಿದ ಭದ್ರತೆಯ ಮಾರ್ಗವಾಗಿದೆ. ತಮ್ಮ ದೃಷ್ಟಿಯನ್ನು ತಗ್ಗಿಸಲು ಮತ್ತು ಗುಹ್ಯಾಂಗಗಳನ್ನು ಸಂರಕ್ಷಿಸಲು ಮಹಿಳೆಯರಿಗೆ ಮಾತ್ರ ಉಪದೇಶಿಸದೆ ಪುರುಷರಿಗೂ ಅದೇ ಆಜ್ಞೆ ಪವಿತ್ರ ಖುರ್‌ಆನ್ ಅಧ್ಯಾಯ 24 ವಚನ 31–32ರಲ್ಲಿ ನೀಡಲಾಗಿದೆ. ಅನೇಕ ಪಾಶ್ಚಿಮಾತ್ಯ ಸಮಾಜಗಳು ಬುರ್ಖವನ್ನು ಅಪಹಾಸ್ಯ ಮಾಡುತ್ತವೆ. ಅದು ಮಹಿಳೆಯರ ಮೇಲೆ ಹೇರಲಾದ ಸಂಪ್ರದಾಯ ಎಂದು ಭಾವಿಸುತ್ತವೆ. ಅವರು ಮಧ್ಯಪೂರ್ವ ದೇಶಗಳ ಉದಾಹರಣೆ ನೀಡುತ್ತಾರೆ. ಅಲ್ಲಿ ಮಹಿಳೆಯರನ್ನು ತಲೆಯಿಂದ ಉಂಗುಷ್ಠದ ತನಕ ಮರೆಮಾಡಲು ನಿರ್ಬಂಧಿಸಲಾಗುತ್ತಿದೆ. ಅನೇಕ ಸಂದರ್ಭಗಳಲ್ಲಿ ಮಹಿಳೆಯರು ತಮ್ಮನ್ನು ಸರಿಯಾಗಿ ಮರೆಮಾಡದ ಕಾರಣ ನಿಂದಿಸಲ್ಪಟ್ಟಿದ್ದಾರೆ ಮತ್ತು ಕೆಲವು ಸಾರಿ ಹತ್ಯೆ ಮಾಡಲ್ಪಟ್ಟಿದ್ದಾರೆ. ಇದು ತಪ್ಪಾದ ಕೆಲಸವಾಗಿದೆ. ನೈಜ ಇಸ್ಲಾಮ್ ಧರ್ಮ ಇಂತಹ ಶಿಕ್ಷೆಯನ್ನು ವಿಧಿಸಿಯೇ ಇಲ್ಲ. ಓರ್ವ ಮುಸ್ಲಿಮ್ ಮಹಿಳೆಯ ಜೀವ ಅವಳ ಸ್ವಂತ ಕೈಗಳಲ್ಲಿಯೇ ಇದೆ. ಆಕೆ ಅನುಸರಿಸಬೇಕಾದ ಅತ್ಯಂತ ಮಹತ್ವಪೂರ್ಣ ಆಜ್ಞೆ ಅಲ್ಲಾಹನದ್ದಾಗಿದೆ. ಆಕೆಯು ಸಂಪೂರ್ಣ ಕರ್ತವ್ಯ ಮತ್ತು ಬದ್ಧತೆ ಅಲ್ಲಾಹನಿಗೋಸ್ಕರವಾಗಿದೆ. ಆಕೆ ಸ್ವಂತ ಇಷ್ಟದಿಂದ ತನ್ನ ಒಡೆಯನಿಗೆ ಬದ್ಧಳಾಗಿದ್ದರೆ ಅದರ ಪ್ರಯೋಜನ ಸಿಗುವುದು ಆಕೆಗೇ ಆಗಿದೆ.

ಕೊನೆಯದಾಗಿ ನಾನು ಹೇಳಲು ಇಚ್ಛಿಸುತ್ತೇನೆ. ಇಸ್ಲಾಮ್ ಮಹಿಳೆಯರಿಗೆ ಎಷ್ಟು ಹಕ್ಕುಗಳನ್ನೂ ಸ್ವಾತಂತ್ರ್ಯವನ್ನೂ ನೀಡಿದೆ ಎಂದರೆ ಅವರು ಇತರ ಸಮಾಜಗಳಲ್ಲಿರುವ ಮಹಿಳೆಯರಿಗಿಂತ ಹೆಚ್ಚು ಸ್ವತಂತ್ರರಾಗಿದ್ದಾರೆ. ಪವಿತ್ರ ಪೈಗಂಬರರು(ಸ) ಮಹಿಳೆಯರನ್ನು ಉನ್ನತಸ್ಥಾನಕ್ಕೆ ಏರಿಸಿದ್ದಾರೆ. ಮುಸ್ಲಿಮ್ ಮಹಿಳೆಯರು ಲೋಕದಾದ್ಯಂತ ಪ್ರಗತಿ ಮಾರ್ಗದಲ್ಲಿದ್ದಾರೆ. ಅವರು ಅನೇಕ ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಅನೇಕ ಕೆನಡಿಯನ್ ಅಹ್ಮದೀ ಮಹಿಳೆಯರು ಉನ್ನತ ವಿದ್ಯಾಭ್ಯಾಸ ಗಳಿಸಿದವರಾಗಿದ್ದಾರೆ. ಅವರು ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಿಗಳಾಗಿದ್ದಾರೆ. ಅವರು ಡಾಕ್ಟರ್‌ಗಳಾಗಿದ್ದಾರೆ, ವಿದ್ಯಾಕ್ಷೇತ್ರದಲ್ಲಿದ್ದಾರೆ. ವಾಣಿಜ್ಯ ವ್ಯವಹಾರಗಳಲ್ಲಿಯೂ ಇತರ ಕ್ಷೇತ್ರಗಳಲ್ಲೂ ಇದ್ದಾರೆ. ಉದಾಹರಣೆಗೆ, ದಿವಂಗತರಾದ ಸಾನಿಯ ಖಾನ್ ಸಾಹಿಬ ಯೋರ್ಕ್ ರೀಜಿಯನ್ ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್ ವೈಸ್ ಪ್ರಿನ್ಸ್‌ಪಾಲರಾಗಿದ್ದು ಪ್ರಿನ್ಸ್‌ಪಾಲ್ ಆಗುವವರಾಗಿದ್ದರು. ಪ್ರತಿಭಾಶಾಲಿ ಅಹ್ಮದೀ ವಿದ್ಯಾರ್ಥಿನಿಯರಿಗೆ ನೀಡುವ ಸ್ಕಾಲರ್‌ಶಿಪ್ ಅವರ ಹೆಸರಿನ ಸ್ಮಾರಕವಾಗಿದೆ. ಇಸ್ಲಾಮ್ ಮಹಿಳೆಯರನ್ನು ದಮನಿಸುವುದಿಲ್ಲ. ಅವರಿಗೆ ತಮ್ಮ ಅಭಿಪ್ರಾಯ ಹೇಳಲು ಅನುಕೂಲ ಮಾಡಿಕೊಡುತ್ತದೆಯಲ್ಲದೆ ಅವರ ಅಭಿಪ್ರಾಯಗಳನ್ನು ನೈಜವಾಗಿ ಉತ್ತಮ ರೀತಿಯಲ್ಲಿ ಪರಿಗಣಿಸುತ್ತದೆ.

**(Ahmadiyya Gazette, Canada June 2019 ಸಂಚಿಕೆಯಿಂದ)**

## ಹಝ್ರತ್ ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು – 6

# "ಇನ್‌ಮ್ಮಿನ್ ಅಹ್‌ಲಿಲ್ ಕಿತಾಬಿ" – ಎಂಬ ವಚನದ ಸರಿಯಾದ ವ್ಯಾಖ್ಯಾನ

ಮೇಲೆ ಉಲ್ಲೇಖಿಸಲಾದ ಪವಿತ್ರ ಖುರ್‌ಆನ್ ವಚನಗಳ ಮೂಲಕ ಹಝ್ರತ್ ಈಸಾ ಮಸೀಹ್(ಅ) ಆಕಾಶಕ್ಕೆ ಏರಿ ಹೋಗಿಲ್ಲ; ಅವರು ಇತರ ಮನುಷ್ಯರ ಹಾಗೆ ತಮ್ಮ ಆಯುಷ್ಕಾಲವನ್ನು ಕಳೆದು ಭೂಮಿಯಲ್ಲಿಯೇ ಮೃತರಾದರು ಎಂದು ಚೆನ್ನಾಗಿ ಸ್ಪಷ್ಟಗೊಳಿಸಲಾಗಿದೆ. ಆದರೆ ಈ ಸಂದರ್ಭದಲ್ಲಿ ನಮ್ಮ ವಿರೋಧಿಗಳು ಹಝ್ರತ್ ಈಸಾ ಮಸೀಹ್(ಅ) ಮೃತರಾಗಿಲ್ಲ ಎಂಬ ತಮ್ಮ ವಾದವನ್ನು ಸಾಬೀತುಗೊಳಿಸಲು ಬಳಸುವ ಪವಿತ್ರ ಖುರ್‌ಆನಿನ ಒಂದು ವಚನವನ್ನು ಸಂಕ್ಷಿಪ್ತವಾಗಿ ವಿವರಿಸಲು ಬಯಸುತ್ತೇವೆ.

ಪವಿತ್ರ ಖುರ್‌ಆನಿನ ವಚನ ಹೀಗಿದೆ:

**ವ ಇನ್‌ಮ್ಮಿನ್ ಅಹ್‌ಲಿಲ್‌ಕಿತಾಬಿ ಇಲ್ಲಾ ಲಯೂಮಿನನ್ನ ಬಿಹೀ ಖಬ್‌ಲ ಮೌತಿಹೀ**

"ಗ್ರಂಥದವರಲ್ಲಿ ಯಾವನೂ ತನ್ನ ಮರಣಕ್ಕೆ ಮುಂಚೆ ಆ ಬಗ್ಗೆ ವಿಶ್ವಾಸ ಹೊಂದದಿರುವುದಿಲ್ಲ." (ಪವಿತ್ರ ಖುರ್‌ಆನ್ 4:160).

ಅಹ್ಮದಿಯೇತರ ಮತಪಂಡಿತರು ಈ ವಚನಕ್ಕೆ ನೀಡುವ ಅರ್ಥ ಹೀಗಿದೆ: "ಈಸಾ ಮಸೀಹರು ಮೃತರಾಗುವ ಮೊದಲು ಈಸಾ ಮಸೀಹರನ್ನು ನಂಬದ ಗ್ರಂಥದವರು ಯಾರೂ ಇರುವುದಿಲ್ಲ."

ಹೀಗೆ ಅರ್ಥ ಹೇಳಿ ನಮ್ಮ ವಿರೋಧಿ ಮತಪಂಡಿತರು ಹಝ್ರತ್ ಈಸಾ ಮಸೀಹರು(ಅ) ಈಗಲೂ ಜೀವಿಸಿರುವರೆಂದೂ ಲೋಕದ ಅಂತಿಮ ಕಾಲಘಟ್ಟದಲ್ಲಿ ಆಕಾಶದಿಂದ ಇಳಿದು ಬರುವರೆಂದೂ ಪ್ರಸ್ತಾಪಿಸುತ್ತಾರೆ. ಆಗ ಗ್ರಂಥದವರೆಲ್ಲರೂ ಅವರನ್ನು ನಂಬಲು ನಿರ್ಬಂಧಿಸಲ್ಪಡುವರು ಎಂದು ಅವರು ಹೇಳುತ್ತಾರೆ.*

ನಾವು ಈ ವಚನದ ಬಗ್ಗೆ ಗಾಢವಾಗಿ ಚಿಂತಿಸಿದರೆ ನಮ್ಮ ವಿರೋಧಿಗಳ ವಾದದ ಪೊಳ್ಳುತನ ಸ್ಪಷ್ಟವಾಗುತ್ತದೆ. ಪವಿತ್ರ ಖುರ್‌ಆನ್‌ನಲ್ಲಿ **"ಇನ್‌ಮ್ಮಿನ್ ಅಹ್‌ಲಿಲ್ ಕಿತಾಬ್"** ಎಂದು ಹೇಳಿದುದರ ಅರ್ಥ: "ಗ್ರಂಥದವರಲ್ಲಿ ಎಲ್ಲರೂ ಯಾರನ್ನೂ ಬಿಟ್ಟು ಬಿಡದೆ" ಎಂದಾಗಿದೆ.

ಹಝ್ರತ್ ಈಸಾ ಮಸೀಹರು(ಅ) ಇಳಿದು ಬರುವಾಗ ಆಗ ಜೀವಿಸಿರುವ ಎಲ್ಲ ಗ್ರಂಥದವರು (ಯಹೂದಿಯರು) ಅವರನ್ನು ನಂಬುವರೆಂದು ನಾವು ಊಹಿಸುವುದಾದರೂ ಈ ವಚನದಲ್ಲಿ ಹೇಳಿದುದು ಈಡೇರದು. ಏಕೆಂದರೆ ಲಕ್ಷಾಂತರವಲ್ಲ ಕೋಟಿಗಟ್ಟಲೆ ಯಹೂದಿಯರು ಈ ವಚನ ಅವತೀರ್ಣಗೊಂಡ ಮೊದಲುಗೊಂಡು ಹಝ್ರತ್ ಈಸಾ ಮಸೀಹರ(ಅ) ಪುನರಾಗಮನದ ತನಕದ ಮಧ್ಯ ಕಾಲದಲ್ಲಿ ಮೃತರಾಗಿರಬಹುದು. ಅವರು ಹೇಗೆ ನಂಬುವರು? ಈ ಜನರು ಈ ಗುಂಪಿಗೆ ಹೊರತಾಗಿಯೇ ಇರುವರು. ಆದರೆ ಮೇಲೆ ಉಲ್ಲೇಖಿಸಿದ ವಚನ ಗ್ರಂಥದವರಲ್ಲಿ ಯಾರನ್ನೂ ಬಿಟ್ಟುಬಿಡುವುದಿಲ್ಲ. ಆದುದರಿಂದ ನಮ್ಮ ವಿರೋಧಿಗಳು ಈ ವಚನಕ್ಕೆ ನೀಡುವ ಅರ್ಥ ತಪ್ಪು ಎಂದು ಸ್ಪಷ್ಟವಾಗುತ್ತದೆ. ಇದಲ್ಲದೆ ನಾವು ಪವಿತ್ರ ಖುರ್‌ಆನಿನಲ್ಲಿ ಹೀಗೆ ಕಾಣುತ್ತೇವೆ:

**ಫ ಅಗ್‌ರೈನಾ ಬೈನಹುಮುಲ್ ಅದಾವತ ವಲ್ ಬಗ್‌ಝಾಅ ಇಲಾ ಯೌಮಿಲ್ ಖಿಯಾಮತಿ** – "ಆದುದರಿಂದ ನಾವು ಅವರ ಮಧ್ಯೆ ಅಂತ್ಯ ದಿನದವರೆಗೆ ಶತ್ರುತ್ವ ಮತ್ತು ದ್ವೇಷ ಭಾವನೆ ಉಂಟಾಗುವಂತೆ ಮಾಡಿದೆವು." (5:15)

ಯಹೂದಿಯರು ಮತ್ತು ಕ್ರೈಸ್ತರ ಮಧ್ಯೆ ಶತ್ರುತ್ವ ಮತ್ತು ದ್ವೇಷ ಪುನರುತ್ಥಾನ ದಿನದ ತನಕ ಇರುವುದಾಗಿ ಮೇಲೆ ಉಲ್ಲೇಖಿಸಿದ ವಚನ ಸೂಚಿಸುತ್ತದೆ. ಆದುದರಿಂದ ಯಹೂದಿಯರು ಮತ್ತು ಕ್ರೈಸ್ತರು ಸಂಪೂರ್ಣವಾಗಿ ಇಲ್ಲದಾಗುವ ಕಾಲ ಎಂದೂ ಬರಲಾರದೆಂದೂ ಇವೆರಡು ಗುಂಪುಗಳು ಅಂತ್ಯ ದಿನದ ತನದ ಅಸ್ತಿತ್ವದಲ್ಲಿ ಇರುವುವು ಎಂದೂ ಸ್ಪಷ್ಟವಾಗುತ್ತದೆ.

ಈ ವಚನ ಮಾತ್ರವಲ್ಲ, ಬೇರೆ ಅನೇಕ ವಚನಗಳು ಪವಿತ್ರ ಖುರ್‌ಆನಿನಲ್ಲಿದ್ದು ಅವು ಸ್ಪಷ್ಟವಾಗಿ ಯಹೂದಿಯರು ಖಿಯಾಮತ್ ತನಕ ಅಸ್ತಿತ್ವದಲ್ಲಿರುವರು ಎಂದು ಸ್ಪಷ್ಟವಾಗಿ ಸೂಚಿಸುತ್ತವೆ. ಅವರು ಸಂಪೂರ್ಣವಾಗಿ ಎಂದೂ ನಿಶ್ಶೇಷ ಸ್ಥಿತಿಗೆ ತಲಪಲಾರರು. ಆದುದರಿಂದ ಎಲ್ಲ ಯಹೂದಿಯರು ಯಾರೂ ಬಾಕಿಯಾಗಿ ಉಳಿಯದೆ ಹಝ್ರತ್ ಈಸಾ ಮಸೀಹರನ್ನು(ಅ) ನಂಬುವರು ಎಂದು ಹೇಳುವುದು ಪವಿತ್ರ ಖುರ್‌ಆನಿನ ಸ್ಪಷ್ಟ ಉಪದೇಶಗಳಿಗೆ ವಿರುದ್ಧವಾಗಿದೆ.

ಹಾಗಾದರೆ ಈ ವಚನದ ಸರಿಯಾದ ಅರ್ಥವೇನು? ಇದಕ್ಕೆ ಉತ್ತರ ನೀಡುವ ಮೊದಲು ನಾನೊಂದು ಸತ್ಯಾಂಶವನ್ನು ಹೇಳಲು ಬಯಸುತ್ತೇನೆ. ನಮ್ಮ ವಿರೋಧಿಗಳು ಹೇಳುವ ಅರ್ಥವನ್ನು ಹಿಂದಿನ ಕಾಲದ ಹಿರಿಯ ಮುಸ್ಲಿಮ್ ವಿದ್ವಾಂಸರು ಖಂಡಿತವಾಗಿಯೂ ಅಂಗೀಕರಿಸಿಲ್ಲ. ಈ ವಚನದ ವ್ಯಾಖ್ಯಾನಕ್ಕೆ ಸಂಬಂಧಿಸಿ ಹಿಂದಿನ ಕಾಲದ ವಿದ್ವಾಂಸರು ಬಹಳ ಭಿನ್ನಾಭಿಪ್ರಾಯ ಹೊಂದಿದ್ದರು. ಒಬ್ಬರು ಒಂದು ರೀತಿ ಹೇಳಿದರೆ ಇನ್ನೊಬ್ಬರು ಬೇರೊಂದು ರೀತಿ ವಿವರಣೆ ನೀಡುತ್ತಾರೆ. ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಪವಿತ್ರ ಖುರ್‌ಆನಿನ ಸ್ಪಷ್ಟವಾದ ಅರ್ಥವಿರುವ ಇತರ ವಚನಗಳಿಗೆ ವಿರುದ್ಧವಾಗದ ಅರ್ಥವೇ ಸರಿಯಾದ ಅರ್ಥ. ವಚನವು ಯಾವ ಸಂದರ್ಭದಲ್ಲಿ ಬಳಸಲಾಗಿದೆ ಎಂಬುದು ಸಹ ಮುಖ್ಯವಾಗಿ ಪರಿಗಣಿಸಬೇಕಾಗಿದೆ. ಅರ್ಥವು ಶಬ್ದ ಬಳಸಲಾದ ಸಂದರ್ಭಕ್ಕೆ ಅನುಸಾರವಾಗಿರಬೇಕು. ಈ ವಚನಕ್ಕೆ ಮೊದಲಿನ ವಚನಗಳಲ್ಲಿ ಯಹೂದಿಯರು ತಾವು ಹಝ್ರತ್ ಈಸಾ ಮಸೀಹರನ್ನು(ಅ) ಶಿಲುಬೆಗೇರಿಸಿ ಕೊಂದುದಾಗಿ ವಾದಿಸಿದ ಬಗ್ಗೆ ಪ್ರಸ್ತಾಪಿಸಲಾಗಿದೆ. ಯಹೂದಿಯರ ವಾದವನ್ನು ತಿರಸ್ಕರಿಸಿ ಅಲ್ಲಾಹನು ಹೇಳಿದನು: ವಾಸ್ತವಿಕವಾಗಿ ಹಝ್ರತ್ ಈಸಾ ಮಸೀಹ್ ಶಿಲುಬೆಯಲ್ಲಿ ಮೃತರಾಗಲಿಲ್ಲ. ಯಹೂದಿಯರಿಗೆ ತಪ್ಪು ಗ್ರಹಿಕೆಯಾಗಿತ್ತು. ಶಿಲುಬೆಗೇರಿಸಲ್ಪಟ್ಟಾಗ ಉಂಟಾದ ಗಾಯಗಳ ನೋವಿನಿಂದ ಹಝ್ರತ್ ಈಸಾ ಮಸೀಹರಿಗೆ ಎಂತಹ ಪ್ರಜ್ಞಾಶೂನ್ಯತೆ ಸಂಭವಿಸಿತೆಂದರೆ ಅವರು ಶಿಲುಬೆಯಲ್ಲಿ ಮೃತರಾದ ಹಾಗೆ ತೋರಿಕೆಯಾಯಿತು. ಇದೇ ಕಾರಣದಿಂದ ಯಹೂದಿಯರಿಗೆ ಹಝ್ರತ್ ಈಸಾ ಮಸೀಹರ ಬಗ್ಗೆ ಅವರು ಮೃತರಾದರೆಂದು ತಪ್ಪು ಗ್ರಹಿಕೆ ಉಂಟಾಯಿತು. ಆದರೆ ಯಹೂದಿಯರು ಇದರ ಬಗ್ಗೆ ಪೂರ್ಣವಾಗಿ ತಪಾಸಣೆ ನಡೆಸಲಿಲ್ಲ. ಅವರು ಕೇವಲ ಸಂಶಯವನ್ನು ಅವಲಂಬಿಸಿದರು.

* ಈ ವಚನದ ಮೊದಲಿನ ಕೆಲವು ವಚನಗಳ ನಂತರ ಅಲ್ಲಾಹನು ಒಂದು ವಚನದಲ್ಲಿ ಹೀಗೆ ಹೇಳಿದ್ದಾನೆ: **ಫಲಾ ಯೂಮಿನೂನ ಇಲ್ಲಾ ಖಲೀಲ** – "ಆದುದರಿಂದ ಕೆಲವರು ಮಾತ್ರವೇ ಹೊರತು ಅವರು ನಂಬುವುದಿಲ್ಲ." (4:156). ಇಂತಹ ಸ್ಪಷ್ಟ ವಚನ ಪವಿತ್ರ ಖುರ್‌ಆನ್‌ನಲ್ಲಿರುವಾಗ ಮೇಲೆ ಸೂಚಿಸಿದ ವಚನಕ್ಕೆ ಬೇರೆ ರೀತಿ ಅರ್ಥ ನೀಡುವುದಾದರೂ ಹೇಗೆ?

ಹೀಗೆ ಹೇಳಿದ ನಂತರ ಅಲ್ಲಾಹನು ಹೀಗೆ ಹೇಳುತ್ತಾನೆ: **"ಇನ್‌ಮ್ಮಿನ್ ಅಹ್‌ಲಿಲ್‌ಕಿತಾಬಿ ಇಲ್ಲಾ ಲಯೂಮಿನನ್ನ ಬಿಹೀ ಖಬ್‌ಲ ಮೌತಿಹೀ"** – ಎಲ್ಲ ಗ್ರಂಥದವರು ತಾವು ಮೃತರಾಗುವುದಕ್ಕೆ ಮೊದಲು ಹೀಗೆಯೇ ನಂಬುವರು. (ಎಂದರೆ ಹಝ್ರತ್ ಮಸೀಹ್ ಶಿಲುಬೆಯಲ್ಲಿ ಮೃತರಾದರೆಂದೇ ನಂಬುವರು.) ಆದರೆ ಗ್ರಂಥದವರ ಈ ವಿಶ್ವಾಸ ತಾವು ಮೃತರಾಗುವ ತನಕವಿರುವುದು. ಅವರು ಮೃತರಾದ ನಂತರ ಅವರಿಗೆ ವಾಸ್ತವಿಕ ಸಂಭವವೇನೆಂದು ತಿಳಿಯುವುದು. ಏಕೆಂದರೆ ಮೃತರಾದ ನಂತರ ವಾಸ್ತವಿಕ ವಿಷಯ ತಿಳಿಯುತ್ತದೆ. ತಾವು ಮಾಡಿದ ತಪ್ಪು ಏನೆಂದು ತಿಳಿಯುತ್ತದೆ.

ನೋಡಿರಿ, ನಾವು ವಿವರಿಸಿದ ಈ ಅರ್ಥ ಎಷ್ಟು ಸ್ಪಷ್ಟವೂ ಸಂದರ್ಭೋಚಿತವೂ ಆಗಿದೆ! ಅಲ್ಲಾಹನು ಹೇಳುವುದು ಹೀಗೆ: ಈ ಲೋಕದಲ್ಲಿ ಜೀವಿಸುವಾಗ ಎಲ್ಲ ಗ್ರಂಥದವರು ಹಝ್ರತ್ ಈಸಾ ಮಸೀಹ್ ಶಿಲುಬೆಯಲ್ಲಿ ಮೃತರಾದರೆಂದು ನಂಬುವರು. ಆದರೆ ಅವರ ಈ ವಿಶ್ವಾಸ ಅವರು ಮೃತರಾಗುವ ತನಕ ಮಾತ್ರ ಇರುವುದು. ಮರಣದ ನಂತರ ಅವರಿಗೆ ತಿಳಿಯುವುದು– ಅವರ ಯೋಚನೆ ತಪ್ಪೆಂದೂ ಹಝ್ರತ್ ಈಸಾ ಮಸೀಹ್ ಶಿಲುಬೆಯಲ್ಲಿ ಮೃತರಾಗಿರಲಿಲ್ಲವೆಂದೂ.

ಇನ್ನೊಂದು ವಿಷಯ ಗಮನಾರ್ಹವಾಗಿದೆ. ನಮ್ಮ ವಿರೋಧಿಗಳು ಈ ವಚನಕ್ಕೆ ನೀಡುವ ಅರ್ಥ ಸರಿಯಾದರೆ ಅದು ಯಹೂದಿಯರಿಗೆ ಬಹಳ ದೊಡ್ಡ ಅನುಗ್ರಹವಾಗುವುದು. ಯಹೂದಿಯರೆಲ್ಲರೂ ಸತ್ಯವಿಶ್ವಾಸಿಗಳಾಗುವರು. ಆದರೆ ಈ ವಚನದ ಮೊದಲಿನ ವಚನಗಳು ಮತ್ತು ಅನಂತರದ ವಚನಗಳು ಯಹೂದಿಯರ ಕೆಟ್ಟ ಕೆಲಸಗಳ ಮತ್ತು ಅವರ ಉದ್ಧಟತನದ ಬಗ್ಗೆ ಪ್ರಸ್ತಾಪಿಸುತ್ತವೆ. ಆದುದರಿಂದ ಮಧ್ಯದ ವಚನವನ್ನು ಯಹೂದಿಯರಿಗೆ ಶುಭವಾರ್ತೆ ನೀಡುವ ರೀತಿಯಲ್ಲಿ ಅರ್ಥ ಹೇಳುವುದಾದರೂ ಹೇಗೆ?

ನಾವು ಹೇಳುವ ಅರ್ಥ ಸರಿ ಎಂಬುದಕ್ಕೆ ಇನ್ನೊಂದು ಸಾಕ್ಷ್ಯ ಹೀಗಿದೆ: ಬೈಝಾವಿ, ಕಶ್ಶಾಫ್ ಮೊದಲಾದ ವ್ಯಾಖ್ಯಾನ ಗ್ರಂಥಗಳಲ್ಲಿ ಮೌತಿಹೀ ಎಂಬ ಪದದ ಇನ್ನೊಂದು ಪಾಠ ಮೌತಿಹಿಮ್ (ಅವರ ಮರಣ) ಎಂದಿರುವುದಾಗಿ ಬರೆದಿದೆ. ಆದುದರಿಂದ **"ಮೌತಿಹೀ"** ಎಂಬ ಪದದ ಸರ್ವನಾಮ **"ಹೀ"** ಎನ್ನುವುದು ಹಝ್ರತ್ ಈಸಾ ಮಸೀಹರನ್ನು ಸೂಚಿಸುವ ಸರ್ವನಾಮ ಖಂಡಿತವಾಗಿಯೂ ಅಲ್ಲ. ಅದು ಪ್ರತಿಯೊಬ್ಬ ಗ್ರಂಥದವನ ಕಡೆಗೆ ಸೂಚಿಸುತ್ತದೆ. ಶಿಲುಬೆಯಲ್ಲಿ ಹಝ್ರತ್ ಈಸಾ ಮಸೀಹ್ ಮೃತರಾದರೆಂಬ ಗ್ರಂಥದವರ ಮಾತಿನ ಕಡೆಗೆ ಆ ಶಬ್ದ ಸೂಚಿಸುತ್ತದೆ. ಏಕೆಂದರೆ ಪವಿತ್ರ ಖುರ್‌ಆನ್‌ನಲ್ಲಿ ಈ ವಚನಕ್ಕೆ ಮೊದಲು ಇದೇ ವಿಷಯ ಪ್ರಸ್ತಾಪಿಸಲಾಗಿದೆ.

ನಾವು ಚರ್ಚಿಸುತ್ತಿರುವ ವಚನದ ಕೊನೆಯ ಭಾಗ **"ವ ಯೌಮಲ್ ಖಿಯಾಮತಿ ಯಕೂನು ಅಲೈಹಿಮ್ ಶಹೀದ"** – ಪುನರುತ್ಥಾನ ದಿನದಂದು ಅವರು (ಈಸಾ) ಅವರ ವಿರುದ್ಧ ಸಾಕ್ಷಿಯಾಗುವರು. (4:160).*

ಈ ವಚನದಿಂದ ಹೀಗೆ ತಿಳಿಯುತ್ತದೆ: ಹಝ್ರತ್ ಈಸಾ ಮಸೀಹ್(ಅ) ಶಿಲುಬೆಯಲ್ಲಿ ಮೃತರಾದರೆಂದು ಗ್ರಂಥದವರು ದೃಢವಾಗಿ ನಂಬುವರು. ಆದರೆ ಪುನರುತ್ಥಾನದ ದಿನ ಎಲ್ಲ ಮೃತರು ಜೀವಂತರಾಗಿ ಎಬ್ಬಿಸಲ್ಪಡುವಾಗ ಹಝ್ರತ್ ಈಸಾ ಮಸೀಹ್ ಎದ್ದು ನಿಂತು ಹೇಳುವರು – ಶಿಲುಬೆಯಲ್ಲಿ ಮೃತರಾದ ಬಗ್ಗೆ ಅವರ ಯೋಚನೆ ತಪ್ಪಾಗಿದೆ ಎಂದು.

ಒಟ್ಟಾರೆ ಹೇಳುವುದಾದರೆ, ಈ ವಚನದ ಸಂದರ್ಭ ಮತ್ತು **"ಮೌತಿಹೀ"** ಎಂಬ ಪದಕ್ಕೆ **"ಮೌತಿಹಿಮ್"** ಎಂಬ ಪಾಠ ಇರುವುದು ಮತ್ತು ಪವಿತ್ರ ಖುರ್‌ಆನಿನ ಇತರ ಖಚಿತವಾದ ಅರ್ಥವಿರುವ ವಚನಗಳು ನಮ್ಮನ್ನು ಅಹ್ಮದಿಯೇತರ ಮತಪಂಡಿತರು ಹೇಳುವ ಅರ್ಥ ತಪ್ಪೆಂದು ಹೇಳಲು ನಿರ್ಬಂಧಿಸುತ್ತವೆ.

## ಪವಿತ್ರ ಖುರ್‌ಆನ್ ವಚನಗಳನ್ನು ವ್ಯಾಖ್ಯಾನಿಸುವ ವಿಧಾನ

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: "ಅವನೇ ನಿನಗೆ ಈ ಗ್ರಂಥವನ್ನು ಅವತೀರ್ಣಗೊಳಿಸಿದ್ದಾನೆ. ಅದರಲ್ಲಿ ಕೆಲವು ಖಚಿತ ವಚನಗಳಿವೆ. ಅವು ಗ್ರಂಥದ ಮೂಲಾಧಾರವಾಗಿವೆ. ಇನ್ನು ಕೆಲವು ವಚನಗಳು ಆಲಂಕಾರಿಕ. ಹೃದಯದಲ್ಲಿ ವಕ್ರತೆಯಿರುವವರು ಗೊಂದಲವನ್ನುಂಟುಮಾಡುವ ಉದ್ದೇಶದಿಂದ ಮತ್ತು ದುರ್ವ್ಯಾಖ್ಯಾನ ಮಾಡಲಿಕ್ಕೋಸ್ಕರ ಅದರಲ್ಲಿ ಆಲಂಕಾರಿಕವಾದುದನ್ನು ಅನುಸರಿಸುತ್ತಾರೆ." (3:8)

ಈ ವಚನದ ಅರ್ಥವನ್ನು ಮೌಲವಿ ನಝೀರ್ ಅಹ್ಮದ್ ದೆಹ್ಲವಿ ಹೀಗೆ ಬರೆದಿದ್ದಾರೆ: "ಹೇ ಪೈಗಂಬರ್, ನಿನಗೆ ಈ ಗ್ರಂಥವನ್ನು ಅವತೀರ್ಣಗೊಳಿಸಿದವನು ಆ ಪರಿಶುದ್ಧನಾದವನಾಗಿದ್ದಾನೆ. ಅದರಲ್ಲಿ ಕೆಲವು ವಚನಗಳು ಖಚಿತವಾಗಿವೆ. ಎಂದರೆ ಸ್ಪಷ್ಟವೂ ನಿರ್ಣಾಯಕವೂ ಆಗಿವೆ. ಅವುಗಳೇ ಮೂಲಗ್ರಂಥವಾಗಿದೆ. ಬೇರೆ ಕೆಲವು ಅಸ್ಪಷ್ಟ ವಚನಗಳಿವೆ. ಅವುಗಳ ಅರ್ಥಗಳಲ್ಲಿ ಅನೇಕ ಪಾರ್ಶ್ವಗಳು ಇರಬಹುದು. ಯಾರ ಹೃದಯಗಳಲ್ಲಿ ವಕ್ರತೆ ಇದೆಯೋ ಅವರು ಪವಿತ್ರ ಖುರ್‌ಆನಿನ ಈ ಅಸ್ಪಷ್ಟ ವಚನಗಳನ್ನು ಕಲಹ ಗೊಂದಲಗಳನ್ನು ಸೃಷ್ಟಿಸಲು ಉಪಯೋಗಿಸುತ್ತಾರೆ."

ನೋಡಿರಿ, ಅಲ್ಲಾಹನು ನಮಗೆ ಪವಿತ್ರ ಖುರ್‌ಆನನ್ನು ವ್ಯಾಖ್ಯಾನಿಸುವ ವಿಧಾನವನ್ನು ತಿಳಿಸಿರುವನು. ಅವುಗಳ ಮೂಲಕ ಎಲ್ಲ ಜಗಳಗಳ ಬೇರು ಕತ್ತರಿಸಲ್ಪಡುತ್ತವೆ. ಪವಿತ್ರ ಖುರ್‌ಆನಿನ ಕೆಲವು ವಚನಗಳಿಗೆ ನಾನಾ ವಿಧ ಅರ್ಥ ನೀಡಬಹುದಾಗಿದೆ. ಉದಾಹರಣೆಗೆ, ಒಂದು ಸರ್ವನಾಮವು ಒಂದು ವಸ್ತುವಿನ ಕಡೆಗೆ ಸೂಚಿಸುವಂತಿರಬಹುದು ಮತ್ತು ಇನ್ನೊಂದು ವಸ್ತುವಿನ ಕಡೆಗೆ ಸೂಚಿಸುತ್ತದೆ ಎಂದು ಹೇಳುವ ಸಾಧ್ಯತೆಗಳೂ ಇರುತ್ತವೆ. ಯಾವುದೇ ಸಂಶಯ ತಲೆದೋರಿದರೆ ಅಲ್ಲಾಹನು ನಮಗೆ ನೀಡುವ ಮಾರ್ಗದರ್ಶನವೇನೆಂದರೆ ಪವಿತ್ರ ಖುರ್‌ಆನಿನ ಖಚಿತಾರ್ಥ ಸೂಚಿಸುವ ವಚನಗಳಿಗೆ ವಿರುದ್ಧವಾದ ಅರ್ಥ ಹೇಳಬಾರದೆಂದಾಗಿದೆ.

ನೀವು ಈ ಕೆಳಗಿನ ವಚನ ನೋಡಿರಿ. ಇದು ಎಷ್ಟು ಖಚಿತಾರ್ಥ ನೀಡುವ ಖಂಡಿತ ವಚನವಾಗಿದೆ! **"ಅಗ್‌ರೈನಾ ಬೈನಹುಮುಲ್ ಅದಾವತ ವಲ್ ಬಗ್‌ಝಾಅ ಇಲಾ ಯೌಮಿಲ್ ಖಿಯಾಮತಿ"** – "ನಾವು ಅವರ ಮಧ್ಯೆ ಅಂತ್ಯ ದಿನದವರೆಗೆ ಶತ್ರುತ್ವ ಮತ್ತು ದ್ವೇಷಭಾವನೆ ಉಂಟಾಗುವಂತೆ ಮಾಡಿದೆವು." (5:15).

ಯಹೂದಿ ಮತ್ತು ಕ್ರೈಸ್ತರ ಮಧ್ಯೆ ಅಂತ್ಯ ದಿನದ ತನಕ ದ್ವೇಷವು ಇರುವುದು ಎಂದು ಪವಿತ್ರ ಖುರ್‌ಆನ್ ಈ ವಚನದಲ್ಲಿ ಹೇಳಿದೆ.

ಈ ಸ್ಪಷ್ಟಾರ್ಥ ನೀಡುವ ವಚನ ಪವಿತ್ರ ಖುರ್‌ಆನಿನಲ್ಲಿರುವಾಗ ಒಂದು ಕಾಲ ಬರಲಿದೆ. ಆಗ ಎಲ್ಲ ಯಹೂದಿಯರು ಹಝ್ರತ್

* ಈ ವಚನ ಸಹ ಹಝ್ರತ್ ಈಸಾ ಮಸೀಹರು ಮೃತರಾಗಿರುವರೆಂಬುದಕ್ಕೆ ಸಾಕ್ಷ್ಯಾಧಾರವಾಗಿದೆ. ಏಕೆಂದರೆ ಅಲ್ಲಾಹನು ಹೇಳುವುದೇನೆಂದರೆ ಹಝ್ರತ್ ಈಸಾ ಮಸೀಹ್ ಪುನರುತ್ಥಾನ ದಿನದಂದು ಸಾಕ್ಷಿಯಾಗುವರು ಎಂದಾಗಿದೆ. ಅವರು ಪುನರುತ್ಥಾನಕ್ಕೆ ಮೊದಲು ಇಳಿದು ಬರಲಿಕ್ಕಿದ್ದರೆ ಈ ರೀತಿ ಹೇಳುವುದು ತಪ್ಪಾಗುತ್ತದೆ.

ಈಸಾ ಮಸೀಹರನ್ನು ನಂಬುವರು ಹಾಗೂ ಅವರು ಮತ್ತು ಕ್ರೈಸ್ತರು ಒಂದಾಗುವರು ಎಂದು ಹೇಗೆ ತಾನೆ ಹೇಳಲು ಸಾಧ್ಯ?

ಕೆಲವು ಮತಪಂಡಿತರು **"ಇನ್‌ಮ್ಮಿನ್ ಅಹ್‌ಲಿಲ್ ಕಿತಾಬಿ"** ಎಂದು ಪ್ರಾರಂಭವಾಗುವ ಪವಿತ್ರ ಖುರ್‌ಆನ್ ವಚನದ ಬಗ್ಗೆ ಹೀಗೆ ಸಹ ಹೇಳುತ್ತಾರೆ– ಇಂದಿನ ಕಾಲದ ಮತಪಂಡಿತರು ಹೇಳುವ ಅರ್ಥವನ್ನೇ ಹಝ್ರತ್ ಅಬೂ ಹುರೈರ(ರ) ಸಹ ಹೇಳಿದ್ದರೆಂದು. ಇದಕ್ಕೆ ಉತ್ತರವಾಗಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಹೇಳಿದರು:

"ಮೌತಿಹೀ ಎಂಬ ಪದದಲ್ಲಿರುವ ಹೀ ಎಂಬ ಸರ್ವನಾಮ ಗ್ರಂಥದವನ ಕಡೆಗೆ ಸೂಚಿಸುತ್ತದೆ. ಅದು ಹಝ್ರತ್ ಈಸಾ ಮಸೀಹರನ್ನು(ಅ) ಸೂಚಿಸುವುದಿಲ್ಲ. ಈ ವಚನದ ಪಾಠಾಂತರವಾದ ಮೌತಿಹಿಮ್ ಇದನ್ನೇ ಸ್ಪಷ್ಟಪಡಿಸುತ್ತದೆ. ಹಝ್ರತ್ ಈಸಾ ಮಸೀಹರನ್ನೇ ಈ ಸರ್ವನಾಮ ಸೂಚಿಸುವುದಾದರೆ ಇನ್ನೊಂದು ಪಾಠಾಂತರ ಮೌತಿಹಿಮ್ ಬರಲು ಕಾರಣವೇನು? ತಫ್‌ಸೀರ್ ಸನಾಯೀ ನೋಡಿರಿ. ಅದರಲ್ಲಿ ನಮ್ಮ ವಾದವನ್ನು ಬಲಯುತವಾಗಿ ಬೆಂಬಲಿಸಲಾಗಿದೆ. ಅದರಲ್ಲಿ ಹೀಗೆ ಸಹ ಬರೆಯಲಾಗಿದೆ: ಅಬೂ ಹುರೈರ(ರ) ಇದರ ಬಗ್ಗೆ ಸೂಚಿಸಿದ ಅಭಿಪ್ರಾಯದ ಬಗ್ಗೆ ಹೇಳುವುದಾದರೆ ಅಬೂ ಹುರೈರರವರಿಗೆ ಪವಿತ್ರ ಖುರ್‌ಆನಿನ ಬಗ್ಗೆ ಇದ್ದ ಜ್ಞಾನ ಬಲಹೀನವಾಗಿತ್ತು. ಅವರ ಬುದ್ಧಿಶಕ್ತಿಯ ಬಗ್ಗೆ ಹದೀಸು ಪಂಡಿತರು ಆಕ್ಷೇಪಿಸಿರುವರು. ಅಬೂ ಹುರೈರ ಅನುಕರಿಸುವ ಸ್ವಭಾವ ಹೊಂದಿದ್ದರೆಂದೂ ಬುದ್ಧಿ ಮತ್ತು ತಿಳುವಳಿಕೆ ಬಹಳ ಕಡಿಮೆ ಹೊಂದಿದ್ದರೆಂದೂ ಹೇಳಲಾಗುತ್ತಿದೆ. ನಾನು ಹೇಳಲು ಬಯಸುವುದೇನೆಂದರೆ ಅಬೂ ಹುರೈರ(ರ) ಹಾಗೆ ಅರ್ಥ ಹೇಳಿದ್ದರೆ ಅದು ಅವರು ಮಾಡಿದ ತಪ್ಪಾಗಿದೆ. ಅನೇಕ ಹದೀಸುಗಳ ಬಗ್ಗೆ ಹದೀಸು ಪಂಡಿತರು ಹೀಗೆ ಹೇಳಿದ್ದಾರೆ: ಕೆಲವು ವಿಷಯಗಳನ್ನು ಮನವರಿಕೆ ಮಾಡುವುದರಲ್ಲಿ ಅವರು ತಪ್ಪು ಮಾಡಿರುವರು.

"ಒಂದು ವಿಷಯ ಅಂಗೀಕರಿಸಲ್ಪಟ್ಟಿದೆ. ಒಬ್ಬ ಸಹಾಬಿಯ (ಪೈಗಂಬರರ ಶಿಷ್ಯರ) ಅಭಿಪ್ರಾಯವನ್ನು ಧಾರ್ಮಿಕ ನಿಯಮಗಳಿಗೆ ಸಾಕ್ಷ್ಯಾಧಾರವಾಗಿ ಗಣಿಸಲಾಗದು. ಸಹಾಬಿಗಳ ಒಮ್ಮತಾಭಿಪ್ರಾಯ ಮಾತ್ರ ಧಾರ್ಮಿಕ ನಿಯಮದ ಸಾಕ್ಷ್ಯಾಧಾರ ಆಗಲು ಸಾಧ್ಯವಿದೆ. ಎಲ್ಲ ಪ್ರವಾದಿಗಳು ಮೃತರಾಗಿರುವರು ಎಂದು ಸಹಾಬಿಗಳ ಇಜ್‌ಮಾಅ್ (ಒಮ್ಮತಾಭಿಪ್ರಾಯ) ಆಗಿದೆ ಎಂದು ನಾವು ಇದರ ಮೊದಲು ವಿವರಿಸಿದ್ದೇವೆ. ನೆನಪಿಡಬೇಕಾದುದೇನೆಂದರೆ, ಪವಿತ್ರ ಖುರ್‌ಆನಿನ ಖಬ್‌ಲ ಮೌತಿಹೀ ಎಂಬ ಪದಗಳಿಗೆ ಮೌತಿಹಿಮ್ ಎಂಬ ಪಾಠಾಂತರ ಇದೆ. ಈ ವಿಷಯ ವರದಿಯಾದ ಹದೀಸು ಸಹೀಹ್ ಎಂಬ ಸ್ಥಾನ ಪಡೆದಿದೆ. ಎಂದರೆ ಈ ಹದೀಸು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನುಡಿದುದೆಂದು ಸಾಬೀತಾಗಿದೆ. ಆದುದರಿಂದ ಅಬೂ ಹುರೈರ ಹೇಳಿದ ವೈಯಕ್ತಿಕ ಅಭಿಪ್ರಾಯ ತಿರಸ್ಕರಿಸಲು ಯೋಗ್ಯವಾಗಿದೆ. ಏಕೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದುದರ ಎದುರಿಗೆ ಅದು ನಿಷ್ಪ್ರಯೋಜಕವಾಗಿದೆ. ಅದನ್ನು ಅಂಗೀಕರಿಸಲು ಒತ್ತಿ ಹೇಳುವುದು ಕುಫ್ರ್ (ಅವಿಶ್ವಾಸ) ತನಕ ತಲಪಿಸುವುದು. ಅಷ್ಟು ಮಾತ್ರವಲ್ಲ, ಅಬೂ ಹುರೈರ ಹೇಳಿದ ಮಾತಿನಿಂದ ಪವಿತ್ರ ಖುರ್‌ಆನ್ ಹೇಳಿದುದು ತಪ್ಪೆಂದು ಆಗುತ್ತದೆ. ಏಕೆಂದರೆ ಯಹೂದಿಯರೂ ಕ್ರೈಸ್ತರೂ ಖಿಯಾಮತ್ ತನಕ ಇರುವರೆಂದು ಪವಿತ್ರ ಖುರ್‌ಆನ್ ಅನೇಕ ಸಾರಿ ಹೇಳಿದೆ. ಅವರು ಸಂಪೂರ್ಣವಾಗಿ ನಿಶ್ಶೇಷ ಸ್ಥಿತಿಗೆ ತಲಪಲಾರರು. ಆದರೆ ಅಬೂ ಹುರೈರ ಹೇಳುವುದೇನೆಂದರೆ ಯಹೂದಿಯರು ಭೂಮಿಯಲ್ಲಿ ಸಂಪೂರ್ಣವಾಗಿ ಇಲ್ಲದಾಗುವರು. ಹೀಗೆ ಹೇಳುವುದು ಪವಿತ್ರ ಖುರ್‌ಆನಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಪವಿತ್ರ ಖುರ್‌ಆನನ್ನು ನಂಬುವವರು ಅಬೂ ಹುರೈರ ಹೇಳಿದ ಈ ಮಾತನ್ನು ಕಸ ವಸ್ತುವೆಂಬಂತೆ ಗಣಿಸಿ ಎಸೆದು ಬಿಡಬೇಕು." (ಝುಮೀಮ ಬರಾಹೀನೆ ಅಹ್ಮದಿಯಾ ಭಾಗ 5 ಪುಟ 234–235).

ಒಂದು ವಿಷಯ ದೃಢಪಟ್ಟಿದೆ. ಈ ವಚನದಲ್ಲಿರುವ ಮೌತಿಹೀ ಎಂಬ ಪದದಲ್ಲಿರುವ ಹೀ ಎಂಬ ಸರ್ವನಾಮ ಗ್ರಂಥದವರ ಕಡೆಗೆ ತಿರುಗುತ್ತದೆ. ಅದು ಹಝ್ರತ್ ಈಸಾ ಮಸೀಹರ ಕಡೆಗೆ ಸೂಚಿಸುವುದಿಲ್ಲ. ಈ ಸರ್ವನಾಮ ಹಝ್ರತ್ ಈಸಾ ಮಸೀಹರನ್ನು ಸೂಚಿಸುವುದಿಲ್ಲ ಎಂದು ಸಾಬೀತಾದ ನಂತರ ಬಿಹೀ ಎಂಬ ಪದದಲ್ಲಿರುವ ಸರ್ವನಾಮ ಹಝ್ರತ್ ಈಸಾ ಮಸೀಹರ ಕಡೆಗೆ ಸೂಚಿಸುತ್ತದೆ ಎಂದು ಊಹಿಸಿ ಯಾವುದಾದರೂ ಅರ್ಥ ಹೇಳಿದರೂ ಈ ವಚನದಿಂದ ಹಝ್ರತ್ ಈಸಾ ಮಸೀಹ್ ಜೀವಂತವಾಗಿ ಇರುವರೆಂದು ಖಂಡಿತವಾಗಿಯೂ ಸಾಬೀತಾಗುವುದಿಲ್ಲ.

ಆಶ್ಚರ್ಯಕರವಾದ ವಿಷಯವೇನೆಂದರೆ ಪವಿತ್ರ ಖುರ್‌ಆನಿನ ಯಾವ ವಚನಗಳನ್ನು ನಮ್ಮ ವಿರೋಧಿಗಳು ಮುತಶಾಬಿಹಾತ್ (ಆಲಂಕಾರಿಕ ವಚನಗಳು) ಎಂದು ನಂಬುತ್ತಾರೋ ಮತ್ತು ಹಿಂದಿನ ಕಾಲದ ವ್ಯಾಖ್ಯಾನಗಾರರು ಸಹ ಅದರ ಬಗ್ಗೆ ಅರ್ಥ ಹೇಳುವಾಗ ಒಬ್ಬರಿನ್ನೊಬ್ಬರೊಂದಿಗೆ ಬಹಳ ಭಿನ್ನಾಭಿಪ್ರಾಯ ಹೊಂದಿದ್ದರೋ ಅಂತಹ ವಚನಗಳ ಮೇಲೆ ಇಂತಹ ವೈಭವಶಾಲಿ ಸಮಸ್ಯೆಗಳ ಅಸ್ತಿಭಾರ ಹಾಕಲಾಗುತ್ತಿದೆ ಮತ್ತು ಪವಿತ್ರ ಖುರ್‌ಆನಿನ ಮುಹ್‌ಕಮಾತ್ (ಖಚಿತ ವಚನಗಳು) ಸಂಪೂರ್ಣವಾಗಿ ಕಡೆಗಣಿಸಲ್ಪಡುತ್ತವೆ. ಹೀಗೆ ಮಾಡುವುದು ಎಂತಹ ಜನರ ಕೆಲಸ ಎನ್ನುವುದರ ಬಗ್ಗೆ ಅಲ್ಲಾಹನು ಏನು ಹೇಳಿದ್ದಾನೆಂದು ನೋಡಿರಿ:

**"ಅಲ್ಲದೀನ ಫೀ ಖುಲೂಬಿಹಿಮ್ ಝೈಗುನ್ ಫಯತ್ತಬಿಊನ ಮಾ ತಶಾಬಹ ಮಿನ್‌ಹುಬ್‌ತ್ತಿಗ್ಗಾಅಲ್ ಫಿತ್‌ನತಿ"** – "ಹೃದಯದಲ್ಲಿ ವಕ್ರತೆಯಿರುವವರು ಗೊಂದಲವನ್ನುಂಟು ಮಾಡುವ ಉದ್ದೇಶದಿಂದ ಮತ್ತು ಅದನ್ನು ದುರ್ವ್ಯಾಖ್ಯಾನ ಮಾಡಲಿಕ್ಕೋಸ್ಕರ ಅದರಲ್ಲಿ ಆಲಂಕಾರಿಕವಾದುದನ್ನು ಅನುಸರಿಸುತ್ತಾರೆ." (3:8).

ಆದರೆ ಅಲ್ಲಾಹನ ಅನುಗ್ರಹದಿಂದ ನಾವು ಈ ವಚನದ ಆಲಂಕಾರಿಕ ಸ್ವರೂಪವನ್ನು ಹೇಗೆ ವಿವರಿಸಿದ್ದೇವೆ ಎಂದರೆ ಈ ವಚನ ಸಹ ಖಚಿತವಾದ ವಚನಗಳ ಹಾಗೆ ಕಾಣಿಸುತ್ತದೆ. ಕಣ್ಣಿರುವವರು ನೋಡಲಿ.

## ಹಝ್ರತ್ ಈಸಾ ಮಸೀಹ್(ಅ) ಮೃತರಾದ ಬಗ್ಗೆ ಹದೀಸುಗಳ ಸಾಕ್ಷ್ಯಾಧಾರಗಳು

ನಾವು ಇದರ ಮೊದಲು ನೀಡಿದ ವಿವರಣೆಗಳಿಂದ ಚೆನ್ನಾಗಿ ತಿಳಿದು ಬರುವುದೇನೆಂದರೆ, ಹಝ್ರತ್ ಈಸಾ ಮಸೀಹ್(ಅ) ಜೀವಿಸಿರುವರೆಂಬ ಪ್ರಸ್ತಾಪವನ್ನು ಪವಿತ್ರ ಖುರ್‌ಆನ್ ದೂರದಿಂದಲೇ ಒದ್ದು ಹಾಕುತ್ತದೆ. **"ಮನ್ ಅಸ್‌ದಖು ಮಿನಲ್ಲಾಹಿ ಖೀಲನ್"** – ಮಾತಿನಲ್ಲಿ ಅಲ್ಲಾಹನಿಗಿಂತ ಸತ್ಯವಂತ ಬೇರೆ ಯಾರು? (4:123). ಈ ವಚನ ಸೂಚಿಸುವುದೇನೆಂದರೆ, ಅಲ್ಲಾಹನೇ ಒಂದು ವಿಷಯದ ಬಗ್ಗೆ ಸಾಕ್ಷ್ಯ ಹೇಳಿರುವಾಗ ಹದೀಸಿನಿಂದ ಸಾಕ್ಷ್ಯವನ್ನು ಹುಡುಕುವ ಆವಶ್ಯಕತೆಯೇ ಇರುವುದಿಲ್ಲ. ಆದರೆ ಓದುಗರಿಗೆ ಹೆಚ್ಚು ಸಮಾಧಾನ ನೀಡಲಿಕ್ಕೋಸ್ಕರ ಹದೀಸುಗಳಿಂದಲೂ ಹಝ್ರತ್ ಈಸಾ ಮಸೀಹರು(ಅ) ಮೃತರಾದ ಬಗ್ಗೆ ಸಾಕ್ಷ್ಯಾಧಾರಗಳನ್ನು ನೀಡಲು

ಬಯಸುತ್ತೇವೆ. ಯಾವುದೇ ಶಂಕೆ ತಲೆದೋರದಿರಲು ಹೀಗೆ ಮಾಡಲಾಗುತ್ತಿದೆ.

ಒಂದು ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳುತ್ತಾರೆ: **ಮಾ ಮಿನ್ ನಫ್ಸಿನ್ ಮನ್ಫೂಸತಿಲ್ ಯೌಮ ಯಅ್ತೀ ಅಲೈಹಾ ಮಿಅತು ಸನತಿನ್ ವಹಿಯ ಯೌಮಇಝಿನ್ ಹಯ್ಯ.** – "ಈಗ ಜೀವಿಸಿರುವ ಎಲ್ಲ ಜನರು ಒಂದುನೂರು ವರ್ಷ ದಾಟಿಹೋದ ನಂತರ ಜೀವಂತವಾಗಿರಲಾರರು." (ಸಹೀಹ್ ಮುಸ್ಲಿಮ್).

ಈ ಹದೀಸು ಬಹಳ ಸ್ಪಷ್ಟವಾಗಿ ಹಝ್ರತ್ ಈಸಾ ಮಸೀಹ್(ಅ) ನಿಧನ ಹೊಂದಿದ ಬಗ್ಗೆ ಸ್ಪಷ್ಟವಾಗಿ ಹೇಳುತ್ತದೆ. ವಾಸ್ತವಿಕ ವಿಷಯವೇನೆಂದರೆ, ಹಝ್ರತ್ ಈಸಾ ಮಸೀಹ್(ಅ) ಈಗಲೂ ಜೀವಿಸಿದ್ದರೆ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲೂ ಜೀವಿಸಿರಬಹುದು. ಹಾಗೆ ಜೀವಿಸಿದ್ದರೆ ನೂರು ವರ್ಷದೊಳಗೆ ಖಂಡಿತವಾಗಿಯೂ ಮೃತರಾಗಿರಬೇಕು.

ಇನ್ನೊಂದು ಹದೀಸು ಹೀಗಿದೆ: **ಇನ್ನ ಈಸಬ್ನು ಮರ್ಯಮ ಆಶ ಇಶ್ರೀನ ವ ಮಿಅತ ಸನತಿನ್**. – "ನಿಶ್ಚಯವಾಗಿಯೂ ಹಝ್ರತ್ ಈಸಾ ಮಸೀಹ್ ನೂರ ಇಪ್ಪತ್ತು ವರ್ಷಗಳ ಕಾಲ ಜೀವಿಸಿದ್ದರು." (ತಬ್ರಾನಿ ಮುಸ್ತದ್ರಕ್ ಹಾಕಿಮ್).

ಈ ಹದೀಸು ಯಾವುದೇ ಸಂಶಯವನ್ನು ಬಾಕಿಯಾಗಿ ಇರಿಸುವುದಿಲ್ಲ. ಹಝ್ರತ್ ಈಸಾ ಮಸೀಹರ(ಅ) ವಯಸ್ಸನ್ನು ಹೇಳಿ ಈ ಹದೀಸು ಅವರು ನಂತರ ಮೃತರಾದರೆಂದು ಸ್ಪಷ್ಟವಾಗಿ ಹೇಳುತ್ತದೆ. ಇದರ ಬಗ್ಗೆ ಚರ್ಚೆ ಮುಂದುವರಿಸುವುದರ ಆವಶ್ಯಕತೆ ಇಲ್ಲದಂತೆ ಮಾಡುತ್ತದೆ. ಆದರೆ ನಮ್ಮ ಉದ್ದೇಶ ಜನರಿಗೆ ಈ ವಿಷಯದ ಬಗ್ಗೆ ಸಮಾಧಾನವುಂಟಾಗುವಂತೆ ಮಾಡುವುದಾಗಿದೆ. ಆದುದರಿಂದ ಇನ್ನೊಂದು ಹದೀಸನ್ನು ಪ್ರಸ್ತಾಪಿಸುತ್ತೇವೆ.

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: **ಲೌಕಾನ ಮೂಸಾ ವ ಈಸಾ ಹಯ್ಯಯ್‌ನಿ ಲಮಾ ವಸಿಅಹುಮಾ ಇಲ್ಲತ್ತಿಬಾಈ.** – "ಮೂಸಾ ಮತ್ತು ಈಸಾ ಜೀವಂತರಾಗಿರುತ್ತಿದ್ದರೆ ಅವರಿಗೆ ನನ್ನನ್ನು ಅನುಸರಿಸದೆ ಇರಲು ಸಾಧ್ಯವಾಗುತ್ತಿರಲಿಲ್ಲ." (ತಫ್ಸೀರ್ ಇಬ್ನು ಕಸೀರ್ ಸಂಪುಟ 2 ಪುಟ 246).

ಸುಬ್‌ಹಾನಲ್ಲಾಹ್ (ಅಲ್ಲಾಹನು ಪರಿಶುದ್ಧನು), ಈ ಹದೀಸ್ ಅತ್ಯಂತ ನಿರ್ಣಾಯಕವಾಗಿದೆ. ಈ ಹದೀಸು ಹಝ್ರತ್ ಈಸಾ ಮಸೀಹ್(ಅ) ಮೃತರಾದರೆಂದು ಸಾವಿರ ಸೂರ್ಯನನ್ನು ಉದಿಸುವಂತೆ ಮಾಡಿದೆ. ಈ ವಿಷಯಕ್ಕೆ ಸಂಬಂಧಿಸಿ ದೂರದ ಮೂಲೆಯಲ್ಲೂ ಯಾವುದೇ ಅಂಧಕಾರವಿರದಂತೆ ಮಾಡಿದೆ.

ಇಷ್ಟೇ ಅಲ್ಲ, ಇನ್ನೊಂದು ವಿಷಯ ನೋಡಿರಿ. ಮಿಅ್‌ರಾಜ್ ಬಗ್ಗೆ ವಿವರಣೆ ನೀಡುವ ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳುತ್ತಾರೆ: "ನಾನು ಎರಡನೆಯ ಆಕಾಶಕ್ಕೆ ಹೋದಾಗ ನಾನು ಅಲ್ಲಿ ಯಹ್‌ಯಾ ಮತ್ತು ಈಸಾರನ್ನು ಕಂಡೆನು." (ಬುಖಾರಿ ಮತ್ತು ಮುಸ್ಲಿಮ್)

ಹಝ್ರತ್ ಯಹ್‌ಯಾ ಮೃತರಾಗಿರುವರೆಂದು ಎಲ್ಲರೂ ನಂಬುತ್ತಾರೆ. ಅವರ ಆತ್ಮ ಅವರ ಭೌತಿಕ ದೇಹದಿಂದ ಬಿಟ್ಟು ಹೋಗಿದೆ. ಮೃತರ ಆತ್ಮದೊಂದಿಗೆ ಮೃತರ ಆತ್ಮವೇ ಇರಲು ಸಾಧ್ಯ. ಆದುದರಿಂದ ಹಝ್ರತ್ ಈಸಾ ಮಸೀಹ್ ಮೃತರಾಗಿರುವರೆಂದು ಸಾಬೀತಾಗುತ್ತದೆ. ಮೃತ ಆತ್ಮಗಳೊಂದಿಗೆ ಒಬ್ಬ ಜೀವಂತ ಮನುಷ್ಯನು ಇರುವುದು ಅಸಾಧ್ಯವಾಗಿದೆ.

ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ಹಝ್ರತ್ ಈಸಾ ಮಸೀಹ್(ಅ) ಮೃತರಾಗಿರುವರೆಂದು ಸಾಬೀತುಗೊಳಿಸುತ್ತವೆ ಎಂದು ಮೇಲೆ ನಾವು ನೀಡಿದ ವಿವರಣೆಗಳಿಂದ ತಿಳಿಯಬಹುದಾಗಿದೆ.

ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹಝ್ರತ್ ಈಸಾ ಮಸೀಹ್(ಅ) ಆಕಾಶಕ್ಕೆತ್ತಲ್ಪಡಲಿಲ್ಲ ಎಂದು ಹೇಳುತ್ತದೆ. ಎಲ್ಲ ಸಾತ್ವಿಕ ಜನರು ಮೃತರಾದ ನಂತರ ಆಧ್ಯಾತ್ಮಿಕವಾಗಿ ಉನ್ನತಿಗೇರಿಸಲ್ಪಡುವ ಹಾಗೆ ಹಝ್ರತ್ ಈಸಾ ಮಸೀಹರೂ(ಅ) ಆಧ್ಯಾತ್ಮಿಕವಾಗಿ ಉನ್ನತಿಗೇರಿಸಲ್ಪಟ್ಟರೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಅದಲ್ಲದೆ ಹಝ್ರತ್ ಈಸಾ ಮಸೀಹ್(ಅ) ಸ್ವತಃ ತನ್ನ ಬಾಯಿಯಿಂದ "ನೀವು ನನ್ನನ್ನು ಜೀವಂತನೆಂದು ಏಕೆ ನಂಬುತ್ತಿರುವಿರಿ. ನನ್ನ ಸಮುದಾಯವು ಬಿಗಡಾಯಿಸುವ ಮೊದಲೇ ನಾನು ಮೃತನಾದೆನು" ಎಂದು ಹೇಳುವಂತೆ ಮಾಡಲಾಗಿದೆ. ಅಲ್ಲಾಹನು ತನ್ನ ತೀರ್ಪನ್ನು ಸಹ ಹೇಳಿರುವನು. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಮುಂಚಿತವಾಗಿ ಆಗಮಿಸಿದ ಎಲ್ಲ ಸಂದೇಶವಾಹಕರು ಮೃತರಾಗಿರುವರೆಂದು ಅಲ್ಲಾಹನು ಹೇಳಿರುವನು. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹದೀಸು ಹಝ್ರತ್ ಈಸಾ ಮಸೀಹರು ಎಷ್ಟು ಕಾಲ ಜೀವಿಸಿದರೆಂಬುದನ್ನು ಸಹ ಹೇಳಿದೆ. ಅವರು 120 ವರ್ಷ ಕಾಲ ಜೀವಿಸಿದರೆಂದು ಹದೀಸಿನಲ್ಲಿದೆ. ಹಝ್ರತ್ ಮೂಸಾ(ಅ) ಮತ್ತು ಹಝ್ರತ್ ಈಸಾ ಮಸೀಹ್(ಅ) ಜೀವಿಸಿರುತ್ತಿದ್ದರೆ ಅವರಿಬ್ಬರೂ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿಗಳಾಗಲು ನಿರ್ಬಂಧಿತರಾಗುತ್ತಿದ್ದರೆಂದು ಸಹ ಹದೀಸಿನಲ್ಲಿದೆ.

ಮೇಲೆ ವಿವರಿಸಿದ ಎಲ್ಲ ಸಾಕ್ಷ್ಯಾಧಾರಗಳು ಇದ್ದರೂ ಯಾರಾದರೂ ತನ್ನ ಹಟವನ್ನು ಬಿಟ್ಟುಬಿಡುವುದಿಲ್ಲವಾದರೆ ಅದು ಅವನ ಇಚ್ಛೆಗೆ ಬಿಟ್ಟುದಾಗಿದೆ. ನಾವು ನಮ್ಮ ಸಾಕ್ಷ್ಯಾಧಾರಗಳನ್ನು ಸಂಪೂರ್ಣವಾಗಿ ನೀಡಿದೆವು. ನಿರಾಕರಿಸುವ ಜನರ ವಿಷಯ ಅಲ್ಲಾಹನ ಕೈಯಲ್ಲಿದೆ. ⬣

## ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

ಜನಾಬ್ ಕೆ.ಕೆ. ಬದ್ರುದ್ದೀನ್ ಸಾಹಿಬ್, ಬೆಂಗಳೂರು. ರೂ. 2000/–

ಜನಾಬ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್, ಬೆಂಗಳೂರು. ರೂ. 1000/–

# ಅಹ್ಮದಿಯಾ ಜಮಾಅತಿನ ಪ್ರಗತಿ

**ಯು.ಕೆ. ವಾರ್ಷಿಕ ಸಮ್ಮೇಳನ (ಜಲ್ಸಾ ಸಾಲಾನ)ದ ದ್ವಿತೀಯ ದಿನದಂದು (3-8-2019)**

**ಅಹ್ಮದಿಯಾ ಜಮಾಅತಿನ ಖಲೀಫರು ಮಾಡಿದ ಭಾಷಣದಿಂದ ಸಂಗ್ರಹಿತ**

* ಅಲ್ಲಾಹನ ಅನುಗ್ರಹದಿಂದ ಜಗತ್ತಿನಾದ್ಯಂತ 213 ರಾಷ್ಟ್ರಗಳಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿಸಲ್ಪಟ್ಟಿದೆ.
* ಕಳೆದ 35 ವರ್ಷಗಳಲ್ಲಿ ಮಾತ್ರ ಅಲ್ಲಾಹನ ಅನುಗ್ರಹದಿಂದ 132 ಹೊಸ ರಾಷ್ಟ್ರಗಳಲ್ಲಿ ಜಮಾಅತ್ ಸ್ಥಾಪಿಸಲ್ಪಟ್ಟಿದೆ.
* ಈ ವರ್ಷ ಅರ್ಮೇನಿಯಾದಲ್ಲಿ ಜಮಾಅತ್ ಸ್ಥಾಪಿಸಲ್ಪಟ್ಟಿತು. ಅರ್ಮೇನಿಯಾ ಒಂದು ಪ್ರಬಲ ಕ್ರಿಸ್ತೀಯ ರಾಷ್ಟ್ರವಾಗಿದೆ. ಜಾರ್ಜಿಯಾ ಜಮಾಅತ್ ಮತ್ತು ಮಿಶನರಿಯ ಪರಿಶ್ರಮದ ಫಲವಾಗಿ ಅರ್ಮೇನಿಯಾದಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿತವಾಯಿತು.
* ಈ ವರ್ಷ ಅಲ್ಲಾಹನ ಅನುಗ್ರಹದಿಂದ 849 ಹೊಸ ಜಮಾಅತ್‌ಗಳು ಸ್ಥಾಪಿತವಾದವು. ಆ ಪೈಕಿ ಘಾನದಲ್ಲಿ 171, ನೈಜರ್‌ನಲ್ಲಿ 102, ಐವರಿಕೋಸ್ಟ್‌ನಲ್ಲಿ 83, ಸಿರ್‍ರಾಲಿಯೋನ್‌ನಲ್ಲಿ 78.
* 1499 ಹೊಸ ಪ್ರದೇಶಗಳಲ್ಲಿ ಅಹ್ಮದಿಯಾ ಸಂದೇಶ ತಲಪಿತು.
* ಈ ವರ್ಷ ಅಹ್ಮದಿಯಾ ಜಮಾಅತಿನ ಅಧೀನಕ್ಕೆ ಬಂದ ಮಸೀದಿಗಳು 355. ಆ ಪೈಕಿ 139 ಮಸೀದಿಗಳು ಹೊಸತಾಗಿ ನಿರ್ಮಿಸಲ್ಪಟ್ಟದ್ದು. ದೇಶಗಳು– ಕೆನಡಾ, ಅಮೇರಿಕ, ಯು.ಕೆ., ಜರ್ಮನಿ, ಇಂಡೋನೇಶಿಯಾ, ಘಾನ, ನೈಜೀರಿಯಾ, ಸಿರ್‍ರಾಲಿಯೋನ್, ಐವರಿಕೋಸ್ಟ್, ತಾಂಜಾನಿಯಾ, ಬುರ್ಕಿನೋ ಫಾಸೋ, ಮಾಲಿ, ಕಾಂಗೋ, ಬೆನಿನ್, ನೈಜರ್, ಕ್ಯಾಮರೂನ್ ಮತ್ತು ಸೆನೆಗಲ್.
* ಈ ವರ್ಷ 349 ಹೊಸ ಪ್ರಚಾರ ಕೇಂದ್ರಗಳು ಸ್ಥಾಪಿಸಲ್ಪಟ್ಟವು.
* ಯು.ಕೆ.ಯ ರಾಖಿಂ ಪ್ರೆಸ್ಸಿನಿಂದ 3,31,810 ಪುಸ್ತಕಗಳು ಪ್ರಕಟಣೆಗೊಂಡಿವೆ.
* ರಾಖಿಂ ಪ್ರೆಸ್ಸಿನ ಅಧೀನದಲ್ಲಿ ಆಫ್ರಿಕದಲ್ಲಿ 9 ಪ್ರೆಸ್‌ಗಳು ಕಾರ್ಯನಿರತವಾಗಿವೆ.
* ಪವಿತ್ರ ಖುರ್‌ಆನಿನ ಇಂಗ್ಲಿಷ್ ಅರ್ಥ ವ್ಯಾಖ್ಯಾನ 5 ಸಂಪುಟಗಳಲ್ಲಿ ಉತ್ತಮ ವಿನ್ಯಾಸದೊಂದಿಗೆ ಪುನರ್ಮುದ್ರಣ ಗೊಂಡಿದೆ.
* ತಧ್‌ಕಿರ 3ನೇ ಬಾರಿ ಪ್ರಕಾಶಿತವಾಗಿದೆ.
* ಮಲ್‌ಫೂಝಾತ್ 2ನೇ ಸಂಪುಟ ಮುದ್ರಣಗೊಂಡಿದೆ.
* ಪವಿತ್ರ ಖುರ್‌ಆನಿನ ಇಂಗ್ಲಿಷ್ ಭಾಷಾಂತರ ಉತ್ತಮ ವಿನ್ಯಾಸ ಮತ್ತು ಸುಂದರ ಕವಚದೊಂದಿಗೆ ಪುನರ್ಮುದ್ರಿತವಾಗಿದೆ.
* 718 ವಿವಿಧ ಕಿರುಹೊತ್ತಗೆಗಳು 49 ಭಾಷೆಗಳಲ್ಲಿ ಪ್ರಕಟಗೊಂಡಿವೆ.
* ಖಾದಿಯಾನಿನಿಂದ ಸುಮಾರು 62000 ಪುಸ್ತಕಗಳು ಪ್ರಕಟಗೊಂಡು ಲೋಕದಲ್ಲೆಡೆ ಜಮಾಅತುಗಳಿಗೆ ರವಾನಿಸಲ್ಪಟ್ಟಿವೆ.
* ಜಮಾಅತಿನ ವತಿಯಿಂದ 122 ಪತ್ರಿಕೆಗಳು ಮತ್ತು ನಿಯತಕಾಲಿಕಗಳು 26 ಭಾಷೆಗಳಲ್ಲಿ ಪ್ರಕಾಶಗೊಳ್ಳುತ್ತಿವೆ.
* 519 ಪ್ರಾದೇಶಿಕ ಮತ್ತು ಕೇಂದ್ರೀಯ ಗ್ರಂಥಾಲಯಗಳು ಸ್ಥಾಪಿಸಲ್ಪಟ್ಟಿವೆ.
* ಹಿಂದಿ ಭಾಷೆಯಲ್ಲಿ ಹಝ್ರತ್ ವಾಗ್ದತ್ತ ಮಸೀಹರ(ಅ) 28 ಪುಸ್ತಕಗಳು ಪ್ರಕಟಗೊಂಡಿವೆ.
* ಅರಬಿಕ್ ಡೆಸ್ಕ್ ಸೈರೆ ರೂಹಾನಿ, ಮಲಾಇಕತುಲ್ಲಾ, A Man of God, ಫಿಕ್ಹುಲ್ ಮಸೀಹ್ ಮೊದಲಾದ ಪುಸ್ತಕಗಳನ್ನು ಪ್ರಕಟಿಸಿದೆ.
* ರಶ್ಯನ್ ಡೆಸ್ಕ್ ಖಲೀಫರ ಹೆಚ್ಚಿನ ಖುತ್‌ಬಗಳ ಭಾಷಾಂತರವನ್ನು ಪೂರ್ಣಗೊಳಿಸಿದೆ.
* ಈಗ ರಶ್ಯನ್ ಭಾಷೆಯಲ್ಲಿ ಪವಿತ್ರ ಖುರ್‌ಆನಿನ ಅನುವಾದ – 4ನೇ ಮುದ್ರಣ ಪ್ರಕಟಗೊಂಡಿದೆ.
* ಬಾಂಗ್ಲಾ ಡೆಸ್ಕ್ ಭಾಷಾಂತರದ ಕಾರ್ಯದಲ್ಲಿ ತುಂಬಾ ಶ್ರಮವಹಿಸುತ್ತದೆ.

* ಫ್ರೆಂಚ್ ಡೆಸ್ಕ್ ಅನೇಕ ಯೋಜನೆಗಳನ್ನು ಕೈಗೊಂಡಿದೆ. ಸುಮಾರು 1.3 ಮಿಲಿಯನ್ ಮಂದಿ ಆ ವೆಬ್‌ಸೈಟನ್ನು ಸಂದರ್ಶಿಸಿದ್ದಾರೆ. ವಾಗ್ದತ್ತ ಮಸೀಹರ ಮತ್ತು ಖಲೀಫರ ಅನೇಕ ಪುಸ್ತಕಗಳು ಫ್ರೆಂಚ್ ಭಾಷೆಗೆ ಅನುವಾದಿಸಲ್ಪಟ್ಟಿವೆ.
* ಚೈನೀಸ್ ಡೆಸ್ಕ್ ಸಹ ಅನೇಕ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಉಸ್ಮಾನ್ ಚೀನೀ ಸಾಹಿಬರ ಕಾಲದಲ್ಲಿ ಗಮನಾರ್ಹ ಕಾರ್ಯಗಳು ನಿರ್ವಹಿಸಲ್ಪಟ್ಟಿವೆ.
* ಟರ್ಕಿಶ್ ಡೆಸ್ಕ್ ಸಹ ವಾಗ್ದತ್ತ ಮಸೀಹರ ಮತ್ತು ಖಲೀಫರ ಅನೇಕ ಪುಸ್ತಕಗಳನ್ನು ಭಾಷಾಂತರಿಸಿದೆ.
* ಸ್ವಾಹಿಲಿ ಡೆಸ್ಕ್ ಅನೇಕ ಭಾಷಾಂತರ ಕಾರ್ಯಗಳನ್ನು, ಮುಖ್ಯವಾಗಿ M.T.A ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ. ಸ್ವಾಹಿಲಿ ಡೆಸ್ಕ್ ಯು.ಕೆ., ರಬ್ವ ಮತ್ತು ತಾಂಜಾನಿಯದಲ್ಲಿ ಸಹ ಸ್ಥಾಪಿಸಲ್ಪಟ್ಟಿದೆ.
* ಇಂಡೋನೇಶಿಯನ್ ಡೆಸ್ಕ್ ಖಲೀಫರ ಖುತ್‌ಬದ ಲೈವ್ ಭಾಷಾಂತರವನ್ನು ಬಿತ್ತರಿಸುತ್ತದೆ. ವಾಗ್ದತ್ತ ಮಸೀಹರ ಅನೇಕ ಪುಸ್ತಕಗಳನ್ನು ಭಾಷಾಂತರಿಸಿದೆ.
* ಸ್ಪಾನಿಶ್ ಡೆಸ್ಕ್ ಅನೇಕ ಅಹ್ಮದಿಯಾ ಸಾಹಿತ್ಯಗಳನ್ನು ಭಾಷಾಂತರಿಸಿದೆ. ಅದು ಸ್ಪಾನಿಶ್ ವೆಬ್‌ಸೈಟನ್ನೂ ಹೊಂದಿದೆ.
* ಈ ವರ್ಷ ಲೋಕದಲ್ಲೆಡೆ 55545 ವಸ್ತು ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ.
* ಈ ವರ್ಷ 1,62,57,000 ಕರಪತ್ರಗಳನ್ನು ವಿತರಿಸಲಾಗಿದೆ. ಜರ್ಮನಿ, ಯು.ಕೆ., ಆಸ್ಟ್ರೇಲಿಯಾ, ಸ್ಪೈನ್, ಹಾಲೇಂಡ್, ಕೆನಡ, ಸ್ವೀಡನ್, ಫ್ರಾನ್ಸ್, ಹೈಟಿ, ಪೋರ್ಚುಗಲ್, ಅಮೇರಿಕ ಮೊದಲಾದ ದೇಶಗಳಲ್ಲಿ ಕರಪತ್ರ ಅಭಿಯಾನವನ್ನು ಆಯೋಜಿಸಲಾಗಿತ್ತು.
* ಭಾರತದಲ್ಲಿ 5,72,000 ಕರಪತ್ರಗಳನ್ನು ಹಂಚಲಾಯಿತು.
* ಈ ವರ್ಷ ವಕ್ಫೆ ನೌ ಯೋಜನೆಯಲ್ಲಿ 1345 ಮಕ್ಕಳ ಸೇರ್ಪಡೆಯಾಗಿದೆ.
* "ಅಲ್ ಹಕಮ್" ಇಂಗ್ಲಿಷ್ ವಾರಪತ್ರಿಕೆ ವೆಬ್‌ಸೈಟ್‌ನಲ್ಲಿ ಲಭ್ಯ.
* "ಅಲ್ ಫಝ್ಲ್ ಇಂಟರ್‌ನೇಶನಲ್" ವೆಬ್‌ಸೈಟ್‌ನಲ್ಲಿ ಲಭ್ಯ.
* Alislam.org ಉರ್ದು, ಇಂಗ್ಲಿಷ್ ಮತ್ತು ಇತರ ಭಾಷೆಗಳಲ್ಲಿ ನೂರಾರು ಪುಸ್ತಕಗಳನ್ನು ಅಪ್‌ಲೋಡ್ ಮಾಡಿದೆ.
* ಎಂ.ಟಿ.ಎ. ಇಂಟರ್‌ನೇಶನಲ್ ಈಗ 16 ವಿಭಾಗಗಳಲ್ಲಿ ಕಾರ್ಯನಿರತವಾಗಿದೆ. 400 ಮಂದಿ ಸ್ವಯಂಸೇವಕರು ದುಡಿಯುತ್ತಾರೆ.
* ಈಗ ಎಂ.ಟಿ.ಎ. 5 ಚ್ಯಾನಲ್‌ಗಳಲ್ಲಿ ದಿನಂಪ್ರತಿ 24 ಗಂಟೆಗಳ ಕಾಲ ಬಿತ್ತರಿಸಲ್ಪಡುತ್ತದೆ. M.T.A.1, M.T.A. Africa, M.T.A.2, M.T.A. Africa 2, M.T.A.3 Al Arabiya. ಈಗ 17 ಭಾಷೆಗಳಲ್ಲಿ ಎಂ.ಟಿ.ಎ. ಬಿತ್ತರಿಸಲ್ಪಡುತ್ತದೆ.
* ಆಫ್ರಿಕದಲ್ಲೆಡೆ ಸುಮಾರು 560 ಮಿಲಿಯನ್ ಮಂದಿಗೆ ರೇಡಿಯೋ ಕಾರ್ಯಕ್ರಮಗಳು ತಲಪುತ್ತವೆ.
* ವಾಗ್ದತ್ತ ಮಸೀಹ್‌ರವರಿಂದ ಆರಂಭಿಸಲ್ಪಟ್ಟ "The Review of Religions" 117ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ.
* ನುಸ್ರತ್ ಜಹಾನ್ ಸ್ಕೀಮಿನಿಂದ ಆಸ್ಪತ್ರೆಗಳೂ ಶಾಲೆಗಳೂ ಸ್ಥಾಪಿಸಲ್ಪಟ್ಟಿವೆ. ಈಗ 12 ರಾಷ್ಟ್ರಗಳಲ್ಲಿ 685 ಶಾಲೆಗಳನ್ನು ಅದು ಹೊಂದಿದೆ.
* "ಹುಮ್ಯಾನಿಟಿ ಫಸ್ಟ್" ಉತ್ತಮ ಸೇವೆ ಸಲ್ಲಿಸುತ್ತಿದೆ. ಮುಖ್ಯವಾಗಿ 14723 ಉಚಿತ ಶಸ್ತ್ರಕ್ರಿಯೆಗಳನ್ನು ಮಾಡಲಾಯಿತು.
* ಈ ವರ್ಷ 120 ರಾಷ್ಟ್ರಗಳಿಗೆ ಮತ್ತು 300 ಸಮುದಾಯಗಳಿಗೆ ಸೇರಿದ 668527 ಮಂದಿ ಹೊಸತಾಗಿ ಅಹ್ಮದಿಯಾ ಜಮಾಅತ್‌ಗೆ ಸೇರ್ಪಡೆಯಾಗಿದ್ದಾರೆ.
* ಸತ್ಯವಾದ ಸ್ವಪ್ನ ದರ್ಶನಗಳ ಮೂಲಕ ಅನೇಕರು ಅಹ್ಮದಿಯತನ್ನು ಸ್ವೀಕರಿಸಿದ್ದಾರೆ.

**(ಆಧಾರ: "ಅಲ್ ಹಕಮ್" 9-8-2019)**

## ಯು.ಕೆ. ಜಲ್ಸಾ ಸಾಲಾನ – ಗಣ್ಯ ಅತಿಥಿಗಳ ಅಭಿಪ್ರಾಯಗಳು

**ಬೆನಿನ್ ದೇಶದ ಮುಸ್ಲಿಮ್ ಕಮ್ಯುನಿಟಿಯ ವೈಸ್ ಪ್ರೆಸಿಡೆಂಟ್ ಮಾಲೆ ಹೂ ಯಅ್‌ಖೂಬ್ ಸಾಹಿಬ್** ಹೇಳುತ್ತಾರೆ: ನಾನು ಇಪ್ಪತ್ತಕ್ಕಿಂತ ಹೆಚ್ಚು ಹಜ್ ಮಾಡಿದ್ದೇನೆ. ಅಹ್ಮದಿಯಾ ಜಮಾಅತಿನ ಜಲ್ಸ ಸಾಲಾನದಲ್ಲಿ ಭಾಗವಹಿಸಿ, ನನಗೆ ಅಲ್ಲಿಗಿಂತ ಎಷ್ಟೋ ಉತ್ತಮ ವ್ಯವಸ್ಥೆಗಳನ್ನು ಇಲ್ಲಿ ನೋಡಲು ಸಾಧ್ಯವಾಯಿತು. ನಾನು ಅನೇಕ ಧಾರ್ಮಿಕ ಸಭೆಗಳಲ್ಲಿಯೂ ಭಾಗವಹಿಸಿದ್ದೇನೆ. ಆದರೆ ಜಲ್ಸ ಸಾಲಾನದಂತಹ ಪರಿಸರ ಎಲ್ಲಿಯೂ ಕಾಣಲಿಲ್ಲ. ನಾನು ಇಲ್ಲಿಗೆ ಬಂದು ಬಹಳ ವಿಷಯಗಳನ್ನು ಕಲಿತೆನು. ಅಹ್ಮದಿಯ್ಯತ್ ನೈಜ ಇಸ್ಲಾಮ್ ಆಗಿದೆ. ನಾನು ಬೆನಿನ್‌ಗೆ ಹೋಗಿ ಜನರೊಂದಿಗೆ ಹೇಳುವೆನು: ಅನ್ಯರ ಮಾತುಗಳಿಗೆ ಕಿವಿಯೊಡ್ಡಬೇಡಿರಿ. ಅಹ್ಮದಿಯ್ಯತ್‌ನಿಂದ ಕಲಿಯಿರಿ. ಲೋಕದಾದ್ಯಂತ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೀರ್ತಿಯನ್ನು ಹರಡುವವರು ಅಹ್ಮದಿಯರೇ ಆಗಿದ್ದಾರೆ.

**ಗ್ರೀಸ್ ದೇಶದ ಚೀಫ್, ರಬಾಯೆ ಗೇಬ್ರಿಯಲ್ ನೇಗ್ರೀನ್** ಹೇಳುತ್ತಾರೆ: ಈ ವಿಸ್ಮಯಕರ ಅಂತರ‍್ರಾಷ್ಟ್ರೀಯ ಜಲ್ಸದ ಭಾಗವಾಗುವ ಭಾಗ್ಯ ನೀಡಿದುದಕ್ಕೋಸ್ಕರ ನಾನು ದೇವನಿಗೆ ಕೃತಜ್ಞತೆ ಅರ್ಪಿಸುತ್ತೇನೆ. ರಬಾಯಿಯಾದ ನಾನು ಅನ್ಯ ಧರ್ಮಗಳ ವಿಶ್ವಾಸಗಳ ಬಗ್ಗೆ ಇಲ್ಲಿ ಗೌರವವನ್ನು ಅನುಭವಿಸಿದೆನು. ನಾನು ಭೇಟಿಯಾದ ಮತ್ತು ಮಾತನಾಡಿದ ಎಲ್ಲ ಇಮಾಮರು ನನಗೆ ಹೃತ್ಪೂರ್ವಕವಾಗಿ ಬಹಳ ಗೌರವ ನೀಡಿದರು. ನಾನು ನನ್ನ ವೈಶಿಷ್ಟ್ಯಪೂರ್ಣವಾದ ಟೋಪಿ ಧರಿಸಿ ಸಹಸ್ರಾರು ಸಂಖ್ಯೆಯ ಮುಸ್ಲಿಮರ ಮಧ್ಯದಲ್ಲಿ ಯಾವುದೇ ಧಿಕ್ಕಾರ ಸೂಚಕ ಸಂಜ್ಞೆಗೆ ಈಡಾಗದೆ, ವಕ್ರ ದೃಷ್ಟಿಗಳಿಗೆ ಗುರಿಯಾಗದೆ ಅಥವಾ ಹಿಂಸಾತ್ಮಕ ಪ್ರತಿಭಟನೆಗೆ ಈಡಾಗದೆ ತಿರುಗಾಡುತ್ತಾ ಇದ್ದೆ. ನಿಜವಾಗಿಯೂ ಇದು ನನಗೆ ಬಹಳ ಸಂತೋಷವನ್ನು ನೀಡಿದೆ. ನಾನು ಇತರ ಸ್ಥಳಗಳಲ್ಲಿ ಕಂಡ ದೃಶ್ಯಗಳಿಗಿಂತ ಇಲ್ಲಿನ ದೃಶ್ಯ ವಿಭಿನ್ನವಾಗಿತ್ತು.

**ಉರುಗ್ವೇ ದೇಶದ ಯುನಿವರ್ಸಿಟಿಯಯಲ್ಲಿ ಓರಿಯಂಟಲ್ ಸ್ಟಡೀಸ್ ವಿಭಾಗದ ಪ್ರೊಫೆಸರ್ ಆಗಿರುವ ಓರ್ವ ಮಹಿಳೆ ಅತಿಥಿ** ಹೇಳಿದರು: ನಾನು ಮೂವತ್ತಕ್ಕಿಂತ ಹೆಚ್ಚು ವರ್ಷಗಳಿಂದ ಇಸ್ಲಾಮೀ ದೇಶಗಳ ಮತ್ತು ಸಂಸ್ಥೆಗಳ ಅಧ್ಯಯನ ಮಾಡುತ್ತಿದ್ದೇನೆ. ನಿಮ್ಮ ಜಲ್ಸದಲ್ಲಿ ಭಾಗವಹಿಸಿ ನಾನು ಎರಡು ವಿಶಿಷ್ಟ ವಿಷಯಗಳನ್ನು ಕಂಡೆನು. ಅವು ಬೇರೆ ಎಲ್ಲಿಯೂ ಕಾಣಲಿಲ್ಲ. ಮೊದಲನೆಯದು, ಜಮಾಅತಿನ ಐಕ್ಯತೆ ಮತ್ತು ಒಬ್ಬ ನಾಯಕನ ಮೂಲಕ ಏಕತೆ ನಾನು ಬೇರೆ ಎಲ್ಲಿಯೂ ಕಾಣಲಿಲ್ಲ. ಪ್ರತಿಯೊಬ್ಬ ಸದಸ್ಯ ಖಲೀಫರೊಂದಿಗೆ ಅನುಸರಣೆ, ನಿಷ್ಠೆ ಮತ್ತು ಅಸಾಮಾನ್ಯವಾದ ಸಂಬಂಧವನ್ನು ಹೊಂದಿರುತ್ತಾನೆ. ಎರಡನೆಯ ವಿಷಯ, ಜಮಾಅತಿನಲ್ಲಿ ಯಾವುದೇ ರೀತಿಯ ವಂಶೀಯ ತಾರತಮ್ಯತೆ ಕಾಣಲಿಲ್ಲ. ಜನ್ಮತಃ ಅಹ್ಮದೀ ಆಗಿರಲಿ ಅಥವಾ ನವ ಅಹ್ಮದೀ ಆಗಿರಲಿ, ಅರಬಿಯಾಗಿರಲಿ, ಅರಬಿಯೇತರನಾಗಿರಲಿ, ಪಾಕಿಸ್ಥಾನಿ ಆಗಿರಲಿ, ಬೇರೆ ದೇಶದವನಾಗಿರಲಿ, ನಿಮ್ಮ ಜಮಾಅತ್‌ನ ವ್ಯವಸ್ಥೆಯು ಪ್ರತಿಯೊಂದು ರೀತಿಯ ವರ್ಣಭೇದ ಮತ್ತು ಜನಾಂಗೀಯ ದ್ವೇಷದಿಂದ ಮುಕ್ತವಾಗಿದೆ ಎಂದು ತಿಳಿದುಕೊಂಡೆನು.

**ಮೊರಾಕೋ ದೇಶದ ಫಿಲಾಸಫಿಯ ಒಬ್ಬ ಪ್ರೊಫೆಸರ್** ಹೇಳಿದರು: ಜಲ್ಸದಿಂದ ನಾವು  ಬಹಳ ಉತ್ತಮವಾಗಿ ಪ್ರಭಾವಿತರಾದೆವು. ಈ ಜಮಾಅತನ್ನು ಸಮೀಪದಿಂದ ವೀಕ್ಷಿಸುವ ಬಹಳ ಉತ್ತಮ ಸಂದರ್ಭ ಲಭಿಸಿತು. ಈ ಜಲ್ಸದಲ್ಲಿ ನಾವು ವಿವಿಧ ವಿಭಾಗಗಳ ಬಲಿಷ್ಠ ನಿರ್ವಹಣೆಯನ್ನು ಮತ್ತು ಅತಿಥಿಗಳನ್ನು ಅತ್ಯುತ್ತಮವಾಗಿ ಸ್ವಾಗತಿಸುವುದನ್ನು ಕಂಡೆವು. ಜಮಾಅತ್ ಅಹ್ಮದಿಯಾದ ಅತ್ಯುನ್ನತ ಮಟ್ಟದ ಸ್ವಭಾವಗುಣಗಳನ್ನು ಕಂಡೆವು. ಅವು ಇಸ್ಲಾಮ್ ಮತ್ತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳ ಪ್ರತಿಬಿಂಬವಾಗಿವೆ. ಈ ಜಲ್ಸದ ಮೂಲಕ ವಿರೋಧಿಗಳ ಅಪಪ್ರಚಾರ ಸುಳ್ಳೆಂದು ತಿಳಿಯಲು ಸಾಧ್ಯವಾಯಿತು. ಆ ಜನರು ಈ ದೈವಿಕ ಜಮಾಅತಿನ ವಿರುದ್ಧ ಅನಾವಶ್ಯಕವಾಗಿ ಅಸೂಯೆ ಮತ್ತು ಹಗೆತನ ಹೊಂದಿದ್ದಾರೆ. ಅಲ್ಲಾಹನು ತಮಗೆ ಮಾನವರ ಸೇವೆ ಮಾಡುವ ಭಾಗ್ಯ ನೀಡುತ್ತಾ ಇರಲಿ.

**ಗಿನಿಕನಾಕರಿ ದೇಶದ ಅಲ್‌ಹಾಜ್ ಮುಹಮ್ಮದ್ ವಕೀಲ್ ಯಾತಾರ ಸಾಹಿಬ್, ಧಾರ್ಮಿಕ ವಿಭಾಗದ ಇನ್ಸ್‌ಪೆಕ್ಟರ್ ಜನರಲ್** ಹೇಳುತ್ತಾರೆ: ಜಲ್ಸದ ಮೂರು ದಿನಗಳಲ್ಲಿ ನನ್ನನ್ನು ಬಹಳ ಪ್ರಭಾವಿಸಿದ ವಿಷಯವೆಂದರೆ ಅಹ್ಮದಿಯರನ್ನು ನೈಜ ಇಸ್ಲಾಮೀ ಉಪದೇಶಗಳ ಪ್ರಕಾರ ತರಬೇತಿಗೊಳಿಸಲಾಗಿದೆ ಎಂಬುದು. ಇಲ್ಲಿ ಜಮಾಯಿಸಿದ ಎಲ್ಲ ಅಹ್ಮದಿಯರನ್ನು ನೋಡುವಾಗ ನನಗೆ ಭಾಸವಾಗುತ್ತಿತ್ತು ಇಲ್ಲಿ ಇಸ್ಲಾಮೀ ಭ್ರಾತೃತ್ವದ ಅತ್ಯುನ್ನತ ಉದಾಹರಣೆ ಇದೆ ಎಂದು. ಅವರೆಲ್ಲರೂ ಒಂದೇ ಮಾತೆಯ ಮಕ್ಕಳು ಮತ್ತು ಒಂದೇ ಮನೆಯಿಂದ ಬಂದವರೆಂದು ತೋರುತ್ತಿತ್ತು. ಅಸಾಮಾನ್ಯ ಶಿಸ್ತು ಮತ್ತು ವ್ಯವಸ್ಥೆ, ಸ್ವಯಂಸೇವಕರ ಹಸನ್ಮುಖ ಚಹರೆಗಳು, ಜಲ್ಸದಲ್ಲಿ ಯಾವುದೇ ಕಷ್ಟವಿಲ್ಲದೆ ಹೋಗುವುದು, ಬರುವುದು, ಇವುಗಳೆಲ್ಲ ಸೂಚಿಸುತ್ತಿದ್ದುದೇನೆಂದರೆ, ಇವರೆಲ್ಲ ಆಕಾಶದಿಂದ ಆಗಮಿಸಿದ ಸೃಷ್ಟಿಗಳೋ ಎಂಬಂತೆ. ಇವೆಲ್ಲ ನೋಡುವಾಗ ಹೀಗೆ ಭಾಸವಾಗುತ್ತಿದೆ: ಯಾವುದಾದರೂ ಜಮಾಅತ್ ಇಸ್ಲಾಮನ್ನು ಪ್ರತಿನಿಧಿಸಬಹುದಾದರೆ ಅದು ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ. ನಾನು ಇತರ ಇಸ್ಲಾಮೀ ದೇಶಗಳನ್ನು ಮಾತ್ರವಲ್ಲ ಸೌದಿ ಅರೇಬಿಯಾವನ್ನು ಸಹ ಹಲವು ಸಾರಿ ಸಂದರ್ಶಿಸಿರುವೆನು. ನಾನು ಅತ್ಯಂತ ಸ್ಪಷ್ಟವಾಗಿ ಹೇಳುತ್ತೇನೆ: ನನಗೆ ಇಲ್ಲಿನಂತಹ ಇಸ್ಲಾಮೀ ಭ್ರಾತೃತ್ವದ ಪರಿಸರ ಬೇರೆ ಎಲ್ಲಿಯೂ ಲಭಿಸಿರಲಿಲ್ಲ. ಅಂದಾಜು ನಲ್ವತ್ತು ಸಾವಿರ ಜನರು ಒಂದು ಸ್ಥಳದಲ್ಲಿ ಜಮಾಯಿಸುವುದು, ಅನಂತರ ಇಸ್ಲಾಮೀ ಉಪದೇಶಗಳ ಬಗ್ಗೆ ನಿರಂತರವಾಗಿ ಚರ್ಚಿಸುವುದು, ಯಾವುದೇ ಜಗಳವಾಗಲಿ, ನೂಕುನುಗ್ಗಲುಗಳಾಗಲಿ ಇಲ್ಲದಿರುವುದು, ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುತ್ತಾ ಈ ದಿನಗಳನ್ನು ಕಳೆಯುವುದು ಇವು ಅಹ್ಮದಿಯಾ ಜಮಾಅತಿನ ಸ್ವಂತ ವೈಶಿಷ್ಟ್ಯಗಳೇ ಆಗಿವೆ ಎಂದು ನಾನು ಯಾವುದೇ ಸಂಕೋಚವಿಲ್ಲದೆ ಹೇಳಬಯಸುತ್ತೇನೆ.

**ಫಾನ್‌ತಾ ಫೂಕಾನ ಉಮರ್ ಸಾಹಿಬ, ಗಿನಿಕನಾಕಿರ್ ಕಸ್ಟಂ ಏರ್‌ಪೋರ್ಟ್ ವಿಭಾಗದಲ್ಲಿ ಲೆಫ್ಟಿನೆಂಟ್** (ಅವರು ನವ ಅಹ್ಮದಿ) ಹೇಳಿದರು: ನಾನು ಅಹ್ಮದಿಯಾ ಜಮಾಅತಿನ ಉಪದೇಶಗಳಿಂದ ಪ್ರಭಾವಿತೆಯಾಗಿ ಅಹ್ಮದಿಯಾಗಿದ್ದರೂ ನನಗೆ ಹೃದಯದಲ್ಲಿ ಭಯವಿತ್ತು – ನಾನು ತಪ್ಪಾದ ನಿರ್ಧಾರ ಕೈಕೊಂಡಿರುವೆನೋ ಎಂದು. ಈ ದಿನ ನಾನು ಜಲ್ಸ ಸಾಲಾನದಲ್ಲಿ ಭಾಗವಹಿಸಿದೆ. ನಾನು ಅಲ್ಲಾಹನ ಮೇಲೆ ಆಣೆಹಾಕಿ ಹೇಳುತ್ತೇನೆ– ನನ್ನ ಎಲ್ಲ ಸಂದೇಹಗಳು ನಿವಾರಿಸಲ್ಪಟ್ಟಿವೆ.

ಜಲ್ಸದಲ್ಲಿ ಭಾಗವಹಿಸಿದಾಗ ನನಗೆ ತಿಳಿಯಿತು – ಇಂದು ಇಸ್ಲಾಮನ್ನು ಪ್ರತಿನಿಧೀಕರಿಸಬಲ್ಲ ಏಕಮಾತ್ರ ಜಮಾಅತ್ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಮಾತ್ರವಾಗಿದೆ.

**ಗೇಬನ್ ದೇಶದ ಮಾಜಿ ಪ್ರಧಾನ ಮಂತ್ರಿ ಮತ್ತು ಈಗ ಪಾರ್ಲಿಮೆಂಟ್ ಸದಸ್ಯನಾಗಿರುವ ಪಾವುಲ್ ಬೇವುಗೆ** ಹೇಳುತ್ತಾರೆ: ಜಲ್ಸದಲ್ಲಿ ಮಾಡಲಾದ ಭಾಷಣಗಳಿಂದ ಇಸ್ಲಾಮ್ ಬಗ್ಗೆ ಮತ್ತು ವಿಶಿಷ್ಟವಾಗಿ ಅಹ್ಮದಿಯಾ ಜಮಾಅತ್ ಬಗ್ಗೆ ಅನೇಕ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ನಾನು ಅಹ್ಮದಿಯಾ ಜಮಾಅತ್ ಬಗ್ಗೆ, ಅದರ ಜನರು ಇತರ ಮುಸ್ಲಿಮರ ಹಾಗೆ ಲೋಕದಲ್ಲಿ ಶಾಂತಿಯನ್ನು ಕೆಡಿಸುವವರೆಂದು ತಪ್ಪಾಗಿ ಭಾವಿಸಿದ್ದೆನು. ಆದರೆ ನಾನು ಇಲ್ಲಿಗೆ ಬಂದು ನಿಮ್ಮ ಕೆಲಸಗಳಿಂದ ಬಹಳ ಪ್ರಭಾವಿತನಾದೆನು. ನೀವು ಪರಿಶ್ರಮಪಡುವ ಜನರಾಗಿರುವಿರಿ. ನಿಮ್ಮ ಇಸ್ಲಾಮ್ ನೈಜ ಇಸ್ಲಾಮ್ ಆಗಿದೆ. ಇಂದು ಲೋಕಕ್ಕೆ ಇದರ ಆವಶ್ಯಕತೆ ಇದೆ. ನನ್ನ ದೇಶಕ್ಕೆ ಸಹ ಇದೇ ಇಸ್ಲಾಮ್‌ನ ಆವಶ್ಯಕತೆಯಿದೆ.

**ಗೇಬನ್ ದೇಶದ ಇನ್ನೊಬ್ಬ ಅತಿಥಿ ಪಾಸ್‌ದಾಲೋ ಉದೂಂಗಾ** (ಅವರು ವಿದೇಶ ಮಂತ್ರಾಲಯದಲ್ಲಿ ಡೈರೆಕ್ಟರ್ ಕ್ಯಾಬಿನೆಟ್ ಆಗಿದ್ದಾರೆ.) ಹೇಳುತ್ತಾರೆ: ಜಲ್ಸದ ಪರಿಸರ ಬಹಳ ಉತ್ತಮವಾಗಿತ್ತು. ಬಹಳ ಉತ್ತಮ ಆಧ್ಯಾತ್ಮಿಕ ಪರಿಸರವಿತ್ತು. ಅದನ್ನು ನಾನೆಂದೂ ಮರೆಯಲಾರೆ. ಜಲ್ಸದಲ್ಲಿ ಅನೇಕ ವಿಷಯಗಳನ್ನು ಕಲಿತುಕೊಳ್ಳಲು ಸಾಧ್ಯವಾಯಿತು. ಇಸ್ಲಾಮ್ ಬಗ್ಗೆ ಬಹಳಷ್ಟು ಅರಿತುಕೊಳ್ಳಲು ಭಾಗ್ಯ ಲಭಿಸಿತು. ನಾನು ಮುಸ್ಲಿಮನಲ್ಲವಾದರೂ ಈಗ ನಾನು ನನ್ನನ್ನು ಮುಸ್ಲಿಮನೆಂದು ಭಾವಿಸುತ್ತೇನೆ.

**ಸೆಂಟ್ರಲ್ ಆಫ್ರಿಕನ್ ರಿಪಬ್ಲಿಕ್ ದೇಶದ ಅಧ್ಯಕ್ಷರ ಸಲಹೆಗಾರ ಹ್ಯಾರಿ ಅಲಿಗೋನ್ಸಾ** ಹೇಳುತ್ತಾರೆ: ಅಹ್ಮದಿಯಾ ಜಮಾಅತಿನ ಉದ್ದೇಶಲಕ್ಷ್ಯ ಲೋಕದಲ್ಲಿ ಭ್ರಾತೃತ್ವ ಸ್ಥಾಪಿಸಲ್ಪಡಲಿ ಎಂದು. ಈ ಕೆಲಸಕ್ಕೋಸ್ಕರ ಅವರು ಹಗಲು ರಾತ್ರಿ ಕಾರ್ಯನಿರತರಾಗುತ್ತಾರೆ. ಆದರೆ ಲೋಕದ ಇತರ ಸಂಘಟನೆಗಳಲ್ಲಿ ಇಂತಹ ಪ್ರಾಮಾಣಿಕ ನಿಷ್ಠೆಯ ಕೊರತೆಯಿದೆ. ಈ ಸಂದರ್ಭದಲ್ಲಿ ನಾನು ನನ್ನ ಪರವಾಗಿ ಮತ್ತು ನನ್ನ ದೇಶದ ಪರವಾಗಿ ಈ ಜಯಶಾಲಿ ಜಲ್ಸವನ್ನು ಸಂಘಟಿಸಿದ ಬಗ್ಗೆ ಶುಭಾಶಯಗಳನ್ನು ಕೋರುತ್ತೇನೆ. ನೀವು ನನ್ನ ದೇಶದಲ್ಲಿಯೂ ಈ ಉಪದೇಶಗಳನ್ನು ಮತ್ತು ಪ್ರೀತಿಯನ್ನು ಸಾರ್ವತ್ರಿಕವಾಗಿ ಹರಡಿರಿ ಎಂದು ನಾನು ಅಹ್ಮದಿಯಾ ಜಮಾಅತಿಗೆ ಆಹ್ವಾನ ನೀಡುತ್ತೇನೆ. ನನ್ನ ದೇಶ ಅನೇಕ ವರ್ಷಗಳ ಅಂತಃಕಲಹದ ನಂತರ ಈಗ ಶಾಂತಿಯ ಕಡೆಗೆ ಸಾಗುತ್ತಿದೆ. ಈ ಉಪದೇಶಗಳ ಕಾರಣದಿಂದ ದೇಶದಲ್ಲಿ ಶಾಂತಿಯು ದೀರ್ಘಕಾಲ ಸ್ಥಾಪಿಸಲ್ಪಡಲು ಸಾಧ್ಯವಿದೆ. ಜಲ್ಸದ ಪರಿಸರ ನನಗೆ ಚಿರ ಸ್ಮರಣೀಯವಾಗಿದೆ. ಪ್ರತಿ ವರ್ಷ ಜಲ್ಸದಲ್ಲಿ ಭಾಗವಹಿಸಿ ಆಧ್ಯಾತ್ಮಿಕ ಸಾಂತ್ವನ ಗಳಿಸಲು ಪ್ರಯತ್ನಿಸುವೆನು. ನಾನು ಅದಕ್ಕೋಸ್ಕರ ಪ್ರಾರ್ಥಿಸುವೆನು. ನಾನು ನನ್ನ ದೇಶಕ್ಕೆ ಮರಳಿ ಅಹ್ಮದಿಯ್ಯತಿನ ಸಂದೇಶವನ್ನು ದೇಶದ ನಿವಾಸಿಗಳಿಗೆ ತಲಪಿಸುವೆನು – ಇದೇ ನೈಜ ಇಸ್ಲಾಮ್ ಎಂದು.

**ಬ್ರೆಝಿಲ್ ದೇಶದ ಪೇಡ್ರೋ ಪಾಲೆಕ್ಸ್ ಸಿಟಿ ಕೌನ್ಸಲ್ ಅಧ್ಯಕ್ಷರಾದ ಮೋರೋ ಹೆನ್‌ರಿ** ಹೇಳುತ್ತಾರೆ: ನಾನು ನನ್ನ ದೇಶವನ್ನು ಪ್ರತಿನಿಧೀಕರಿಸಿ ಈ ಬೃಹತ್ ಇಸ್ಲಾಮೀ ಜಲ್ಸ ಸಾಲಾನದಲ್ಲಿ ಭಾಗವಹಿಸಲು ಸಾಧ್ಯವಾದ ಬಗ್ಗೆ ಅಪರಿಮಿತ ಸಂತೋಷಪಡುತ್ತಿದ್ದೇನೆ. ಖಲೀಫರ ಎಲ್ಲ ಭಾಷಣಗಳು ನೈಜ ಇಸ್ಲಾಮಿನ ಪ್ರತೀಕವಾಗಿವೆ. ಅವರ ಮಾತುಗಳು ತಾನಾಗಿ ಹೃದಯದೊಳಗೆ ಇಳಿಯುತ್ತವೆ. ನಾನು ಜಲ್ಸದ ಮೂರು ದಿನಗಳನ್ನು ಆಧ್ಯಾತ್ಮಿಕತೆಯ ಪರಿಸರದಲ್ಲಿ ಕಳೆದೆ. ನನಗೆ ಯಾವುದೇ ರೀತಿಯ ಬಳಲಿಕೆ ಮತ್ತು ಅನಾಸಕ್ತಿ ತಲೆದೋರಲಿಲ್ಲ. ಜಲ್ಸದಲ್ಲಿ ನಮಾಝ್ ನಿರ್ವಹಿಸುವ ದೃಶ್ಯ ನನಗೆ ಅಸಾಮಾನ್ಯವಾಗಿ ಮತ್ತು ವಿಸ್ಮಯಕರವಾಗಿತ್ತು. ಒಂದು ಧ್ವನಿಯನ್ನು ಆಲಿಸಿದ ಕೂಡಲೇ ಎಲ್ಲರೂ ಏರ್ದೇಳುವುದು, ಕುಳಿತುಕೊಳ್ಳುವುದು. ನನ್ನನ್ನು ಪ್ರಭಾವಿಸಿದ ಇನ್ನೊಂದು ವಿಷಯ ನಾನು ಹೇಳದಿರಲು ಸಾಧ್ಯವಿಲ್ಲ. ಅದೆಂದರೆ, ಖಲೀಫರು ಆಗಮಿಸಿದ ತಕ್ಷಣ ಸಹಸ್ರಾರು ಸಂಖ್ಯೆಯ ಜನರು ಮೌನವನ್ನು ಅವಲಂಬಿಸುತ್ತಾರೆ. ಯಾರೊಂದಿಗೂ ಅದರ ಬಗ್ಗೆ ಹೇಳಲು ಆವಶ್ಯಕತೆಯೇ ಇರುವುದಿಲ್ಲ. ಇದರಿಂದ ತಿಳಿಯುವುದೇನೆಂದರೆ, ಇದು ವ್ಯವಸ್ಥೆಯ ಕಾರಣದಿಂದ ಮಾತ್ರವಲ್ಲ, ಎಲ್ಲ ಜನರ ಹೃದಯದಲ್ಲಿಯೂ ತಮ್ಮ ಖಲೀಫರ ಬಗ್ಗೆ ಅತ್ಯಂತ ಹೆಚ್ಚು ಗೌರವಾದರಗಳಿವೆ. ನಾನು ಈ ನೆನಪುಗಳೊಂದಿಗೆ ಮರಳಿ ಹೋಗುತ್ತಿದ್ದೇನೆ. ನಾನು ನನ್ನ ಅನುಭವವನ್ನು ನನ್ನ ಕೇಂದ್ರದಲ್ಲಿಯೂ ಕೌನ್ಸಲ್‌ನಲ್ಲಿಯೂ ಪ್ರಸ್ತಾಪಿಸುವೆನು. ವಾಸ್ತವಿಕವಾಗಿ ನೈಜ ಇಸ್ಲಾಮ್ ಇದೇ ಆಗಿದೆ.

**ಓವರ್‌ಲೀ ಮಸೀಯಸ್** (ಇಕ್ವೋಡೋರ್ ದೇಶದಲ್ಲಿ ತಮ್ಮ ಪ್ರದೇಶದ ಬಿಷಪ್) ಹೇಳುತ್ತಾರೆ: ಜಲ್ಸದ ವ್ಯವಸ್ಥೆ ಬಹಳ ಉತ್ತಮವಾಗಿತ್ತು. ನಮ್ಮ ದೃಷ್ಟಿಕೋನವನ್ನು ಬದಲಾಯಿಸುವ ಸಕಲ ವಿಷಯಗಳು ಖಲೀಫರ ಭಾಷಣಗಳಲ್ಲಿದ್ದುವು. ನನಗೆ ಇಷ್ಟಕರವಾದ ವಿಷಯವೇನೆಂದರೆ, ಅವರು ಯಾವುದೇ ಜನಾಂಗವನ್ನಾಗಲಿ, ಧರ್ಮವನ್ನಾಗಲಿ ಆಕ್ಷೇಪಿಸುವಂತಹ ಮಾತುಗಳನ್ನಾಡಲಿಲ್ಲ. ಅವರು ಇಸ್ಲಾಮಿನ ನೈಜ ಮತ್ತು ನಿಖರ ತತ್ವಗಳ ಬಗ್ಗೆ ಮಾತ್ರ ಒತ್ತಿ ಹೇಳಿದರು. ನಾನು ಈ ಜಲ್ಸಕ್ಕೆ ಆಗಮಿಸಲು ಹೊರಟಾಗ ನನ್ನ ಹೃದಯದಲ್ಲಿದ್ದ ಭಾವನೆ ಇಸ್ಲಾಮ್ ಒಂದು ಧರ್ಮ ಮಾತ್ರ ಎಂದಾಗಿತ್ತು. ಆದರೆ ನಾನು ಇಲ್ಲಿಗೆ ಬಂದಾಗ ನನಗೆ ತಿಳಿಯಿತು – ಇಸ್ಲಾಮ್ ಒಂದು ಧರ್ಮ ಮಾತ್ರವಲ್ಲ, ಅದೊಂದು ವೈಭವಶಾಲಿ ಭ್ರಾತೃತ್ವವೆಂದು. ಅದು ಒಂದು ಕುಟುಂಬವಾಗಿದೆ. ಇಸ್ಲಾಮ್ ಸ್ಥಾಪಿಸಿದ ಭ್ರಾತೃತ್ವ ಮತ್ತು ನೀವು ನಿಮ್ಮ ಧರ್ಮಕ್ಕೋಸ್ಕರ ಮಾಡುವ ಆತ್ಮ ತ್ಯಾಗ, ಬಲಿದಾನಗಳನ್ನು ನೋಡಿ ನಾನು ಬಹಳ ಪ್ರಭಾವಿತನಾದೆ. ಆಲಮೀ ಬೈಅತ್ ಪ್ರಾರಂಭವಾದಾಗ ಯಾರೋ ಒಬ್ಬರು ನನ್ನ ಭುಜಕ್ಕೆ ಕೈ ಇಟ್ಟರು. ನಾನು ಸಹ ನನ್ನ ಮುಂದೆ ಇದ್ದ ವ್ಯಕ್ತಿಯ ಭುಜದ ಮೇಲೆ ಕೈ ಇಟ್ಟೆ. ಆಗ ನನಗೆ ಅನುಭವವಾಯಿತು – ಒಂದು ವಿದ್ಯುಚ್ಛಕ್ತಿ ಎಲ್ಲ ಜನರೊಳಗೆ ಪ್ರವಹಿಸುತ್ತಿದೆ ಎಂದು. ಈ ಬೈಅತ್ ನಂತರ ಅಹ್ಮದಿ ತನ್ನೊಳಗೆ ತಾಜಾತನದ ಭಾವನೆ ಹೊಂದುತ್ತಾರೆಂದು ನಾನು ಭಾವಿಸಿದೆ. ಅವರಿಗೆ ನವಜೀವನ ದೊರೆತ ಹಾಗೆ ಅವರು ಅನುಭವಿಸುತ್ತಿದ್ದಾರೆ. ಈ ಜಲ್ಸದಲ್ಲಿ ಭಾಗವಹಿಸಲು ನನಗೆ ಸಂದರ್ಭ ಒದಗಿಸಿದ ಎಲ್ಲರಿಗೂ ನಾನು ಕೃತಜ್ಞತೆ ಅರ್ಪಿಸುತ್ತೇನೆ. ನನಗೆ ನೈಜ ಇಸ್ಲಾಮ್ ಬಗ್ಗೆ ಅವರು ಪರಿಚಯಿಸಿ ಕೊಟ್ಟರು. ಕೆಲವು ಜನರ ತಪ್ಪಾದ ಕೃತ್ಯಗಳ ಕಾರಣದಿಂದ ಇಸ್ಲಾಮ್ ಧರ್ಮವನ್ನೇ ತಪ್ಪಾಗಿ ತಿಳಿದುಕೊಳ್ಳಬಾರದು ಎಂದು ನನಗೆ ಮನವರಿಕೆಯಾಯಿತು.

**ಸ್ಲೋವೇನಿಯಾ ದೇಶದ ಬಾರ್ಬರ ಓಚಿ ಎಂಬ ಮಹಿಳೆ** (ಕ್ರೈಸ್ತ ಧರ್ಮದ ಪ್ರೊಫೆಸರ್) ಹೇಳಿದರು: ಅಹ್ಮದಿಯಾ ಜಮಾಅತ್ ಪ್ರತಿಪಾದಿಸುವ ಇಸ್ಲಾಮನ್ನು ನಾನು ಎಲ್ಲಿಯೂ ಕಾಣಲಿಲ್ಲ. ಜಲ್ಸ ನೋಡಿದಾಗ ನಾನು ಒಂದು ಹೊಸ ಇಸ್ಲಾಮನ್ನು ನೋಡಿದಂತೆ ತೋಚುತ್ತಿತ್ತು. ಹಝ್ರತ್ ಈಸಾರಿಗೆ ಸಂಬಂಧಿಸಿದ ಶಿಲುಬೆಯ ಘಟನೆ, ಅವರ ಹಿಜ್ರತ್ ಮತ್ತು ಮೃತ್ಯು ಬಗ್ಗೆ ಅಹ್ಮದಿಯಾ ಜಮಾಅತಿನ

ನಿಲುವು ವಿಶ್ವಾಸಾರ್ಹವೂ ವಸ್ತುನಿಷ್ಠವೂ ಆಗಿದೆ ಎಂದು ತೋರುತ್ತದೆ.

**ಮೋನ್ಸ್ ಸೇನಾ ನೋವಿಚ್ ಸಾಹಿಬ್** (ಸ್ಲೋವೇನಿಯಾದ ಒಬ್ಬ ಲೇಖಕ ಮತ್ತು ಜನ್ಮತಃ ಮುಸ್ಲಿಮ್ ಆಗಿದ್ದಾರೆ. ಆದರೆ ಅವರು ಇಸ್ಲಾಮ್ ಬಗ್ಗೆ ಎಂದೂ ಆಸಕ್ತಿ ಹೊಂದಿರಲಿಲ್ಲ.) ಹೇಳುತ್ತಾರೆ: ಕಳೆದ ಎರಡು ವರ್ಷಗಳಿಂದ ನಾನು ಇಸ್ಲಾಮ್ ಬಗ್ಗೆ ಓದಲು ಪ್ರಾರಂಭಿಸಿದೆ. ನಮಾಝ್ ಅನುಷ್ಠಿಸಲು ತೊಡಗಿದೆ. ಆದರೆ ಯಾವುದೇ ಇಮಾಮ್ ನೇತೃತ್ವದಲ್ಲಿ ನಮಾಝ್ ನಿರ್ವಹಿಸಲಿಲ್ಲ. ಆದರೆ ಇಲ್ಲಿಗೆ ಬಂದು ಜಮಾಅತ್‌ನೊಂದಿಗೆ ನಮಾಝ್ ನಿರ್ವಹಿಸುವಾಗ ಅನುಭವಿಸಿದ ರಸಾನುಭೂತಿ ಸಂಪೂರ್ಣವಾಗಿ ಬೇರೆಯೇ ಆಗಿದೆ. ಅಹ್ಮದಿಯಾ ಜಮಾಅತಿನ ಉಪದೇಶಗಳು ಇಸ್ಲಾಮ್ ಬಗ್ಗೆ ನಾನು ಸ್ವತಃ ಮನವರಿಕೆ ಮಾಡಿದ ಹಾಗೆಯೇ ಇದೆ. ಅಂದರೆ ಪ್ರತಿಯೊಂದು ಪ್ರಕೃತಿಗೆ ಅನುಗುಣವಾಗಿ ಇದೆ. ನನಗೆ ಇಷ್ಟಪಟ್ಟ ಇನ್ನೊಂದು ವಿಷಯವೇನೆಂದರೆ, ಅಹ್ಮದಿಯರು ತಾವು ಹೇಳಿದ ಪ್ರಕಾರವೇ ಕರ್ಮ ರೂಪದಲ್ಲಿ ಮಾಡುತ್ತಾರೆ ಎಂಬುದಾಗಿದೆ.

**ಇಟಲಿ ದೇಶದ ಮೆಡಲೀನ** (ವ್ಯಾಟಿಕನ್ ಇಸ್ಲಾಮೀ ಯುನಿವರ್ಸಿಟಿಯ ಪಿ.ಎಚ್‌ಡಿ ಡಿಗ್ರಿ ಪಡೆದಿದ್ದಾರೆ.) ಹೇಳುತ್ತಾರೆ: ಜಲ್ಸ ಸಾಲಾನ ಬಹಳ ಉತ್ತಮವೂ ಆಕರ್ಷಕವೂ ಶಾಂತಿಭರಿತವೂ ಪ್ರೀತಿಭರಿತವೂ ಆಗಿತ್ತು. ಪ್ರತಿಯೊಂದು ವ್ಯವಸ್ಥೆ ಅತ್ಯುತ್ತಮವಾಗಿತ್ತು. ಭಾಷಣಗಳು ಅತ್ಯುತ್ತಮವಾಗಿದ್ದುವು. ಅವು ಅಹ್ಮದಿಯರಿಗೆ ಮಾತ್ರವಲ್ಲ ಎಲ್ಲ ಅತಿಥಿಗಳಿಗೆ ಜ್ಞಾನವರ್ಧಕವಾಗಿದ್ದುವು.

**ಫ್ರಾನ್ಸ್‌ನಲ್ಲಿ ಮಿನಿಸ್ಟ್ರಿ ಆಫ್ ಜಸ್ಟಿಸ್‌ಗೋಸ್ಕರ ಕೆಲಸ ಮಾಡುತ್ತಿರುವ ಜವಾದ್ ಬೋಲಾ ಮಿಲ್** ಹೇಳುತ್ತಾರೆ: ಜಲ್ಸದ ದಿನಗಳಲ್ಲಿ IAAAE ಮತ್ತು ಹ್ಯುಮಾನಿಟಿ ಫಸ್ಟ್ ಇವುಗಳ ಪ್ರದರ್ಶನ ನೋಡಿದಾಗ, ನಿಮ್ಮ ಜಮಾಅತಿನವರು ಮಾಡುವ ಸೇವಾ ಕಾರ್ಯಗಳನ್ನು ಕಂಡು ಬಹಳ ಪ್ರಭಾವಿತನಾದೆನು. ನೈಜ ಧರ್ಮ ಇದೇ ಆಗಿದೆ. ಜನಾಂಗ ಮತ್ತು ವಂಶದ ವ್ಯತ್ಯಾಸ ಮಾಡದೆ ಮಾನವೀಯ ಸೇವೆ ಮಾಡುವ ಧರ್ಮ.

**ಸ್ಪೈನ್ ದೇಶದ ಪ್ರತಿನಿಧಿ ಸಂಘದಲ್ಲಿ ಒಬ್ಬ ಮಹಿಳೆ ಸುರ್ಯಾನ ಮೊರಾಲ್** ಹೇಳಿದರು: ಎಲ್ಲರೊಂದಿಗೆ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ ಎಂಬ ಧ್ಯೇಯವಾಕ್ಯ ಈ ವೈಭವಶಾಲಿ ಸಮ್ಮೇಳನವನ್ನು ಪ್ರತಿಬಿಂಬಿಸುತ್ತದೆ. ವಿವಿಧ ಜನಾಂಗಗಳ ಜನರು ಪರಸ್ಪರ ಭೇಟಿಯಾಗುವುದನ್ನು ನಾನು ಕಂಡೆನು. ಇದು ಎಂತಹ ಧರ್ಮವಾಗಿದೆ ಎಂದರೆ ಲೋಕದಲ್ಲಿ ಶಾಂತಿ ಸ್ಥಾಪನೆಗೆ ಪ್ರಯತ್ನಿಸಲು ಮತ್ತು ಅನ್ಯಾಯದ ವಿರುದ್ಧ ಹೋರಾಡಲು ಇದು ಬೇಕು.

**ಬ್ರಿಟಿಷ್ ಸೊಸೈಟಿ ಆಫ್ ಟ್ಯೂರಿನ್ ಶ್ರೌಡ್ ಇದರ ಮಾಜಿ ಎಡಿಟರ್ ಓಫ್ರೇ** ಹೇಳುತ್ತಾರೆ: ನಾನು ಐದು ವರ್ಷಗಳಿಂದ ತಪ್ಪದೆ ಜಲ್ಸದಲ್ಲಿ ಭಾಗವಹಿಸುತ್ತಿದ್ದೇನೆ. ನನಗೆ ಮೊದಲ ಬಾರಿ ಆಮಂತ್ರಣ ನೀಡಿದಾಗ ಆಕರ್ಷಕ ಹಾಗೂ ಪ್ರಾರ್ಥನೆಗಳಿಂದ ತುಂಬಿದ ಆತ್ಮ ಈ ಜಲ್ಸದ ಪರಿಸರದಲ್ಲಿ ನನ್ನ ಅನುಭವಕ್ಕೆ ಬಂತು. ಅದು ಕೊನೆಗೊಳ್ಳಲು ನೀವು ಬಿಡಲಿಲ್ಲ. ನಾನು ಟ್ಯೂರಿನ್ ಶ್ರೌಡ್ ಬಗ್ಗೆ ಪಾಂಡಿತ್ಯ ಗಳಿಸಿದವನಾಗಿರುವೆನು. ಅದು ಎಂತಹ ಬಟ್ಟೆಯಾಗಿದೆ ಎಂದರೆ ಅಹ್ಮದಿಯಾ ಜಮಾಅತ್ ಅದರ ಬಗ್ಗೆ ತಿಳಿಯಲು ಅತ್ಯಂತ ಆಸಕ್ತಿ ಹೊಂದಿದೆ. ಏಕೆಂದರೆ ಅವರ ಅಭಿಪ್ರಾಯ ಪ್ರಕಾರ ಯೇಸು ಮಸೀಹ್ ಶಿಲುಬೆಯಲ್ಲಿ ಮೃತರಾಗಿರಲಿಲ್ಲ ಎಂಬುದಕ್ಕೆ ಅದು ಒಂದು ಪುರಾವೆಯಾಗಿದೆ.

**ಕೆನಡದ ಅಬ್‌ರೀಜನಲ್ (ಮೂಲ ನಿವಾಸಿ) ಸಮುದಾಯದ ಪ್ರತಿನಿಧಿ ಮೇಂಗಮ್ ಹೆನ್ರಿ** ಹೇಳುತ್ತಾರೆ: ಜಲ್ಸ ಸಾಲಾನದಲ್ಲಿ ಭಾಗವಹಿಸಿದುದು ನನಗೆ ಬಹಳ ಮಹತ್ವಪೂರ್ಣವಾಗಿತ್ತು. ಇದರಿಂದ ನನ್ನ ಜೀವಿತ ಬದಲಾಯಿಸಿತು. ಈಗ ನಾನು ಇಸ್ಲಾಮ್ ಬಗ್ಗೆ ಮೊದಲಿಗಿಂತ ಹೆಚ್ಚಾಗಿ ತಿಳಿದುಕೊಂಡಿದ್ದೇನೆ. ಇಸ್ಲಾಮ್ ಮತ್ತು ಕೆನಡದ ಪುರಾತನ ಧರ್ಮಗಳ ಮಧ್ಯೆ ಅನೇಕ ವಿಷಯಗಳಲ್ಲಿ ಸಹಭಾಗಿತ್ವವಿದೆ.

**ವೇಲ್ಸ್‌ನ ಅತಿಥಿ ಮಹಿಳೆ ವೇನೆಟ್ರಯೂ, ಡೈರೆಕ್ಟರ್ ನ್ಯೂಸ್ ಲೋ ಎಫ್.ಎಮ್**. ಹೇಳುತ್ತಾರೆ: ಅಹ್ಮದಿಯರಲ್ಲಿರುವ ಐಕ್ಯತೆ ನಾನು ನೋಡಿದೆ. ಅದು ಮನುಷ್ಯರಲ್ಲಿ ಹೊಸ ಆತ್ಮವನ್ನು ಊದುವುದಾಗಿದೆ. ಅದನ್ನು ನೋಡುವಾಗ ಶಾಂತಿಯನ್ನು ಗಳಿಸುವ ಆಶೆ ತಲೆ ಎತ್ತುತ್ತಿದೆ. ಜಲ್ಸದ ವ್ಯವಸ್ಥೆ ಬಹಳ ಅಚ್ಚುಕಟ್ಟಾಗಿತ್ತು. ಅಹ್ಮದಿಯಾ ಜಮಾಅತಿನ ಇಮಾಮರ ಭಾಷಣಗಳು ಇಂದಿನ ಕಾಲದ ಆವಶ್ಯಕತೆಗಳಿಗೆ ಅನುಸಾರವಾಗಿದ್ದುವು.

**ವೇಲ್ಸ್‌ನ ಪೋಲೀಸ್ ಕಮಿಷನರ್ ಚೆಸ್ಟರ್ ವಿಲಿಯಮ್** ಹೇಳುತ್ತಾರೆ: ಇಸ್ಲಾಮ್ ಬಗ್ಗೆ ನನ್ನ ಜ್ಞಾನ ವರ್ಧಿಸಿತು. ಈ ಜಲ್ಸದಲ್ಲಿ ಭಾಗವಹಿಸುವ ಮೊದಲು ನಾನು ಮುಸ್ಲಿಮರೆಲ್ಲರೂ ಒಂದೇ ರೀತಿ ಇದ್ದಾರೆಂದು ಭಾವಿಸುತ್ತಿದ್ದೆ. ಈಗ ನನಗೆ ತಿಳಿಯಿತು ಅನೇಕ ಪಂಗಡಗಳಿವೆ ಎಂದು. ಪ್ರಶಂಸಾರ್ಹವಾದ ವಿಷಯವೇನೆಂದರೆ, ಅಹ್ಮದಿಯರು ಶಾಂತಿಗೆ ಪ್ರೋತ್ಸಾಹ ನೀಡುತ್ತಾರೆ. ಯುವಜನರ ಸುಧಾರಣೆಗೋಸ್ಕರ ಬಹಳ ಸಮಯ ವಿನಿಯೋಗಿಸುತ್ತಾರೆ.

**ಮೆಕ್ಸಿಕೋ ದೇಶದ ಮಾರಿಯ ಸಾಹಿಬ** ಹೇಳುತ್ತಾರೆ: ನಾನು ಮುಸ್ಲಿಮಳಾಗಿ ಎರಡು ತಿಂಗಳು ದಾಟಿದುವು. ಇಸ್ಲಾಮ್ ಬಗ್ಗೆ ಅನೇಕ ಪ್ರಶ್ನೆಗಳಿದ್ದುವು. ಜಲ್ಸದಲ್ಲಿ ಭಾಗವಹಿಸಿ ಇಸ್ಲಾಮ್ ಬಗ್ಗೆ ನನ್ನ ತಿಳುವಳಿಕೆಗಳು ವರ್ಧಿಸಿದುವು. ನನ್ನ ಎಲ್ಲ ಸಂಶಯಗಳೂ ಪ್ರಶ್ನೆಗಳೂ ಕೊನೆಗೊಂಡುವು.

# LOVE FOR ALL - HATRED FOR NONE

# ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ

ವಾರ್ತೆಗಳು

# 6,68,500 ಮಂದಿ ಅಹ್ಮದಿಯಾ ಮುಸ್ಲಿಂ ಜಮಾಅತ್‌ಗೆ ಸೇರ್ಪಡೆ

ಲಂಡನ್: ಅಹ್ಮದಿಯಾ ಮುಸ್ಲಿಂ ಜಮಾಅತಿನ 53ನೇ ವಾರ್ಷಿಕ ಸಮ್ಮೇಳನ (ಜಲ್ಸಾ ಸಾಲಾನ) ಹ್ಯಾಂಪ್‌ಶೈರ್‌ನ ಆಲ್ಟನ್‌ನಲ್ಲಿರುವ ಹದೀಕತುಲ್ ಮಹ್‌ದಿಯಲ್ಲಿ ಜರಗಿತು. ಮೂರು ದಿನಗಳ ಜಲ್ಸಾ ಸಾಲಾನ ಆಗಸ್ಟ್ 4ರಂದು ಅಹ್ಮದಿಯಾ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರ ಸ್ಫೂರ್ತಿದಾಯಕ ಭಾಷಣದೊಂದಿಗೆ ಮುಕ್ತಾಯವಾಯಿತು.

115 ರಾಷ್ಟ್ರಗಳಿಂದ 39,800 ಮಂದಿ ಸಮ್ಮೇಳನದಲ್ಲಿ ಭಾಗವಹಿಸಿದರು. ಈ ಜಲ್ಸಾದಲ್ಲಿ ಅನೇಕ ಅಹ್ಮದಿಯೇತರ ಮುಸ್ಲಿಮರೂ ಮುಸ್ಲಿಮೇತರರೂ ಅತಿಥಿಗಳಾಗಿ ಭಾಗವಹಿಸಿದರು. ಸಮ್ಮೇಳನದ ಎಲ್ಲ ಕಾರ್ಯಕ್ರಮಗಳು M.T.A. Internationl ಮೂಲಕ ನೇರವಾಗಿ ಪ್ರಸಾರಗೊಳಿಸಲ್ಪಟ್ಟವು. 3ನೇ ದಿನ ಮಧ್ಯಾಹ್ನ ಪಂಚಮ ಖಲೀಫರ ಸನ್ನಿಧಿಯಲ್ಲಿ ನಡೆದ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಜಲ್ಸಾ ಸಾಲಾನದ ಒಂದು ಮುಖ್ಯಾಂಶವಾಗಿತ್ತು. ಸಮ್ಮೇಳನದಲ್ಲಿ ಭಾಗವಹಿಸಿದವರು ಮಾನವ ಸರಪಳಿಯನ್ನು ರಚಿಸಿ ಖಲೀಫರು ಉಚ್ಚರಿಸಿದ ಪ್ರತಿಜ್ಞೆಯನ್ನು ಪುನರಾವರ್ತಿಸಿದರು. ಅದಕ್ಕಿಂತ ಮುಂಚೆ, ಕಳೆದ ವರ್ಷ ಜಗತ್ತಿನಾದ್ಯಂತ 6,68,500ಕ್ಕೂ ಮಿಕ್ಕಿದ ಜನರು ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆಂದು ಖಲೀಫರು ಬಹಿರಂಗಪಡಿಸಿದರು.

ಈ ಆಧುನಿಕ ಲೋಕದಲ್ಲಿ ಇಸ್ಲಾಂ ಧರ್ಮ ವಿಶಿಷ್ಟವಾಗಿ, ಮತ್ತಿತರ ಧರ್ಮಗಳು ಸರ್ವ ಸಾಮಾನ್ಯವಾಗಿ ಹೇಗೆ ತೀವ್ರ ಟೀಕೆಗೆ ಗುರಿಯಾಗುತ್ತಿವೆ ಎಂದು ಅವರು ವಿವರಿಸಿದರು. ಇಸ್ಲಾಮಿನ ಬೋಧನೆಗಳನ್ನು ಅವರು ಶಕ್ತವಾಗಿ ಸಮರ್ಥಿಸಿ, ಇತರ ಸಾಮಾಜಿಕ ವ್ಯವಸ್ಥೆಗಳಿಗಿಂತ ಹೇಗೆ ಶ್ರೇಷ್ಠವಾಗಿದೆಯೆಂದು ವಿವರಿಸಿದರು. ಮಾನವ ಹಕ್ಕುಗಳನ್ನು ಸಂರಕ್ಷಿಸಲು ಪವಿತ್ರ ಖುರ್‌ಆನ್ ನೀಡುವ ಬೋಧನೆಗಳ ಕುರಿತು ಅವರು ಮಾತನಾಡಿದರು. ಧರ್ಮವು ಆಧುನಿಕ ಲೋಕಕ್ಕೆ ಹೊಂದಾಣಿಕೆಯಾಗುವುದಿಲ್ಲವೆಂದು ಸರ್ವ ಸಾಮಾನ್ಯವಾಗಿ ಆರೋಪಿಸಲಾಗುತ್ತಿದ್ದು, ಆಧುನಿಕ ಯುಗಕ್ಕೆ ತಕ್ಕಂತೆ ಧಾರ್ಮಿಕ ಬೋಧನೆಗಳು ಸುಧಾರಣೆಗೊಳ್ಳಬೇಕೆಂದು ಹೇಳಲಾಗುತ್ತದೆ. ತಮ್ಮ ಧರ್ಮಗಳು ಆಧುನಿಕ ಕಾಲಕ್ಕೆ ತಕ್ಕಂತೆ ಸುಧಾರಣೆಗೊಳ್ಳಬೇಕೆಂಬುದರ ಬಗ್ಗೆ ಕೆಲವು ಧರ್ಮಗಳು ಚರ್ಚೆ ನಡೆಸುತ್ತವೆ. ಆದರೆ ಇಸ್ಲಾಂ ಧರ್ಮವು ಕಾಲಾತೀತ ಮತ್ತು ಸಾರ್ವಲೌಕಿಕವೆಂದೂ ಪವಿತ್ರ ಖುರ್‌ಆನ್ ಎಲ್ಲ ಕಾಲಕ್ಕೂ ಎಲ್ಲ ಪ್ರದೇಶಗಳಿಗೂ ಅನ್ವಯಿಸುವ ಪರಿಪೂರ್ಣ ಗ್ರಂಥವೆಂದೂ ಅವರು ಹೇಳಿದರು.

ಅವರು ಇನ್ನೂ ಹೇಳಿದರು: "ಪವಿತ್ರ ಖುರ್‌ಆನ್ ಸರ್ವಶಕ್ತನಾದ ಅಲ್ಲಾಹನಿಂದ ಅವತೀರ್ಣವಾದ ಗ್ರಂಥವೆಂದು ನಾವು ದೃಢವಾಗಿ ನಂಬುತ್ತೇವೆ. ಅದನ್ನು ಸಂರಕ್ಷಿಸಲಾಗುವುದೆಂದು ಅಲ್ಲಾಹನು ವಾಗ್ದಾನ ಮಾಡಿದ್ದಾನೆ. 1400 ವರ್ಷಗಳಿಂದ ಖುರ್‌ಆನಿನಲ್ಲಿ ಏನೂ ಬದಲಾವಣೆಯಾಗಿಲ್ಲ. ಖುರ್‌ಆನಿನ ಬೋಧನೆಗಳು ಶಾಶ್ವತವೂ ಎಲ್ಲ ಕಾಲದ ಜನರಿಗೋಸ್ಕರವೂ ಆಗಿದೆ."

"ಈ ಯುಗದಲ್ಲಿ ವಾಗ್ದತ್ತ ಮಸೀಹರನ್ನು ಕಳುಹಿಸಿ ಅಲ್ಲಾಹನು ಪವಿತ್ರ ಖುರ್‌ಆನಿನ ಬೋಧನೆಗಳನ್ನು ಸಂರಕ್ಷಿಸಿದ್ದಾನೆ. ವಾಗ್ದತ್ತ ಮಸೀಹರು ಪವಿತ್ರ ಖುರ್‌ಆನಿನ ಉಪದೇಶಗಳನ್ನು ವಿವರಿಸಿ ಅದರಲ್ಲಿ ಗುಪ್ತವಾಗ ಜ್ಞಾನ ನಿಧಿಯನ್ನು ಬಹಿರಂಗಪಡಿಸಿದರು. ಮಾನವ ಸಂವಹನಗಳ ಎಲ್ಲ ಆವಶ್ಯಕತೆಗಳನ್ನು – ವ್ಯಕ್ತಿಗಳು ಮತ್ತು ಸಾಮಾಜಿಕ ಸಂಬಂಧಗಳಿಂದ ಹಿಡಿದು ಅಂತರ್ರಾಷ್ಟ್ರೀಯ ಸಂಬಂಧಗಳವರೆಗೆ – ಪವಿತ್ರ ಖುರ್‌ಆನ್ ಪೂರೈಸುತ್ತದೆ. ಅದು ಆಧ್ಯಾತ್ಮಿಕತೆಯೊಂದಿಗೆ ಮಹತ್ತರ ಶೈಕ್ಷಣಿಕ ಮತ್ತು ವೈಜ್ಞಾನಿಕ ಸತ್ಯಗಳನ್ನು ಬಹಿರಂಗಪಡಿಸುತ್ತವೆ. ಅದು ದೇವನಿಗೆ ಸಲ್ಲಬೇಕಾದ ಹೊಣೆಗಾರಿಕೆಗಳನ್ನೂ ಸೃಷ್ಟಿಗಳ ಹಕ್ಕುಗಳನ್ನೂ ಸಮಗ್ರವಾಗಿ ವಿವರಿಸುತ್ತದೆ. ಆದುದರಿಂದ ನಾವು ವಿಮರ್ಶಕರ ಆಕ್ಷೇಪಣೆಗಳಿಂದ ಪ್ರಭಾವಿತರಾಗುವ ಅಗತ್ಯವಿಲ್ಲ ಮತ್ತು ಎಂದಿಗೂ ಖುರ್‌ಆನ್ ಬಗ್ಗೆ ಕೀಳರಿಮೆ ಹೊಂದಬಾರದು" ಎಂದು ಖಲೀಫ ಹೇಳಿದರು.

"ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮನುಷ್ಯರು ರಕ್ತಪಾತ, ಹಗೆ – ದ್ವೇಷಗಳನ್ನು ಹೊಂದಬಾರದೆಂದು ಉಪದೇಶಿಸಿದ್ದರು. ವಿಧವೆಯರ, ವೃದ್ಧರ, ಉದ್ಯೋಗಿಗಳ ಹಕ್ಕುಗಳ ಸಂರಕ್ಷಣೆ ಬಗ್ಗೆ ಇಸ್ಲಾಂ ಆದೇಶಿಸುತ್ತದೆ" ಎಂದು ಖಲೀಫ ಹೇಳಿದರು.

ಈ ಮೂರು ದಿನಗಳಲ್ಲಿ ಹಝ್ರತ್ ಖಲೀಫತುಲ್ ಮಸೀಹ್ 5 ಭಾಷಣಗಳನ್ನು ಮಾಡಿದರು. ವಿವಿಧ ಧಾರ್ಮಿಕ ವಿಷಯಗಳ ಸಂಬಂಧಿಸಿ ಅನೇಕ ವಿದ್ವಾಂಸರು ಉಪನ್ಯಾಸಗಳನ್ನು ನೀಡಿದರು.

"ಮಾಧ್ಯಮದಲ್ಲಿ ಇಸ್ಲಾಂ", "ಟುರಿನ್ ಶವ ವಸ್ತ್ರ", "ಜಾಗತಿಕ ನಾಯಕರಿಗೆ ಮುಹಮ್ಮದ್ ಪೈಗಂಬರ್(ಸ) ಕಳುಹಿಸಿದ ಚಾರಿತ್ರಿಕ ಪತ್ರಗಳು" ಮೊದಲಾದ ವಸ್ತು ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಹಝ್ರತ್ ಖಲೀಫತುಲ್ ಮಸೀಹರ ಮೌನ ಪ್ರಾರ್ಥನೆಯೊಂದಿಗೆ ಜಲ್ಸಾ ಸಾಲಾನ ಮುಕ್ತಾಯವಾಯಿತು.

# ಮಡಿಕೇರಿ ಲಜ್‌ನ ಇಮಾಇಲ್ಲಾಹ್ ವತಿಯಿಂದ ರೇಡಿಯೋ ಕಾರ್ಯಕ್ರಮ

ಅಲ್ಲಾಹುವಿನ ಅನುಗ್ರಹದಿಂದ 'ಈದುಲ್ ಅಝ್‌ಹಾ' ಹಬ್ಬದ ಪ್ರಯುಕ್ತ ಮಡಿಕೇರಿಯ ಅಹ್ಮದಿಯಾ ಜಮಾಅತಿನ ಲಜ್‌ನ ಇಮಾಇಲ್ಲಾಹ್ ವತಿಯಿಂದ ಮಡಿಕೇರಿ ಆಕಾಶವಾಣಿ ಕೇಂದ್ರದಿಂದ ತಾ. 12–08–2019 ರಂದು ರಾತ್ರಿ 8.00 ಘಂಟೆಗೆ ವಿಶೇಷ ಕಾರ್ಯಕ್ರಮ ಮೂಡಿಬಂತು.

ಮಡಿಕೇರಿ ಆಕಾಶವಾಣಿಯಲ್ಲಿ ಉದ್ಘೋಷಕರಾಗಿ ಕಾರ್ಯನಿರ್ವಹಿಸುತ್ತಿರುವ ಜಮಾಅತಿನ ಸದಸ್ಯರಾದ ಬಿ.ಎಸ್ ರಫೀಕ್ ಅಹ್ಮದ್ ಸಾಹೇಬ್ ಅವರ ಪ್ರಯತ್ನದಿಂದಾಗಿ ಕಳೆದ ಆರು ವರ್ಷಗಳಿಂದ ನಿರಂತರವಾಗಿ ಲಜ್‌ನ ವತಿಯಿಂದ ರೇಡಿಯೋ ಕಾರ್ಯಕ್ರಮ ನೀಡಲು ಅವಕಾಶ ಲಭಿಸಿದೆ – ಅಲ್‌ಹಮ್ದುಲಿಲ್ಲಾಹ್. ಈಗಾಗಲೇ ಈದುಲ್ ಫಿತರ್, ಈದುಲ್ ಅಝ್‌ಹಾ ಅಲ್ಲದೇ ಸೀರತುನ್ನಬಿ ಪ್ರಯುಕ್ತ ವಿಶೇಷ ಕಾರ್ಯಕ್ರಮಗಳನ್ನು ಲಜ್‌ನ ವತಿಯಿಂದ ನೀಡಲಾಗಿದೆ.

ತಾ. 12 ರಂದು ಪ್ರಸಾರವಾದ ಕಾರ್ಯಕ್ರಮದಲ್ಲಿ ಈದುಲ್ ಅಝ್‌ಹಾ ಹಬ್ಬದ ಮಹತ್ವದ ಕುರಿತು ವಿವರಿಸಲಾಯಿತು. ಪವಿತ್ರ ಖುರ್‌ಆನ್ ಪಾರಾಯಣ ಹಾಗೂ ಅದರ ಕನ್ನಡ ಭಾವಾರ್ಥ, ಹಝ್ರತ್ ಇಬ್ರಾಹಿಂ(ಅ), ಪತ್ನಿ ಹಝ್ರತ್ ಹಾಜರಾ(ರ), ಪುತ್ರ ಹಝ್ರತ್ ಇಸ್ಮಾಈಲ್(ಅ) ಅವರು ಅಲ್ಲಾಹನ ಸಂಪ್ರೀತಿಗಾಗಿ ಮಾಡಿದ ಆತ್ಮಸಮರ್ಪಣೆ ಕುರಿತು ಭಾಷಣ, ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಅವರ ನುಡಿಮುತ್ತುಗಳು, ತ್ಯಾಗ–ಬಲಿದಾನದ ಕುರಿತು ಕನ್ನಡ ನಝ್ಮ್, ಹಬ್ಬದ ಶುಭಾಶಯ ಕೋರುವ ಉರ್ದು ನಝ್ಮ್ ಒಳಗೊಂಡಿದ್ದವು.

ಮಡಿಕೇರಿ ಜಮಾಅತಿನ ಲಜ್‌ನ ಅಧ್ಯಕ್ಷೆಯಾದ ನಸೀರಾ ಸಾಹಿಬ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಖುದ್‌ಸಿಯಾ ಸಾಹಿಬ, ಸೈದಾ ಸಾಹಿಬ, ಝೀನತ್ ಸಾಹಿಬ, ಶಮೀಮ ಸಾಹಿಬ, ಬರ್ಕತ್ ಸಾಹಿಬ, ರೂಮಾನ್ ಸಾಹಿಬ, ಅಝೀಝು ಝ್ಯುಬ ಸಾಹಿಬ ಹಾಗೂ ಅಝೀಝು ರಹೀಲ ಸಾಹಿಬ ಭಾಗವಹಿಸಿದ್ದರು.

ಕೊಡಗು ಮಾತ್ರವಲ್ಲದೇ ನೆರೆಯ ಐದಾರು ಜಿಲ್ಲೆಗಳಲ್ಲಿ ಜನಪ್ರಿಯಗೊಂಡಿರುವ ಮಡಿಕೇರಿ ಆಕಾಶವಾಣಿ ಸುಮಾರು ಆರು ಲಕ್ಷಕ್ಕೂ ಅಧಿಕ ಶ್ರೋತೃಗಳನ್ನು ಹೊಂದಿದೆ.

## ಮಂಗಳೂರು: ಮಜ್ಲಿಸ್ ಅನ್ಸಾರುಲ್ಲಾಹ್ ವಾರ್ಷಿಕ ಇಜ್ತಿಮಾ

ದಿನಾಂಕ 25–8–2019ರಂದು ಮಂಗಳೂರು ಮಜ್ಲಿಸ್ ಅನ್ಸಾರುಲ್ಲಾಹ್ ವಾರ್ಷಿಕ ಇಜ್ತಿಮಾ ಜರಗಿತು. ಮೌಲವಿ ಶರೀಫ್ ಖಾನ್ ಸಾಹಿಬರ ನೇತೃತ್ವದಲ್ಲಿ ತಹಜ್ಜುದ್ ನಮಾಝ್‌ನೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಫಜರ್ ನಮಾಝಿನ ನಂತರ ಮೌಲವಿ ಸಾಹಿಬರು ದರ್ಸ್ ನೀಡಿದರು.

ಬೆಳಿಗ್ಗೆ 10.30ಕ್ಕೆ ಮಂಗಳೂರು ಜಮಾಅತಿನ ಪ್ರೆಸಿಡೆಂಟ್ ಜನಾಬ್ ಮುಹಮ್ಮದ್ ಯೂಸುಫ್ ಸಾಹಿಬರ ಅಧ್ಯಕ್ಷತೆಯಲ್ಲಿ ಸಭೆ ಉದ್ಘಾಟಿಸಲ್ಪಟ್ಟಿತು. ಜನಾಬ್ ಅಬ್ದುಲ್ ಕರೀಂ ಸಾಹಿಬ್ ಖುರ್‌ಆನ್ ಪಠಿಸಿದರು. ಝಈಂ ಜನಾಬ್ ಬಿ.ಎಸ್. ಅಬ್ದುಲ್ ರಹೀಂ ಸಾಹಿಬ್ ಅನ್ಸಾರುಲ್ಲಾಹ್ ಪ್ರತಿಜ್ಞೆ ಬೋಧಿಸಿದರು. ಮೌಲವಿ ಶರೀಫ್ ಖಾನ್ ಸಾಹಿಬ್ ಖಿಲಾಫತ್ ಪ್ರತಿಜ್ಞೆ ಬೋಧಿಸಿದರು. ಪ್ರೆಸಿಡೆಂಟ್ ಸಾಹಿಬ್ ಹಝ್‌ರತ್ ಖಲೀಫತುಲ್ ಮಸೀಹರ ಸಂದೇಶಗಳನ್ನು ವಾಚಿಸಿದರು. ಮೌಲವಿ ಸಾಹಿಬ್ ನಮಾಝಿನ ಮಹತ್ವದ ಬಗ್ಗೆ ಭಾಷಣ ಮಾಡಿದರು.

ಖುರ್‌ಆನ್ ಕಂಠಪಾಠ, ಖುರ್‌ಆನ್ ಪಠನ, ಭಾಷಣ, ನಝ್ಮ್, ಕ್ವಿಝ್, ಮೊದಲಾದ ಇಲ್ಮೀ ಸ್ಪರ್ಧೆಗಳು ಜರಗಿದವು. ಅನಂತರ ಏರ್‌ಗನ್ ಶೂಟಿಂಗ್, ಮ್ಯೂಸಿಕಲ್ ಚೇರ್, ಮುಷ್ಟಿಯುದ್ಧ, ಮೆಮರಿ ಟೆಸ್ಟ್, ಮೊದಲಾದ ಸ್ಪರ್ಧೆಗಳು ನಡೆದವು.

ಅಪರಾಹ್ನ ಸಮಾರೋಪ ಸಭೆ ಝಈಂ ಸಾಹಿಬರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ಮುಹಮ್ಮದ್ ಯೂಸುಫ್ ಸಾಹಿಬ್ ಖುರ್‌ಆನ್ ಪಠಿಸಿದರು. ಜನಾಬ್ ವಿ.ಎ. ರಶೀದ್ ಸಾಹಿಬ್ ನಝ್ಮ್ ಹಾಡಿದರು. ಝಈಂ ಸಾಹಿಬ್ ಮತ್ತು ಪ್ರೆಸಿಡೆಂಟ್ ಸಾಹಿಬ್ ಬಹುಮಾನ ವಿತರಣೆ ಮಾಡಿದರು. ಝಈಂ ಸಾಹಿಬ್ ಕೃತಜ್ಞತೆ ಸಲ್ಲಿಸಿದರು. ದುಆದೊಂದಿಗೆ ಸಮಾರಂಭ ಸಮಾಪ್ತವಾಯಿತು.

## ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಅತ್ಫಾಲುಲ್ ಅಹ್ಮದಿಯಾ ವಾರ್ಷಿಕ ಇಜ್ತಿಮಾ

ಮಂಗಳೂರಿನ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಅತ್ಫಾಲುಲ್ ಅಹ್ಮದಿಯಾ ವಾರ್ಷಿಕ ಇಜ್ತಿಮಾ ಸೆಪ್ಟೆಂಬರ್ 1ರಂದು "ದಾರುಸಲಾಮ್"ನಲ್ಲಿ ಜರಗಿತು.

ಪೂರ್ವಾಹ್ನ 10ಗಂಟೆಗೆ ಜಮಾಅತ್ ಅಧ್ಯಕ್ಷ ಮುಹಮ್ಮದ್ ಯೂಸುಫ್ ಸಾಹಿಬರ ಅಧ್ಯಕ್ಷತೆಯಲ್ಲಿ ಸಭೆ ಆರಂಭವಾಯಿತು. ತಾರಿಖ್ ಅಹ್ಮದ್ ಸಾಹಿಬ್ ಖುರ್‌ಆನ್ ಪಠಿಸಿದರು. ಅಬ್ದುಲ್ ಮಲಿಕ್ ಸಾಹಿಬ್ ನಝ್ಮ್ ಹಾಡಿದರು. ಖಾಇದ್ ವಿ ಅಬ್ದುಲ್ ರಶೀದ್ ಸಾಹಿಬ್ ಖುದ್ದಾಮ್ ಮತ್ತು ಅತ್ಫಾಲ್ ಪ್ರತಿಜ್ಞೆಗಳನ್ನು ಬೋಧಿಸಿದರು. ಮೌಲವಿ ಶರೀಫ್ ಖಾನ್ ಸಾಹಿಬ್ ಖಿಲಾಫತ್ ಪ್ರತಿಜ್ಞೆಯನ್ನು ಬೋಧಿಸಿದರು. ಅಧ್ಯಕ್ಷರು ಖಾದಿಮ್‌ಗಳ ಹೊಣೆಗಾರಿಕೆಗಳ ಕುರಿತು ವಿವರಿಸಿದರು. ಅನಂತರ ವಿವಿಧ ಇಲ್ಮೀ ಸ್ಪರ್ಧೆಗಳೂ ದೈಹಿಕ ಸ್ಪರ್ದೆಗಳೂ ನಡೆದವು.

ಅಪರಾಹ್ನ ಖಾಇದ್ ಸಾಹಿಬರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ರಿಯಾಝ್ ಸಾಹಿಬ್ ಖುರ್‌ಆನ್ ಪಠಿಸಿದರು. ಝಫರ್ ಅಹ್ಮದ್ ಸಾಹಿಬ್ ನಝ್ಮ್ ಹಾಡಿದರು. ಮೌಲವಿ ಶರೀಫ್ ಖಾನ್ ಸಾಹಿಬ್ ಖಾದಿಮ್‌ಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಅತಿಥಿಗಳಾಗಿ ಆಗಮಿಸಿದ್ದ ಮಿ। ರೋಹಿತ್ (Information Field Publicity Officer) ಮತ್ತು ಮಿ। ಜೆಫಿನ್ (M.V. Shetty College Student) ಅಹ್ಮದಿಯಾ ಸಂಘಟನೆ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಖಾಇದ್ ಸಾಹಿಬ್ ಕೃತಜ್ಞತೆ ಸಲ್ಲಿಸಿದರು.

ಸ್ಪರ್ಧೆಯ ವಿಜೇತರಿಗೆ ಜಮಾಅತ್ ಅಧ್ಯಕ್ಷರು ಬಹುಮಾನಗಳನ್ನು ವಿತರಿಸಿದರು. ಮೌನ ಪ್ರಾರ್ಥನೆಯೊಂದಿಗೆ ಸಭೆ ಮುಕ್ತಾಯವಾಯಿತು.

**ನಿಧನ ವಾರ್ತೆಗಳು**

## ಜನಾಬ್ ಮುಜೀಬ್ ರಹ್ಮಾನ್ ಸಾಹಿಬ್



ಜನಾಬ್ ಮುಜೀಬುರ್ರಹ್ಮಾನ್ ಸಾಹಿಬ್ 30–7–2019ರಂದು ರಬ್ವದಲ್ಲಿ ತನ್ನ 85ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.")

ಅವರು "ಮೂಸಿ" ಆಗಿದ್ದರು. ಅವರ ತಂದೆ ಮಿಶನರಿ ಆಗಿದ್ದರು. ಅವರ ತಂದೆ ಬಾಲ್ಯಕಾಲದಲ್ಲಿ ಅವರನ್ನೂ ಅವರ ತಾಯಿಯನ್ನೂ ಖಾದಿಯಾನಿನಲ್ಲಿ ವಾಸಿಸಲು ಕಳುಹಿಸಿದರು. ಅವರ ತಂದೆ ಬಂಗಾಳದಲ್ಲಿ 36 ವರ್ಷಗಳ ಕಾಲ ಮಿಶನರಿಯಾಗಿ ಸೇವೆ ಸಲ್ಲಿಸಿದ್ದರು.

ಮುಜೀಬುರ್ರಹ್ಮಾನ್ ಸುಪ್ರೀಂಕೋರ್ಟಿನ ಲಾಯರ್ ಆಗಿದ್ದರು. ಅವರು ಜಮಾಅತಿಗೆ ಮಹತ್ತರ ಸೇವೆ ಸಲ್ಲಿಸಿದ್ದಾರೆ. 1980ರಲ್ಲಿ ಖಲೀಫತುಲ್ ಮಸೀಹ್ ಸಾಲಿಸ್ ಅವರನ್ನು ರಾವಲ್ಪಿಂಡಿಯ ಅಮೀರ್ ಆಗಿ ನೇಮಿಸಿದರು. 1998ರ ವರೆಗೆ ಅವರು ಆ ಹುದ್ದೆಯಲ್ಲಿದ್ದರು. ಪಾಕಿಸ್ಥಾನದಲ್ಲಿ ಜಮಾಅತಿಗೆ ವಿರುದ್ಧವಾದ ಅನೇಕ ಮೊಕದ್ದಮೆಗಳಲ್ಲಿ ಅವರು ವಾದಿಸಿ ಜಯಶಾಲಿಯಾಗಿದ್ದರು. 1978ರಲ್ಲಿ ಅವರನ್ನು ಮಜ್ಲಿಸ್ ಮುಶಾವರತ್‌ನ ಸ್ಟೇಂಡಿಂಗ್ ಕಮಿಟಿಯ ಸದಸ್ಯರನ್ನಾಗಿ ನೇಮಿಸಲಾಯಿತು. ಅವರು ಫಿಖ್ಹ್ ಕಮಿಟಿಯ ಸದಸ್ಯರೂ ಆಗಿದ್ದರು. ಅವರಿಗೆ ಅಪಾರವಾದ ಧಾರ್ಮಿಕ ಮತ್ತು ಭೌತಿಕ ಜ್ಞಾನವಿತ್ತು. ಅವರು ಉತ್ತಮ ಭಾಷಣಗಾರರೂ ಆಗಿದ್ದರು. ತನ್ನ ಕೌಶಲ್ಯಗಳನ್ನೆಲ್ಲ ಅವರು ಜಮಾಅತಿನ ಸೇವೆಗಾಗಿ ಸಲ್ಲಿಸಿದರು. ಅವರು ತಮ್ಮ ಮೂವರು ಪುತ್ರರನ್ನು ಅಗಲಿದ್ದಾರೆ. ಅವರ ಪೈಕಿ ಒಬ್ಬ ಪುತ್ರ ನ್ಯಾಯವಾದಿಯಾಗಿದ್ದು ಜಮಾಅತಿಗೆ ತನ್ನ ಸೇವೆ ಸಲ್ಲಿಸುತ್ತಿದ್ದಾರೆ.

ಅಲ್ಲಾಹನು ಮೃತರಿಗೆ ಮಗ್ಫಿರತ್ ಮತ್ತು ಜನ್ನತನ್ನು ದಯಪಾಲಿಸಲಿ – ಆಮೀನ್.

=======================

## ಜನಾಬ್ ಎಂ.ಎ. ಮುಹಮ್ಮದ್ ಸಾಹಿಬ್



ಕಲ್ಲಿಕೋಟೆ: ಜನಾಬ್ ಎಂ.ಎ. ಮುಹಮ್ಮದ್ ಸಾಹಿಬ್ 19–6–2019ರಂದು ನಿಧನರಾದರು. ("ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.") ಕೊಡಿಯತ್ತೂರಿನ ಪ್ರಖ್ಯಾತ ಖಾಝಿ ಅಬ್ದುಲ್ ಅಝೀಝ್ ಮೌಲವಿಯ ಪುತ್ರನಾಗಿ 1932ರಲ್ಲಿ ಅವರು ಜನಿಸಿದರು. ಜಮಾಅತೆ ಇಸ್ಲಾಮೀ ಕೇರಳ ಸಂಸ್ಥಾನ ಅಮೀರ್ ಆಗಿದ್ದ ಕೆ.ಸಿ. ಅಬ್ದುಲ್ಲ ಮೌಲವಿ ಅವರ ಮಾವ ಆಗಿದ್ದರು.

ಕೊಡಿಯತ್ತೂರಿನಲ್ಲಿ ಅಹ್ಮದಿ – ಅಹ್ಮದಿಯೇತರ ಸಂವಾದದ ಬಳಿಕ 1964ರಲ್ಲಿ ಎಂ.ಎ. ಮುಹಮ್ಮದ್ ಸಾಹಿಬರು ಅಹ್ಮದಿಯತ್ ಸ್ವೀಕರಿಸಿದರು. 1964 ಜೂನ್ 29ರಂದು ರೂಪಿಸಲ್ಪಟ್ಟ ಕೊಡಿಯತ್ತೂರು ಜಮಾಅತಿನ ಪ್ರೆಸಿಡೆಂಟಾಗಿ ಅವರು ಅನೇಕ ವರ್ಷ ಕಾಲ ಸೇವೆ ಸಲ್ಲಿಸಿದರು. ಅವರು ನೀಡಿದ ಸ್ಥಳ ಮತ್ತು ಧನದಿಂದ ಕೊಡಿಯತ್ತೂರಿನಲ್ಲಿ ಮಸೀದಿ ನಿರ್ಮಿಸಲ್ಪಟ್ಟಿತು.

2007ರಲ್ಲಿ ಅವರು ಜಿಲ್ಲಾ ಅಮೀರ್ ಮತ್ತು ಕಲ್ಲಿಕೋಟೆ ಸ್ಥಳೀಯ ಅಮೀರ್ ಆಗಿ ಸೇವೆ ಸಲ್ಲಿಸಿದರು. 1966ರಲ್ಲಿ ಅವರು ಹಜ್ಜ್ ಕರ್ಮಾನುಷ್ಠಾನ ಮಾಡಿದರು.

ಕಲ್ಲಿಕೋಟೆ ಜಿಲ್ಲೆಯ ಗಣ್ಯ ವ್ಯಾಪಾರಿ ಮತ್ತು ಪ್ಲಾಂಟರ್ ಆಗಿದ್ದ ಎಂ.ಎ. ಅವರು ತನ್ನ ಇಪ್ಪತ್ತನೇ ವಯಸ್ಸಿನಿಂದಲೇ ವ್ಯಾಪಾರ ರಂಗದಲ್ಲಿದ್ದರು. ಅವರು ನೂರಾರು ಮಂದಿಗೆ ಉಪಜೀವನ ಒದಗಿಸಿದರು. ದಾನ ಧರ್ಮದಲ್ಲಿ ಅವರು ಕೊಡುಗೈ ಆಗಿದ್ದರು.

ಅವರು "ಯುಗರಶ್ಮಿ"ಯ ಹಿತೈಷಿಯೂ ಆಗಿದ್ದು, ಕಡೂರಿನಲ್ಲಿದ್ದ "ಸ್ಟಾಂಡರ್ಡ್ ಟೈಲ್ಸ್" ಎಂಬ ಅವರ ಹಂಚಿನ ಕಾರ್ಖಾನೆಯ ಜಾಹಿರಾತನ್ನು ಕೊಟ್ಟು ನಮ್ಮನ್ನು ಪ್ರೋತ್ಸಾಹಿಸುತ್ತಿದ್ದರು.

ಮೃತರು ಪತ್ನಿ, ಮೂವರು ಪುತ್ರರು ಮತ್ತು 6 ಮಂದಿ ಪುತ್ರಿಯರನ್ನು ಅಗಲಿದ್ದಾರೆ. ಮೃತರಿಗೆ ಅಲ್ಲಾಹನು ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ – ಆಮೀನ್.

=======================

## ಝೊಹರಾಬಿ ಸಾಹಿಬ

ಮಡಿಕೇರಿ ಅಹ್ಮದಿಯಾ ಜಮಾಅತಿನ ಮಾಜಿ ಅಧ್ಯಕ್ಷರಾಗಿದ್ದ ಮರ್ಹೂಮ್ ಬಿ. ಶೈಖ್ ಅಲಿ ಸಾಹೇಬರ ಪತ್ನಿ ಝೊಹರಾಬಿ ಅವರು 82ನೇ ವಯಸ್ಸಿನಲ್ಲಿ 06–07–2019 ರಂದು ಮಂಗಳೂರಿನಲ್ಲಿ ನಿಧನರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್."

ಝೊಹರಾಬಿ ಅವರು ಮೂಲತಃ ಮಂಜೇಶ್ವರ ಉದ್ಯಾವರ ನಿವಾಸಿ, ಮಡಿಕೇರಿಗೆ ಅಹ್ಮದಿಯಾ ಸಂದೇಶವನ್ನು ಮೊತ್ತ ಮೊದಲಿಗೆ ತಲುಪಿಸಿದ್ದ ಮರ್ಹೂಮ್ ಯು.ಎಂ.ಎ ಮೊಹಿಯುದ್ದೀನ್ ಸಾಹೇಬರ ದ್ವಿತೀಯ ಪುತ್ರಿಯಾಗಿದ್ದು, 1937 ಆಗಸ್ಟ್ 15 ರಂದು ಜನಿಸಿದ್ದರು. 1957 ಸೆಪ್ಟೆಂಬರ್ 26 ರಂದು ಮೂಲತಃ ಮಂಗಳೂರಿನ ಬೆಂಗ್ರೆ ನಿವಾಸಿ, ಅಹ್ಮದಿಯಾ ಜಮಾಅತಿಗೆ ಹೊಸದಾಗಿ ಬೈಅತ್ ಆಗಿದ್ದ ಬಿ. ಶೈಖ್ ಅಲಿ ಅವರನ್ನು ವಿವಾಹವಾಗಿ ಮಡಿಕೇರಿಯ ಕೊಯನಾಡಿನಲ್ಲಿ ನೆಲೆಸಿದ್ದರು.

ಮಂಗಳೂರು ಅಹ್ಮದಿಯಾ ಜಮಾಅತಿನ ಝಈಂ ಅನ್ಸಾರುಲ್ಲಾಹ್ ಬಿ.ಎಸ್. ಅಬ್ದುಲ್ ರಹೀಂ, ಮಡಿಕೇರಿ ಆಕಾಶವಾಣಿಯ ಉದ್ಘೋಷಕ ರಫೀಕ್ ಅಹ್ಮದ್ ಹಾಗೂ ತಾಹಿರಾಬಿ – ಝೊಹರಾಬಿ ಅವರ ಮೂವರು ಮಕ್ಕಳು.

ಜೊಹರಾಬಿ ಅವರ ಮೃತದೇಹವನ್ನು ಬಜ್ಪೆಯ ಕಬರ್‌ಸ್ಥಾನದಲ್ಲಿ ದಫನ ಮಾಡಲಾಯಿತು. ಅಲ್ಲಾಹು ಮೃತರಿಗೆ ಮಗ್ಫಿರತ್ ಮತ್ತು ಜನ್ನತ್ ಕರುಣಿಸಲಿ – ಆಮೀನ್.

## ಓದಿದ್ದು ಭಾರತದಲ್ಲಿ ಮುಸ್ಲಿಮರನ್ನು ನಡೆಸಿಕೊಳ್ಳುವ ರೀತಿ ಆತಂಕಕಾರಿ: ಅಮೆರಿಕ ಸಂಸತ್ತು ಕಳವಳ

**2016ರಲ್ಲಿ ಅಮೆರಿಕ ಸಂಸತ್ತಿನ ಜಂಟಿ ಅಧಿವೇಶನಕ್ಕೆ ಭಾರತದ ಪ್ರಧಾನಿ ನರೇಂದ್ರ ಮೋದಿಯವರನ್ನು ಸ್ವಾಗತಿಸಲು ನಾವು ಹೆಮ್ಮೆಪಟ್ಟಿದ್ದೇವೆ. ಭಾರತದಲ್ಲಿ ಮುಸ್ಲಿಮರನ್ನು ನಡೆಸಿಕೊಳ್ಳುವ ರೀತಿಯ ಬಗ್ಗೆ ನಮಗೆ ಆತಂಕವಿತ್ತು ಮತ್ತು ಈಗಲೂ ಇದೆ ಎಂಬುದನ್ನು ನಾವು ಆಗಲೂ ಹೇಳಿದ್ದೆವು ಮತ್ತು ಈಗಲೂ ಹೇಳುತ್ತೇವೆ.**

ನ್ಯೂಯಾರ್ಕ್, ಜು.12: ಭಾರತದಲ್ಲಿ ಮುಸ್ಲಿಮರನ್ನು ನಡೆಸಿಕೊಳ್ಳುವ ರೀತಿಯ ಬಗ್ಗೆ ಅಮೆರಿಕ ಸಂಸತ್ತು ಕಳವಳಗೊಂಡಿದೆ ಎಂದು ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್‌ನ ಸ್ಪೀಕರ್ ನ್ಯಾನ್ಸಿ ಪೆಲೋಸಿ ಹೇಳಿದ್ದಾರೆ.

ವಾಶಿಂಗ್ಟನ್ ಡಿಸಿಯಲ್ಲಿ ಜಾನ್ ಚೇಂಬರ್ಸ್ (ಭಾರತ–ಅಮೆರಿಕ ವ್ಯೂಹಾತ್ಮಕ ಸಹಭಾಗಿತ್ವ ವೇದಿಕೆ)ನೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನ್ಯಾನ್ಸಿ, 2016ರಲ್ಲಿ ಅಮೆರಿಕ ಸಂಸತ್ತಿನ ಜಂಟಿ ಅಧಿವೇಶನಕ್ಕೆ ಭಾರತದ ಪ್ರಧಾನಿ ನರೇಂದ್ರ ಮೋದಿಯವರನ್ನು ಸ್ವಾಗತಿಸಲು ನಾವು ಹೆಮ್ಮೆಪಟ್ಟಿದ್ದೇವೆ. ಭಾರತದಲ್ಲಿ ಮುಸ್ಲಿಮರನ್ನು ನಡೆಸಿಕೊಳ್ಳುವ ರೀತಿಯ ಬಗ್ಗೆ ನಮಗೆ ಆತಂಕವಿತ್ತು ಮತ್ತು ಈಗಲೂ ಇದೆ ಎಂಬುದನ್ನು ನಾವು ಆಗಲೂ ಹೇಳಿದ್ದೆವು ಮತ್ತು ಈಗಲೂ ಹೇಳುತ್ತೇವೆ ಎಂದು ಹೇಳಿದ್ದಾರೆ.

ಭಾರತ ಮತ್ತು ಅಮೆರಿಕ ನಡುವಿನ ಸಂಬಂಧದ ಕುರಿತು ಈ ಸಂವಾದ ಕಾರ್ಯಕ್ರಮ ನಡೆದಿತ್ತು. ಭಾರತ ಮತ್ತು ಅಮೆರಿಕ ಸಂಬಂಧದ ಕುರಿತು ಉಲ್ಲೇಖಿಸಿದ ಅವರು, ಉಭಯ ದೇಶಗಳ ಸಂಬಂಧ ಇಡೀ ವಿಶ್ವದ ಮಹತ್ವಕ್ಕೆ ಉತ್ತೇಜನ ನೀಡಲಿದೆ, ಇನ್ನಷ್ಟು ಮಾರುಕಟ್ಟೆಗಳನ್ನು ಸೃಜಿಸಲು ಹಾಗೂ ಹೆಚ್ಚಿನ ಉದ್ಯಮಶೀಲತೆಗೆ ಅವಕಾಶ ದೊರಕಲಿದೆ ಎಂದು ನ್ಯಾನ್ಸಿ ಪೆಲೋಸಿ ಹೇಳಿದ್ದಾರೆ. **(ವಾರ್ತಾಭಾರತಿ 13–7–2019)**

## ಗೋಮಾಂಸ ಸೇವನೆಯನ್ನು ತಡೆಯುವುದು ಹಿಂಸೆಯ ಇನ್ನೊಂದು ರೂಪ ಎಂದಿದ್ದ ಗಾಂಧೀಜಿ: ಪುಸ್ತಕ

ಹೊಸದಿಲ್ಲಿ, ಜೂ.3: ಮಹಾತ್ಮಾ ಗಾಂಧಿ ಗೋಮಾಂಸ ಭಕ್ಷಣೆಯನ್ನು ಕಟುವಾಗಿ ವಿರೋಧಿಸಿರಬಹುದು. ಆದರೆ ಒಬ್ಬ ವ್ಯಕ್ತಿಯನ್ನು ಆತನಿಷ್ಟದ ಆಹಾರ ಸೇವಿಸದಂತೆ ತಡೆಯುವುದೂ ಹಿಂಸೆಗಿಂತ ಕಡಿಮೆಯಲ್ಲ ಎಂದು ಅವರು ಭಾವಿಸಿದ್ದರು ಎಂದು ಗಾಂಧಿ ಕುರಿತ ಹೊಸ ಪುಸ್ತಕ ಬಹಿರಂಗಪಡಿಸಿದೆ.

ಗಾಂಧಿ ಗೋಹತ್ಯೆಯನ್ನು ವಿರೋಧಿಸುತ್ತಿದ್ದರಾದರೂ ಮಾಂಸಹಾರಿಗಳ ಜೊತೆ ಅವರು ಮುಕ್ತವಾಗಿ ಬೆರೆಯುತ್ತಿದ್ದರು ಎಂದು ಅಮೆರಿಕ ಮೂಲದ ಇತಿಹಾಸ ತಜ್ಞ ನಿಕೊ ಸ್ಲೇಟ್ ಅವರು ತನ್ನ ಗಾಂಧೀಸ್ ಸರ್ಚ್ ಫೋರ್ ದ ಪರ್ಫೆಕ್ಟ್ ಡಾಯಟ್ ಪುಸ್ತಕದಲ್ಲಿ ಬರೆದಿದ್ದಾರೆ. ನಾನು ಓರ್ವ ಸಸ್ಯಾಹಾರಿ ಮತ್ತು ಆಹಾರ ಸುಧಾರಣಾವಾದಿ ಎನ್ನುವುದು ಎಲ್ಲರಿಗೂ ಗೊತ್ತು. ಅಹಿಂಸೆ ಎನ್ನುವುದು ಮಾನವರಷ್ಟೇ ಕೆಳಹಂತದ ಪ್ರಾಣಿಗಳಿಗೂ ಅನ್ವಯವಾಗುತ್ತದೆ ಮತ್ತು ನಾನು ಮಾಂಸಾಹಾರಿಗಳ ಜೊತೆಯೂ ಮುಕ್ತವಾಗಿ ಬೆರೆಯುತ್ತೇನೆ ಎನ್ನುವುದೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯ ಎಂದು ಗಾಂಧೀಜಿ ಹೇಳಿರುವುದನ್ನು ಸ್ಲೇಟ್ ತನ್ನ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಗಾಂಧಿಯ ಭಾರತದಲ್ಲಿ ಒಂದು ವಿಭಜನಾತ್ಮಕ ವಿಷಯವಾಗಿದ್ದ ಗೋಹತ್ಯೆ 2015ರಲ್ಲಿ ದಾದ್ರಿಯಲ್ಲಿ ಗೋಹತ್ಯೆಯ ಅನುಮಾನದಲ್ಲಿ 52ರ ಹರೆಯದ ಮುಹಮ್ಮದ್ ಅಖ್ಲಾಕ್ ಎಂಬವರನ್ನು ಗುಂಪು ಹತ್ಯೆ ನಡೆಸಿದ ನಂತರ ಸಂಘರ್ಷ ಸೃಷ್ಟಿಸುವ ವಿಷಯವಾಯಿತು.

ಈ ಪುಸ್ತಕದ ಪ್ರಕಾರ, ಗಾಂಧಿ, ಗೋಹತ್ಯೆಯನ್ನು ತಡೆಯಲು ಹಿಂಸೆಯನ್ನು ಬಳಸುವುದನ್ನು ವಿರೋಧಿಸುವ ಜೊತೆಗೆ ಮುಸ್ಲಮರನ್ನು ಖಳರನ್ನಾಗಿ ಬಿಂಬಿಸಲು ಗೋರಕ್ಷಣೆಯನ್ನು ಬಳಸುವುದನ್ನೂ ವಿರೋಧಿಸಿದ್ದರು.

ಓರ್ವ ವ್ಯಕ್ತಿ ತನ್ನಿಷ್ಟದ ಆಹಾರ ಸೇವಿಸದಂತೆ ತಡೆಯುವುದು ಹಿಂಸೆಯೇ ಹೊರತು ಅಹಿಂಸೆಯಲ್ಲ. ಅದು ಧರ್ಮವೂ ಅಲ್ಲ. ಬದಲಿಗೆ ಗೋವನ್ನು ರಕ್ಷಿಸಲು ಮುಸ್ಲಿಂ ಸಹೋದರರನ್ನು ಹತ್ಯೆ ಮಾಡಲು ಬಳಸುವ ಸಾಧನ ಎಂದು ಗಾಂಧಿ ತಿಳಿಸಿದ್ದರು.

ಗಾಂಧೀಜಿಗೆ ಹಿಂಸಾತ್ಮಕ ಸಸ್ಯಾಹಾರ ವಿರುದ್ಧವಾಗಿತ್ತು. ತಾನು ಯಾವುದೇ ಹಿಂದು ಅಥವಾ ಮುಸ್ಲಿಮರು ಮಾಂಸವನ್ನು ಬಳಸುವುದನ್ನು ನಾನು ನಿಷೇಧಿಸಿದ್ದೇನೆ ಎಂಬ ಹೇಳಿಕೆಗಳನ್ನೂ ಗಾಂಧಿ ನಿರಾಕರಿಸಿದ್ದರು ಎಂದು ಪುಸ್ತಕದಲ್ಲಿ ತಿಳಿಸಲಾಗಿದೆ. **(ವಾರ್ತಾಭಾರತಿ 4–6–2019)**

## ಕ್ಷಮಾಪಣೆ ಕೋರಿದ ಝಾಕಿರ್ ನಾಯ್ಕ್

ಕೌಲಾಲಂಪುರ, ಆ.20: ವಿವಾದಿತ ಧರ್ಮ ಪ್ರಚಾರಕ ಝಾಕಿರ್ ನಾಯ್ಕ್ ತಮ್ಮ ಧರ್ಮ ಪ್ರಚೋದಕ ಹೇಳಿಕೆಗಾಗಿ ಮಲೇಷ್ಯಾ ಜನರಲ್ಲಿ ಕ್ಷಮೆ ಕೋರಿದ್ದಾರೆ. ಇತ್ತೀಚೆಗೆ ಹಿಂದೂ ವಿರೋಧಿ ಹೇಳಿಕೆ ನೀಡಿದ್ದ ಝಾಕಿರ್‌ರನ್ನು ಮಲೇಷ್ಯಾ ಪೊಲೀಸರು 10 ತಾಸುಗಳವರೆಗೆ ವಿಚಾರಣೆ ನಡೆಸಿದ್ದರು. ಅಷ್ಟೇ ಅಲ್ಲ, ಮಂಗಳವಾರದಿಂದ ಝಾಕಿರ್ ನಾಯ್ಕ್ ಯಾವುದೇ ಸಾರ್ವಜನಿಕ ಭಾಷಣ ಸೇರಿದಂತೆ ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತಿಲ್ಲ ಎಂದು ಸೂಚಿಸಿದ್ದಾರೆ.

ಆಗಸ್ಟ್ 8ರಂದು ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ್ದ ಝಾಕಿರ್ ನಾಯ್ಕ್ ಹಿಂದೂಗಳು ಹಾಗೂ ಚೀನೀಯರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದರು. ಇದು ತೀವ್ರ ವಿವಾದಕ್ಕೀಡಾಗುತ್ತಿದ್ದಂತೆ ಮಲೇಷ್ಯಾದ ಹಲವು ಸಚಿವರು ಆಕ್ಷೇಪ ವ್ಯಕ್ತಪಡಿಸಿದ್ದರು.

ಕಳೆದ ಶುಕ್ರವಾರ ಮೊದಲ ಸುತ್ತಿನ ವಿಚಾರಣೆ ನಡೆಸಿದ ಪೊಲೀಸರು ಸೋಮವಾರವೂ 10 ತಾಸುಗಳವರೆಗೆ ವಿಚಾರಣೆ ನಡೆಸಿದ್ದರು. ಅನಂತರ ನಾಯ್ಕ್ ತಮ್ಮ ಹೇಳಿಕೆಗೆ ಮಲೇಷ್ಯಾದ ನಾಗರಿಕರಿಗೆ ನೋವಾಗಿದ್ದಲ್ಲಿ ಕ್ಷಮೆ ಕೋರುತ್ತೇನೆ ಎಂಬ ಸಂದೇಶವನ್ನು ರವಾನಿಸಿದ್ದಾರೆ ಎಂದು ಮಲೇಷ್ಯಾ ಮಾಧ್ಯಮಗಳು ವರದಿ ಮಾಡಿವೆ. **(ಉದಯವಾಣಿ 21–8–2019)**

## ಚೀನ, ಪಾಕ್‌ಗೆ ವಿಶ್ವಸಂಸ್ಥೆ ತಪರಾಕಿ

ನ್ಯೂಯಾರ್ಕ್, ಆ. 23: ಕಾಶ್ಮೀರ ವಿಚಾರವನ್ನು ವಿಶ್ವಸಂಸ್ಥೆಯಲ್ಲಿ ಪ್ರಸ್ತಾವಿಸಿ ಇತ್ತೀಚೆಗೆ ಮುಖಭಂಗ ಮಾಡಿಕೊಂಡಿದ್ದ ಪಾಕಿಸ್ಥಾನಕ್ಕೆ ಈಗ ವಿಶ್ವಸಂಸ್ಥೆಯೇ ಚಾಟಿ ಬೀಸಿದೆ. ಪಾಕಿಸ್ಥಾನ, ಚೀನದಲ್ಲಿ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆಯುತ್ತಿದ್ದು, ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ ಎಂದು ಗುರುವಾರ ನಡೆದ ವಿಶ್ವಸಂಸ್ಥೆ ಭದ್ರತಾ ಮಂಡಳಿ ಸಭೆಯಲ್ಲಿ ಆರೋಪಿಸಲಾಗಿದೆ. ಅಮೆರಿಕ, ಇಂಗ್ಲಂಡ್ ಸೇರಿದಂತೆ ಹಲವು ದೇಶಗಳು ಈ ಕುರಿತು ಆಕ್ಷೇಪ ಎತ್ತಿದೆ.

ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಪ್ರಸ್ತುತ ಅಧ್ಯಕ್ಷೀಯ ದೇಶವಾಗಿರುವ ಪೋಲೆಂಡ್. ಅಲ್ಪಸಂಖ್ಯಾತರ ಸುರಕ್ಷತೆ ಮತ್ತು ಭದ್ರತೆ ಕುರಿತಾದ ಸಭೆ ನಡೆಸಿತ್ತು. ಇದರಲ್ಲಿ ಮಾತನಾಡಿದ ಅಮೆರಿಕದ ರಾಯಭಾರಿ ಸ್ಯಾಮುಯೆಲ್ ಬ್ರೌನ್‌ಬ್ಯಾಕ್, ಪಾಕಿಸ್ಥಾನದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಹಿಂಸೆಯನ್ನು ಅನುಭವಿಸುತ್ತಲೇ ಇದ್ದಾರೆ. ಕ್ರಿಶ್ಚಿಯನ್ನರು, ಅಹ್ಮದಿಯರು, ಉಯಿಗುರ್, ಹಿಂದೂಗಳು ಸಹಿತ ಇತರ ಅಲ್ಪಸಂಖ್ಯಾಕರನ್ನು ಪಾಕಿಸ್ಥಾನ, ಚೀನದಲ್ಲಿ ಹತ್ತಿಕ್ಕಲಾಗುತ್ತಿದೆ. ಇದಕ್ಕೆ ಸರಕಾರದ ತಾರತಮ್ಯದ ಕಾನೂನುಗಳೂ ಕಾರಣ ಎಂದು ಆರೋಪಿಸಿದ್ದಾರೆ. ಪಾಕಿಸ್ಥಾನದ ಮಾನವ ಹಕ್ಕುಗಳ ಸಂಘಟನೆ ಅಧ್ಯಕ್ಷ ನವೀದ್ ವಾಲ್ಟರ್ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

**(ಉದಯವಾಣಿ 24–8–2019)**

## ಮಹಿಳಾ ಸಮಾನತೆಯ ದಿನ

ಅಮೆರಿಕದಲ್ಲಿ ಆಗಸ್ಟ್ 26, 1920ರಂದು ಸಂವಿಧಾನ ತಿದ್ದುಪಡಿ ಮಾಡುವ ಮೂಲಕ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಲಾಯಿತು. ಇದರ ನೆನಪಿಗಾಗಿ 51 ವರ್ಷಗಳ ಅನಂತರ ಅಂದರೆ 1971 ಆಗಸ್ಟ್ 26 ರಂದು ಮಹಿಳಾ ಸಮಾನತೆಯ ದಿನವನ್ನು ಆಚರಿಸಲು ನಿರ್ಧರಿಸಲಾಯಿತು. **(ಉದಯವಾಣಿ 26–8–2019)**

## ಮಹಿಳಾ ಗುಲಾಮರ ಮೇಲೆ ದೌರ್ಜನ್ಯ

*** ಅಮೆರಿಕದಲ್ಲಿ ಗಲ್ಲು ಶಿಕ್ಷೆಗೆ ಒಳಗಾಗಿರುವ ನಿಸ್ರಿನ್ ಅಸ್ಸಾದ್ ಇಬ್ರಾಹಿಂ. * ಗಾರ್ಡಿಯನ್ ಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ ಹಲವಾರು ವಿಷಯ ಬಹಿರಂಗ. * ಬೆತ್ತದೇಟಿನ ನೋವಿನಿಂದ ನರಳುತ್ತಿದ್ದರೂ ಮುಖಕ್ಕೆ ಮೇಕಪ್ ಹಾಕಿ ನಂತರ ಅತ್ಯಾಚಾರ.**

ವಾಷಿಂಗ್ಟನ್, ಜೂ.1: "ಇಸ್ಲಾಮಿಕ್ ಸ್ಟೇಟ್‌ನಲ್ಲಿ ಗುಲಾಮಗಿರಿಗೆ ತಳ್ಳಲ್ಪಡುತ್ತಿದ್ದ ಆ ಹೆಂಗಸರ ದುಃಖ ಅಕ್ಷರಶಃ ಅರಣ್ಯ ರೋದನವಾಗಿರುತ್ತಿತ್ತು. ಅವರ ಕಣ್ಣೀರನ್ನು ಒರೆಸಲು ಯಾರೂ ಇರಲಿಲ್ಲ. ಸುತ್ತಲಿದ್ದವರೆಲ್ಲರ ದೃಷ್ಟಿ ಅವರ ದೇಹ ಸಿರಿಯ ಮೇಲಿರುತ್ತಿತ್ತೇ ಹೊರತು ಅವರ ತೇವಗೊಂಡ ಕಣ್ಣುಗಳ ಕಡೆಗೆ ಅಪ್ಪಿತಪ್ಪಿಯೂ ಹೊರಳುತ್ತಿರಲಿಲ್ಲ."

ನಾಲ್ಕು ವರ್ಷಗಳ ಹಿಂದೆ ಅಮೆರಿಕ ನೇತೃತ್ವದ ಡೆಲ್ಟಾ ಫೋರ್ಸ್ ಮೂಲಕ ಸೆರೆಹಿಡಿಯಲ್ಪಟ್ಟ ಇಸ್ಲಾಮಿಕ್ ಸ್ಟೇಟ್‌ನ ಹಿರಿಯ ಮಹಿಳಾ ಉಗ್ರವಾದಿ ನಿಸ್ರಿನ್ ಅಸ್ಸಾದ್ ಇಬ್ರಾಹಿಂ ಎಂಬ 'ಲೇಡಿ ಟೆರರಿಸ್ಟ್' ನೀಡಿರುವ ಮನಕಲಕುವ ಮಾಹಿತಿಗಳಿವು. ಅಮೆರಿಕ ನ್ಯಾಯಾಲಯದಲ್ಲಿ ಮರಣ ದಂಡನೆಗೆ ಒಳಗಾಗಿರುವ ಆಕೆ, 'ಗಾರ್ಡಿಯನ್' ಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ ಮನಕಲಕುವ ಮಾಹಿತಿಗಳನ್ನು ನೀಡಿದ್ದಾಳೆ.

"ಗುಲಾಮಗಿರಿಗಾಗಿ ತರಲಾಗುತ್ತಿದ್ದ ಮಹಿಳೆಯರು ಅಥವಾ ಯುವತಿಯರ ಮೇಲೆ ಐಸಿಸ್ ನಾಯಕರೇ ಅತ್ಯಾಚಾರ ಎಸಗುತ್ತಿದ್ದರು. ದೇಹ ಹಂಚಿಕೊಳ್ಳಲು ಒಪ್ಪದವರಿಗೆ ಬೆತ್ತದೇಟುಗಳು ಬೀಳುತ್ತಿದ್ದುವು. ಐಸಿಸ್ ಮುಖ್ಯಸ್ಥ ಅಬುಬಕರ್ ಬಾಗ್ದಾದಿ ಖುದ್ದು ಮುಂದೆ ನಿಂತು ಬೆತ್ತದೇಟುಗಳನ್ನು ನಿರ್ದೇಶಿಸುತ್ತಿದ್ದ. ಚೆನ್ನಾಗಿ ಥಳಿಸಿದ ನಂತರ, ಯುವತಿಯರಿಗೆ ಮೇಕಪ್ ಹಾಕಿ ಶೃಂಗಾರಗೊಳಿಸಿ ಹಾಸಿಗೆಗೆ ದೂಡಲಾಗುತ್ತಿತ್ತು."

'ಒಂದು ದಿನ ಕಳೆಯುವಷ್ಟರಲ್ಲಿ ಅವರ ಇಡೀ ದೇಹದ ಮೇಲೆ ಹಲವಾರು 'ಗುರುತು'ಗಳಿರುತ್ತಿದ್ದವು. ಆದರೆ, ಅವು ಸುಖದ ಹೆಸರಿನ ಹಿಂಸೆಯ ಗುರುತುಗಳಾಗಿರುತ್ತಿದ್ದುವು. ವಿಪರ್ಯಾಸವೆಂದರೆ, ಅವು ಮಾಯುವ ಮುನ್ನವೇ ಅವರು ಮತ್ತಷ್ಟು ಅತ್ಯಾಚಾರಕ್ಕೆ ಸನ್ನದ್ಧವಾಗಬೇಕಿತ್ತು' ಎಂದು ಆಕೆ ಖೇದ ವ್ಯಕ್ತಪಡಿಸಿದ್ದಾಳೆ. ಇನ್ನು ಅಮೆರಿಕದಲ್ಲಿ ತಾನು ಬಂಧಿಯಾದಾಗ ಐಸಿಸ್ ಮುಖ್ಯಸ್ಥ ಅಬು ಅಲ್ – ಬಾಗ್ದಾದಿಯ ಅಡಗುದಾಣಗಳನ್ನು ನಿಖರವಾಗಿ ಗುರುತು ಹಾಕಿಕೊಟ್ಟಿರುವುದಾಗಿ ಹೇಳಿಕೊಂಡಿದ್ದಾಳೆ. **(ಉದಯವಾಣಿ 2–6–2019)**

## ಉದ್ಘಾಟನೆಯಾದ 22 ಗಂಟೆಗಳಲ್ಲಿ ಕುಸಿದ ಕಾಲುವೆ

ರಾಂಚಿ: 2,176 ಕೋಟಿ ರೂ. ವೆಚ್ಚದಲ್ಲಿ 42 ವರ್ಷಗಳ ಕಾಲ ನಿರ್ಮಾಣಗೊಂಡ ಕಾಲುವೆ ಉದ್ಘಾಟನೆಯಾದ 24 ಗಂಟೆಗಳಲ್ಲಿ ಕುಸಿದಿದೆ. ಜಾರ್ಖಂಡ್‌ನ ಬಿಷ್ಣುಗರ್‌ನ ಹಜಾರಿಬಾಗ್‌ನಲ್ಲಿ ಪ್ರವಾಹ ತಡೆಯುವ ನಿಟ್ಟಿನಲ್ಲಿ ಈ ಕಾಲುವೆ ನಿರ್ಮಿಸಲಾಗಿತ್ತು. ಇದು ಆರಂಭವಾದಾಗ ಅಂದಾಜು ವೆಚ್ಚ 12 ಕೋಟಿ ರೂ ಇತ್ತು. ಕಾಮಗಾರಿ ಮುಗಿಯುವ ವೇಳೆ 2,176 ಕೋಟಿಗೆ ತಲುಪಿತು. ಬುಧವಾರವಷ್ಟೇ ಅದ್ದೂರಿ ಸಮಾರಂಭದಲ್ಲಿ ಸಿಎಂ ರಘುಬರ್ ದಾಸ್ ಇದನ್ನು ಉದ್ಘಾಟಿಸಿದ್ದರು. ಇದಾದ 22 ಗಂಟೆಗಳಲ್ಲಿ ಇದು ಕುಸಿದಿದೆ. ಇಲಿಗಳು ಹಲವಾರು ರಂಧ್ರಗಳನ್ನು ಮಾಡಿದ್ದವು. ಇದಕ್ಕೆ ಸಿಮೆಂಟು ಪ್ಲಾಸ್ಟರ್ ಮಾಡದೇ ಇದ್ದ ಕಾರಣ ಈ ದುರಂತ ಸಂಭವಿಸಿದೆ ಎಂದು ಸರಕಾರದ ಇಲಾಖೆಗಳು ಗುತ್ತಿಗೆದಾರರನ್ನು ದೂರಿವೆ.

**(ಉದಯವಾಣಿ 1–9–2019)**

# ತೈಲಗಳ ಮಾತೃಸ್ವರೂಪಿ – ತೆಂಗಿನ ಎಣ್ಣೆ

**ಯಾವುದೇ ಪ್ರತಿಕೂಲ ಪರಿಣಾಮ ಬೀರದ ತೆಂಗಿನ ಎಣ್ಣೆ ಆರೋಗ್ಯಕ್ಕೆ ಸಿದ್ಧೌಷಧ. ತಾಯಿಯ ಹಾಲಿನಷ್ಟೇ ಪರಿಪೂರ್ಣವಾಗಿರುವ ಈ ಎಣ್ಣೆಯ ಸೇವನೆ ರೋಗಗಳನ್ನೆಲ್ಲ ದೂರವಿಡುತ್ತದೆ!**

ತೆಂಗನ್ನು 'ಧರೆಗಿಳಿದ ಕಲ್ಪವೃಕ್ಷ' ಎಂದು ಕರೆಯುತ್ತಾರೆ. ಹಸುರು ಗರಿಗಳು ಮದುವೆಯಂಥ ಮಂಗಳ ಕಾರ್ಯಗಳಿಗೆ ಬಳಕೆಯಾದರೆ, ಒಣಗಿದ ನಾರು, ಚಿಪ್ಪು ಇತ್ಯಾದಿ ಉರುವಲಾಗಿ, ಚಾಪೆ, ನೆಲಹಾಸು ಇವುಗಳ ತಯಾರಿಕೆಯಲ್ಲಿ ಗೃಹಾಲಂಕಾರ ವಸ್ತುವಾಗಿ ಬಳಕೆಯಾಗುತ್ತದೆ. ನಾರುಗಳನ್ನು ಹೆಣೆದು ಹಗ್ಗ ತಯಾರಿಸುತ್ತಾರೆ. ಅದೇ ನಾರುಗಳನ್ನು ಸಣ್ಣದಾಗಿ ಕತ್ತರಿಸಿ ತಯಾರು ಮಾಡುವಂಥ ಕೋಕೋಪೀಟ್ ಸಸ್ಯಗಳಿಗೆ ನೈಸರ್ಗಿಕವಾಗಿ ದೊರೆಯುವ ಜೀವನಾಡಿಯಾಗುತ್ತದೆ. ಕತ್ತರಿಸಿದ ತೆಂಗಿನ ಮರದ ಬೊಡ್ಡೆಗಳೂ ಮನೆಗಳ ಪಡಸಾಲೆಯನ್ನು ಅಲಂಕರಿಸುತ್ತವೆ. ಇನ್ನು ಇದರಲ್ಲಿಯ ಮೂಲ ವಸ್ತುಗಳಾದ ಎಳನೀರು, ಕಾಯಿ, ಕೊಬ್ಬರಿ ಇವುಗಳು ನಮಗೆ ಬೇಕೇ ಬೇಕು.

ಇಷ್ಟೆಲ್ಲ ಉಪಯುಕ್ತವಾಗಿದ್ದರೂ ಆರೋಗ್ಯದ ದೃಷ್ಟಿಯಿಂದ ತೆಂಗಿನ ಬಳಕೆಯ ಬಗೆಗೆ ಸಾಕಷ್ಟು ಅನುಮಾನಗಳು ಆಗಿಂದಾಗ್ಗೆ ಕಾಡುತ್ತಲೇ ಇರುತ್ತವೆ. ತೆಂಗಿನೆಣ್ಣೆಯಲ್ಲಿರುವ ಪರ್ಯಾಪ್ತ (ಸ್ಯಾಚುರೇಟೆಡ್) ಕೊಬ್ಬಿನಂಶದ ಬಗ್ಗೆ ಸರಿಯಾದ ಮಾಹಿತಿಯನ್ನು ತಿಳಿಯದೇ ಈ ರೀತಿಯ ಅನುಮಾನಗಳು ಬೆಳೆದಿವೆ. ತೆಂಗಿನೆಣ್ಣೆಯಲ್ಲಿ ಇರುವುದು ಮಧ್ಯಮ ಸರಪಳಿ ಕೊಬ್ಬಿನಂಶ. ಈ ರೀತಿಯ ಕೊಬ್ಬಿನಂಶ ಹೊಂದಿರುವ ಇನ್ನೊಂದು ವಸ್ತುವೆಂದರೆ, ಲಾರಿಕ್ ತೈಲ. ಇದು ಮನುಷ್ಯನ ದೇಹಕ್ಕೆ ಅತ್ಯವಶ್ಯವಾಗಿದ್ದು ಶೇ.40ಕ್ಕೂ ಹೆಚ್ಚು ತೆಂಗಿನೆಣ್ಣೆಯಲ್ಲಿರುತ್ತದೆ. ತಾಯಿಯ ಎದೆಹಾಲಿನಲ್ಲಿ ಇದೇ ಪೋಷಕ ಗುಣಗಳಿರುತ್ತವೆ. ಹೀಗಾಗಿ ಇದು ತಾಯಿಯ ಹಾಲಿನಷ್ಟೇ ಆರೋಗ್ಯಕರ. ಇದರಲ್ಲಿರುವ ಕೊಬ್ಬಿನಂಶ ಮತ್ತು ಪೋಷಕ ಗುಣಗಳು ತಾಯಿಯ ಹಾಲಿಗೆ ಸಮವೆನಿಸುತ್ತವೆ.

ಶುದ್ಧ ತೆಂಗಿನ ಎಣ್ಣೆಯ ಬಳಕೆಯಿಂದ ಮನುಷ್ಯನ ದೇಹದ ಅನೇಕ ಕಾಯಿಲೆಗಳನ್ನು ದೂರವಿರಿಸಬಹುದು. ಸಾಮಾನ್ಯ ಹೃದಯ ಸಂಬಂಧಿ ಕಾಯಿಲೆಗಳು, ಅಧಿಕ ರಕ್ತದೊತ್ತಡ, ಮಧುಮೇಹ, ಅನಗತ್ಯ ದೇಹ ತೂಕದ ಹೆಚ್ಚಳ ಇವುಗಳಿಗೆ ಕಾರಣವಾದ ಕಡಿಮೆಯಾದ ಶಾರೀರಿಕ ಚಟುವಟಿಕೆಗಳು, ಧೂಮಪಾನ ಮೊದಲಾದವುಗಳಿಂದ ಉಂಟಾಗುವ ಸಮಸ್ಯೆಗಳನ್ನು ತೆಂಗಿನ ಎಣ್ಣೆ ದೂರ ಮಾಡುತ್ತದೆ. ತೆಂಗಿನ ಎಣ್ಣೆಯ ನಿಯಮಿತ, ನಿರಂತರ ಬಳಕೆಯಿಂದ ರಕ್ತದಲ್ಲಿನ ಕೊಬ್ಬಿನಂಶ ಹೆಚ್ಚಾಗುವುದಿಲ್ಲ. ಹೃದಯಾಘಾತಕ್ಕೆ ಕಾರಣವಾಗುವ ರಕ್ತ ಹೆಪ್ಪುಗಟ್ಟುವಿಕೆ ತಡೆಯಬಹುದು. ಇದರ ನಿತ್ಯ ಬಳಕೆ ದೇಹದ ತೂಕದ ಹೆಚ್ಚಳವನ್ನು ಮಿತಿಗೊಳಿಸುತ್ತದೆ. ಇದು ಅನೇಕ ರೀತಿಯ ಸೂಕ್ಷ್ಮಾಣುಗಳಿಂದ ಬರಬಹುದಾದ ರೋಗಗಳಿಗೆ ತಡೆಯೊಡ್ಡುತ್ತದೆ. ದೇಹದಲ್ಲಿನ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಇದರ ಸೇವನೆ ಸಹಕಾರಿ. ದೇಹದಲ್ಲಿರುವ ಜೀರ್ಣಾಂಗಗಳು ಚೆನ್ನಾಗಿ ಕೆಲಸ ಮಾಡಲು, ಮಧುಮೇಹ, ಕೀಲುನೋವು, ಥೈರಾಯ್ಡ್ ಗ್ರಂಥಿಗಳ ತೊಂದರೆ ತಡೆಯಲು ಕೂಡ ಇದು ಉಪಯುಕ್ತ.

ತೆಂಗಿನೆಣ್ಣೆಯಲ್ಲಿರುವ ಲಾರಿಕ್ ಆಮ್ಲ ಮನುಷ್ಯ ಮತ್ತು ಪ್ರಾಣಿಗಳ ದೇಹಕ್ಕೆ ಆವಶ್ಯವಾಗಿದೆ. ಇದು ದೇಹದೊಳಕ್ಕೆ ಪ್ರವೇಶಿಸಿದಾಗ ಮನೋಲಾರಿನ್ ಆಗಿ ಪರಿವರ್ತನೆಗೊಂಡು ದೇಹಕ್ಕೆ ಬೇಕಾದ ರೋಗ ನಿರೋಧಕ ಶಕ್ತಿಗಳು ಬೆಳೆಯಲು ನೆರವಾಗುತ್ತದೆ. ದೇಹದ ಹೊರಭಾಗಕ್ಕೆ ತೆಂಗಿನ ಎಣ್ಣೆ ಹಚ್ಚುವುದರಿಂದ ಚರ್ಮವು ಮೃದುವಾಗಿ, ಸದಾ ಕಾಂತಿಯುತವಾಗಿರುತ್ತದೆ. ಚರ್ಮದ ಅಸ್ವಾಭಾವಿಕ ಸುಕ್ಕನ್ನು ತಡೆಗಟ್ಟುತ್ತದೆ. ತಲೆಗೂದಲಿಗೆ ತೆಂಗಿನೆಣ್ಣೆಯ ನಿರಂತರ ಬಳಕೆ ಕೂದಲಿನ ಹೊಳಪು ಮತ್ತು ಬಣ್ಣವನ್ನು ಉತ್ತಮಪಡಿಸಿ ಕೂದಲ ಬುಡ ಭದ್ರವಾಗಿರಲು ಉತ್ತಮ ಔಷಧಿಯಾಗಿದೆ. ಈ ತೈಲದಲ್ಲಿನ ಅನೇಕ ಆರೋಗ್ಯಕರ ಮತ್ತು ಔಷಧೀಯ ಗುಣಗಳಿಂದಾಗಿ ಇದನ್ನು ಎಲ್ಲ ತೈಲಗಳ ತಾಯಿಯೆಂದು ಬಣ್ಣಿಸುತ್ತಾರೆ. ಆಯುರ್ವೇದದಲ್ಲಿ ತೆಂಗಿನೆಣ್ಣೆಯನ್ನು 'ಹೃದಯದ ಅತ್ಯಂತ ಮೆಚ್ಚಿನ ಜೀವರಸ' ಎಂದು ಕರೆಯುತ್ತಾರೆ.

'ಇಂಗು ತೆಂಗು ಇದ್ದರೆ ಮಂಗ ಕೂಡ ಅಡುಗೆ ಮಾಡಬಲ್ಲುದು' ಎಂಬುದು ಆಡುಭಾಷೆಯ ಗಾದೆಮಾತು. ನಮ್ಮ ನಿತ್ಯದ ಆಹಾರದಲ್ಲಿ ಇದರ ಬಳಕೆ ನಾಲಿಗೆಗೆ ರುಚಿಕರ ಮಾತ್ರವಲ್ಲ ದೇಹಕ್ಕೆ ಅವಶ್ಯವಾದ ಕ್ಯಾಲ್ಸಿಯಮ್, ಫಾಸ್ಫರಸ್ ಮುಂತಾದ ಜೀವವರ್ಧಕ ಧಾತುಗಳು ದೇಹದಲ್ಲಿರಲು ಅನುವುಮಾಡಿಕೊಡುತ್ತದೆ. ಕಡಿಮೆ ಕೊಂಬ್ಬಿನಂಶವಿರುವ ಈ ಎಣ್ಣೆಯನ್ನು ಬಿಸ್ಕೆಟ್, ಕೇಕ್ ತಯಾರಿಕೆಯಲ್ಲೂ ಬಳಸಬಹುದು. ತೆಂಗಿನ ಬಳಕೆಯಲ್ಲಿ ನಾರಿನಂಶ ಹೆಚ್ಚು ಮಾಡಿಕೊಳ್ಳಲು ತೆಂಗಿನಿಂದ ತಯಾರಿಸಿದ ಹಿಟ್ಟನ್ನು ಬಳಸಬಹುದು. ಇದು ಬೇರೆ ಬೇರೆ ನಾರಿನಂಶವಿರುವ ಕಾಳುಗಳ ಹಿಟ್ಟುಗಳಲ್ಲಿರುವ ನಾರಿನಂಶಕ್ಕಿಂತ ಶೇ. 60ರಷ್ಟು ಹೆಚ್ಚಿರುತ್ತದೆ.

ಹಸಿ ತೆಂಗಿನಿಂದ ತೆಗೆದ ಯಾವುದೇ ಮಿಶ್ರಣವಿಲ್ಲದ ತೈಲ, ತೆಂಗಿನ ಮಧುರ ಪರಿಮಳವನ್ನು ಹೊಂದಿರುತ್ತದೆ. ಇದನ್ನು ಕಾಯಿಸಿದಾಗಲೂ ಇದರಲ್ಲಿರುವ ಸತ್ತ್ವ ಗುಣಗಳು ಬದಲಾಗುವುದಿಲ್ಲ ಮತ್ತು ಬಹುದಿನಗಳ ಕಾಲ ತಾಜಾ ಆಗಿರುತ್ತದೆ. ತೆಂಗಿನೆಣ್ಣೆಯನ್ನು 'ಔಷಧಿಗಳ ರಾಜ' ಎಂದೇ ಕರೆಯಬಹುದು. 'ಪ್ರತಿನಿತ್ಯ ಸೇಬು ತಿಂದು ವೈದ್ಯರನ್ನು ದೂರವಿಡಬಹುದು' ಎಂಬ ಗಾದೆಮಾತನ್ನು ಹೀಗೆ ಹೇಳಬಹುದು. 'ನಿತ್ಯ ತೆಂಗು ಬಳಕೆಯಿಂದ ರೋಗವನ್ನೇ ದೂರವಿಡಬಹುದು'. **(ತರಂಗ 15 ಆಗಸ್ಟ್ 2019)**

*** ಉಷಾ ಎಸ್.**

**ಸಂಪಾದಕರಿಗೆ ಪತ್ರ** **ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ......... (ಸೆಪ್ಟಂಬರ್ 1981ರ ಸಂಚಿಕೆಯಿಂದ)**

ನಿಮ್ಮ 1981ನೇ ಮಾರ್ಚ್ ತಿಂಗಳ ಸಂಚಿಕೆ ಓದುಗರಿಗೆ ಮನಶ್ಶಾಂತಿ ನೀಡುವುದಾಗಿತ್ತು. ಯೇಸುಕ್ರಿಸ್ತರ ಜೀವನದ ಕುರಿತು ಹೊಸ ಬೆಳಕು, ಪ್ರೀತಿ, ವಿಜ್ಞಾನಗಳ ದಿಗ್ವಿಜಯ: ಅಬ್ದುಸ್ಸಲಾಂ, ಓರ್ವ ವಿಜ್ಞಾನಿಯ ಭಾರತ ಸಂದರ್ಶನ ಈ ಲೇಖನಗಳು ಚೆನ್ನಾಗಿದ್ದುವು. ಅಹ್ಮದಿಯಾ ಜಮಾಅತ್ ಹಾಗೂ ಜಮಾತೆ ಇಸ್ಲಾಮಿ ಎಂಬ ಲೇಖನ ಬೆಲೆಯುಳ್ಳದ್ದು.

ಕನ್ನಡ ಜನತೆಗೆ ಸತ್ಯದಾರಿಯನ್ನು ತೋರಿಸುವ ಈ ತ್ರೈಮಾಸ ಪತ್ರಿಕೆಯು ಮಾಸಪತ್ರಿಕೆ ಆಗಲೆಂದು ನಾನು ದೇವನಲ್ಲಿ ಪ್ರಾರ್ಥಿಸುತ್ತೇನೆ.

**ಗಂದಿಗವಾಡ** **– ಮಂಜೂರ್ ಅಹ್ಮದ್**

=============================================

ನನ್ನ ಅನುಭವದಂತೆ ಈಗೀಗ ಯುಗರಶ್ಮಿಯಲ್ಲಿ ಪ್ರಕಟವಾಗುತ್ತಿರುವ ಲೇಖನಗಳು ಆಧ್ಯಾತ್ಮಿಕ ಹಸಿವೆಯಿಂದ ನರಳುತ್ತಿರುವ ಮೃಗತುಲ್ಯರಾದ ಮಾನವರಿಗೆ ಶುಚಿರುಚಿಯಾದ ಆಧ್ಯಾತ್ಮ ಭೋಜನವನ್ನು ನೀಡಿ ತೃಪ್ತಿಪಡಿಸುವಂತಹದ್ದಾಗಿದೆ. ದೈವಾಸ್ತಿತ್ವ, ಪ್ರವಾದಿಗಳ ಬೋಧನೆ, ಮಹಾತ್ಮರ ಕಷ್ಟಾನುಭವ, ಮತಸೌಹಾರ್ದತೆ, ಜಮಾತೆ ಇಸ್ಲಾಮಿ ಸಿದ್ಧಾಂತದ ನಿರರ್ಥಕತೆ, ಏಕದೇವಾರಾಧನೆ ಎಂಬೀ ವಿಷಯಗಳ ಕುರಿತು ಯುಗರಶ್ಮಿಯಲ್ಲಿ ಪ್ರಕಟವಾಗುವ ಲೇಖನಗಳು ನಿಜವಾಗಿಯೂ ಶ್ಲಾಘನೀಯವೂ ಈ ಕಾಲದಲ್ಲಿ ಚಿಂತನೀಯವೂ ಆಗಿವೆ. ಇಸ್ಲಾಮಿನ ಸುಂದರ ರೂಪವನ್ನು ಯುಗರಶ್ಮಿಯ ಮೂಲಕ ಜನಕೋಟಿಗೆ ತಲುಪಿಸುವ ನಿಮ್ಮ ಕಾರ್ಯದಲ್ಲಿ ಶೈತಾನನ ಯಾವುದೇ ಸಾಹಸವು ಪರಾಜಿತಗೊಳ್ಳಲೆಂದು ಪ್ರಾರ್ಥಿಸುತ್ತಾ ಯುಗರಶ್ಮಿಗೆ ಶುಭವನ್ನು ಕೋರುತ್ತೇನೆ. ಧಾರ್ಮಿಕಾಂಧಕಾರದಲ್ಲಿ ತೊಳಲುತ್ತಿರುವ ಈ ಯುಗದ ಮನುಷ್ಯ ಮನಸ್ಸನ್ನು ಯುಗರಶ್ಮಿಯು ತನ್ನ ಆಧ್ಯಾತ್ಮಿಕ ರಶ್ಮಿಯಿಂದ ಪ್ರಕಾಶಿತಗೊಳಿಸಲೆಂದೂ ಜಗತ್ತಿನಲ್ಲಿ ಸುಖಶಾಂತಿಯು ನಲಿದಾಡಲೆಂದೂ ಪ್ರಾರ್ಥಿಸುತ್ತೇನೆ,

**ವಣಗೂರು** **– ಕೆ. ಯಂ. ಜಲೀಲ್ ಅಹ್ಮದ್**

=============================================

ತಮ್ಮ ಆಗಸ್ಟ್ 81ರ ಯುಗರಶ್ಮಿಯಲ್ಲಿ ಮೂಡಿಬಂದ "ನುಡಿಮುತ್ತು"ಗಳು ತುಂಬಾ ಅರ್ಥಗರ್ಭಿತವಾಗಿದ್ದು ನಿಜವಾಗಿಯೂ ಮನುಷ್ಯ ಬಾಳಿಗೆ ಇದೊಂದು ಜ್ಞಾನದೀವಿಗೆ ಹಾಗೂ ಜ್ಞಾನಾಮೃತವಾಗಿ ಪರಿಣಮಿಸಿದೆ. ಈ ನುಡಿಮುತ್ತುಗಳನ್ನು ಓದುವುದೆಂದರೆ ಜೇನುತೊಟ್ಟು ಬಾಯಲ್ಲಿ ಬಿಟ್ಟಂತೇ ಸರಿ. ಈ ನುಡಿಮುತ್ತುಗಳು ಒಂದು ಪುಟಕ್ಕೆ ವಿಸ್ತಾರವಾಗಲಿ.

ಏಳನೇ ವರ್ಷದಲ್ಲಿ ಮುನ್ನುಗ್ಗುತ್ತಿರುವ "ಯುಗರಶ್ಮಿ"ಗೆ ಅಭಿನಂದನೆಗಳು. ಹರಿವ ನೀರಂತೆ ಈ ಪತ್ರಿಕೆಯ ಕೀರ್ತಿ ದಿನೇ ದಿನೇ ಇನ್ನು ಮುಂದೆಯೂ ಜನಪ್ರಿಯವಾಗಲೆಂದು ಶುಭ ಹಾರೈಕೆ.

**ವಿಜಾಪುರ** **– ಇ. ರಾ.**

=============================================

## (ಸೆಪ್ಟಂಬರ್ 1981ರ ಸಂಚಿಕೆಯಿಂದ)

ಧಾರ್ಮಿಕ ಮತ್ತು ತತ್ವಶಾಸ್ತ್ರ ರಂಗದಲ್ಲಿ ಅಹ್ಮದಿಯಾ ಸಂಘಟನೆಯ ಶ್ಲಾಘನೀಯ ಉದ್ದೇಶವನ್ನು ಪ್ರಸಾರ ಮಾಡುವ ಕಾರ್ಯವನ್ನು ನಿಮ್ಮ ಪತ್ರಿಕೆ ಶ್ರೇಷ್ಠ ಆದರ್ಶಪ್ರಾಯ ರೀತಿಯಲ್ಲಿ ಈಡೇರಿಸುತ್ತದೆ.

**ಕಾಸರಗೋಡು** **- ಡಾ॥ ಎಸ್.ಎಸ್. ನಗರ್ಕಾರ್**

=============================================

ಜಾಗತಿಕವಾಗಿ ಜನರೆಲ್ಲರು ಸಜ್ಜನಿಕೆಯಿಂದಲೂ ಮಾನುಷಿಕವಾದ ವಿಚಾರದಿಂದಲೂ ಹಲವು ವಿಷಯಗಳನ್ನು ತಿಳಿದಿರುವುದು ಸೂಕ್ತವಾದೀತು. ಪ್ರಪ್ರಾಚೀನ ಕ್ರಮಗಳೇನು, ಈಗ ಸುಧಾರಿತ ರೀತಿಯೇನು, ಅದೇಕೆ ಬೇಕೆಂದು ಸಾಮಾಜಿಕರೆಲ್ಲರಿಗೆ ತಮ್ಮಲ್ಲಿಯ ವಿಶಿಷ್ಟ–ಸಾತ್ವಿಕ ಧ್ಯೇಯವೇನೆಂದು ಪ್ರಸಾರಿಸಲು ಪತ್ರಿಕೆಗಳು ಅತ್ಯವಶ್ಯವಾಗಿವೆ.

**ಸುರತ್ಕಲ್ಲು** **– ಕೆ. ವೆಂಕಟರಾಮಾಚಾರ್ಯ, ವಿದ್ವಾನ್**

=============================================

ಮುಹಮ್ಮದ್ ಪೈಗಂಬರರ ಪವಿತ್ರ ತತ್ವಗಳನ್ನು ಹೊತ್ತು ತಂದ "ಯುಗರಶ್ಮಿ" ಧಾರ್ಮಿಕ ಪತ್ರಿಕೆಯನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಅದರಲ್ಲಿ ಬರುವಂತಹ ಲೇಖನಗಳು ಜ್ಞಾನಪೂರ್ಣವಾಗಿವೆ. ಈ ನಿಮ್ಮ ಕಾರ್ಯವನ್ನು ಮನಸಾರೆ ಮೆಚ್ಚಿದ್ದೇನೆ.

**ಮಡಿಕೇರಿ** **– ಎಂ. ಇ. ನಜೀರ್**

# READ AHMADIYYA PERIODICALS

## THE REVIEW OF RELIGIONS

English Monthly

Annual Subscription : ‘. 500/-

Contact: The Editor

The Review of Religions

Mohalla Ahmadiyya,

QADIAN – 143516 (Punjab)

Telephone : +91 1872 500970

==========================================

**BADAR** – Urdu Weekly

Annual Subscription : ‘. 550/-

Contact: The Manager, The Badar Weekly

Mohalla Ahmadiyya,

QADIAN – 143516 (Punjab)

Telephone : (0091) 94170-20616


ಆರೋಗ್ಯ

## ಬಿಸಿ ಚಹಾ ಸೇವನೆಯಿಂದ ಅನ್ನನಾಳ ಕ್ಯಾನ್ಸರ್

ಚಹಾ ಬಿಸಿ ಬಿಸಿಯಾಗಿದ್ದರೆ ಮಾತ್ರ ಸ್ವಾದ ಎನ್ನುತ್ತಾರೆ ಚಹಾ ಪ್ರಿಯರು. ಆದರೆ ಬಿಸಿಯಾದ ಚಹಾ ಸೇವನೆ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂಬುದು ಸಂಶೋಧನೆಯೊಂದರಿಂದ ದೃಢಪಟ್ಟಿದೆ. ಇಂಟರ್‌ನ್ಯಾಶನಲ್ ಜರ್ನಲ್ ಆಫ್ ಕ್ಯಾನ್ಸರ್ ನಡೆಸಿದ ನೂತನ ಸಂಶೋಧನೆ ಪ್ರಕಾರ ಹೆಚ್ಚು ಬಿಸಿ ಚಹಾ ಕುಡಿಯುವುದರಿಂದ ಅನ್ನನಾಳದ ಕ್ಯಾನ್ಸರ್‌ಗೆ ಆಹ್ವಾನ ಮಾಡಿದಂತೆ ಎಂದು ತಿಳಿಸಿದೆ. ಅಮೆರಿಕ ಕ್ಯಾನ್ಸರ್ ಸೊಸೈಟಿ ನೀಡಿದ ವರದಿ ಪ್ರಕಾರ 17,650 ಅನ್ನನಾಳದ ಕ್ಯಾನ್ಸರ್ ಪತ್ತೆಯಾಗಿದ್ದು, ಇದರಲ್ಲಿ 16,000 ಜನರು ಮರಣ ಹೊಂದಿದ್ದಾರೆ. ಅಲ್ಲದೇ ಆಹಾರದಲ್ಲಿ ಸದಾ ಮಾಂಸ, ಕಡಿಮೆ ಹಣ್ಣು, ತರಕಾರಿ ತಿನ್ನುವುದು ಕೂಡ ಅನ್ನನಾಳದ ಕ್ಯಾನ್ಸರ್‌ಗೆ ಕಾರಣವಾಗುತ್ತದೆ ಎನ್ನಲಾಗಿದೆ.

**(ಉದಯವಾಣಿ 26–3–2019)**

**(10ನೇ ಪುಟದಿಂದ)**

ಈಡೇರಿಸಿಕೊಡುವ ಬಗ್ಗೆ, ಮಾನವರ ಸೇವೆ ಮಾಡುವ ಬಗ್ಗೆ ನಮ್ಮ ಗಮನವನ್ನು ಕೇಂದ್ರೀಕರಿಸಬೇಕಾದುದು ಆವಶ್ಯಕವಾಗಿದೆ.

ನಮ್ಮ ಮುಂದಿನ ಪೀಳಿಗೆಗೆ ಶಾಂತಿಭರಿತ ಪ್ರವರ್ಧಮಾನವಾದ ಲೋಕವನ್ನು ಬಿಟ್ಟು ಹೋಗಬೇಕಾದುದು ನಮ್ಮ ಹೊಣೆಗಾರಿಕೆ ಮಾತ್ರವಲ್ಲ ನಮ್ಮ ಬಾಧ್ಯತೆಯೂ ಆಗಿದೆ. ಈ ಮಹತ್ತಾದ ಉದ್ದೇಶಲಕ್ಷ್ಯವನ್ನು ಈಡೇರಿಸಲು ನಾವು ಶಾಂತಿ ಸ್ಥಾಪನೆಗೋಸ್ಕರ ನಮ್ಮ ಎಲ್ಲ ಶಕ್ತಿಗಳನ್ನು ವಿನಿಯೋಗಿಸಲು ಸಿದ್ಧರಾಗಬೇಕು.

ಇಸ್ಲಾಮಿನ ಒಂದು ಮೂಲಭೂತ ತತ್ವ ಎಲ್ಲ ಧರ್ಮಗಳನ್ನೂ ಅವುಗಳ ಸ್ಥಾಪಕರನ್ನೂ ಬಹಳ ಗೌರವ ಭಾವದಿಂದ ಕಾಣುವುದಾಗಿದೆ. ನಾನು ಆರಂಭದಲ್ಲಿ ಹೇಳಿದ ಹಾಗೆ ನಾವು ಎಲ್ಲ ಪ್ರವಾದಿಗಳನ್ನು ನಂಬುತ್ತೇವೆ. ಆದುದರಿಂದ ಒಬ್ಬ ನೈಜ ಮುಸ್ಲಿಮನಿಗೆ ಅವರ ವಿರುದ್ಧ ಅಥವಾ ಅವರ ಉಪದೇಶಗಳ ವಿರುದ್ಧ ಮಾತನಾಡಲು ಸಾಧ್ಯವಿಲ್ಲ.

ಆದುದರಿಂದ ಅತ್ಯಂತ ಮಹತ್ವಪೂರ್ಣವಾದ ವಿಷಯವೇನೆಂದರೆ, ಜನಾಂಗವನ್ನಾಗಲಿ, ಸಾಮಾಜಿಕ ಸ್ಥಾನವನ್ನಾಗಲಿ ಪರಿಗಣಿಸದೆ ನಾವು ಒಬ್ಬರಿನ್ನೊಬ್ಬರ ನಂಬಿಕೆಗಳನ್ನೂ ಧರ್ಮಗಳನ್ನೂ ಗೌರವಿಸುತ್ತೇವೆ.

ಕೊನೆಯದಾಗಿ, ನಾನು ಸರ್ವಶಕ್ತನಾದ ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತೇನೆ: ಲೋಕದಲ್ಲಿ ತಲೆದೋರಿರುವ ಸಂಘರ್ಷಗಳನ್ನು ನಿವಾರಿಸಲು ಮತ್ತು ಎಲ್ಲ ವಿಧ ಅನ್ಯಾಯಗಳನ್ನು ಮತ್ತು ಅಸಹಿಷ್ಣುತೆಯನ್ನು ಕೊನೆಗೊಳಿಸಲು ನಮಗೆ ಸಾಧ್ಯವಾಗುವಂತಾಗಲಿ. ದ್ವೇಷ ಮತ್ತು ಯುದ್ಧಭರಿತ ಲೋಕಕ್ಕೆ ಬದಲಾಗಿ ನಾವು ಪ್ರೀತಿ ಮತ್ತು ಕಾರುಣ್ಯ ಭರಿತ ಲೋಕವನ್ನು ಬಿಟ್ಟು ಹೋಗುವವರಾಗಲಿ.


ಸ್ವಾರ್ಥ ಹಿತಾಸಕ್ತಿಗಳನ್ನು ಹಿಂಬಾಲಿಸುವುದಕ್ಕೆ ಬದಲಾಗಿ ಎಲ್ಲ ಜನರು ಸಾಮಾಜಿಕ ಒಳಿತಿಗೋಸ್ಕರ ಸೇವೆ ಸಲ್ಲಿಸುವುದರ ಮೌಲ್ಯವನ್ನು ಗುರುತಿಸುವವರಾಗಲಿ. ಈ ಮಸ್‌ಜಿದ್ ಈ ಸಮಾಜದಲ್ಲಿ ಬೆಳಗುತ್ತಿರುವ ಬೆಳಕಾಗಲಿ ಮತ್ತು ಐಕ್ಯತೆ ಮತ್ತು ಶುಭ ಪ್ರತೀಕ್ಷೆಯ ಮಾರ್ಗವಾಗಲಿ ಎಂದು ಪ್ರಾರ್ಥಿಸುತ್ತೇನೆ – ಆಮೀನ್.


ನಮ್ಮೊಂದಿಗೆ ಇಂದು ಭಾಗವಹಿಸಿದುದಕ್ಕೋಸ್ಕರ ಇನ್ನೊಮ್ಮೆ ಕೃತಜ್ಞತೆಗಳನ್ನು ನಿಮಗೆಲ್ಲರಿಗೂ ಅರ್ಪಿಸುತ್ತೇನೆ.


ಅಲ್ಲಾಹನು ನಿಮಗೆಲ್ಲರಿಗೂ ಅನುಗ್ರಹ ದಯಪಾಲಿಸಲಿ.


ಧನ್ಯವಾದಗಳು.


**(The Review of Religions April 2019**
**ಸಂಚಿಕೆಯಿಂದ. ಭಾಷಾಂತರ: ಎಮ್. ಉಬೈದುಲ್ಲಾ)**




**NEW PUBLICATIONS**
**Contact:**
**NAZARAT NASHRO - ISHA'AT**
**Sadr Anjuman Ahmadiyya**
**Qadian – 143516 (Punjab)**
**Phone: 01872 - 500970**


THE HOLY QUR'AN
تفسیرِ صغیر
Introduction To
The Study Of
The Holy Qur'ān
اسوۂ انسانِ کامل
منتخب احادیث
انوارِ خلافت
نظام نو
JESUS IN INDIA
NEW PUBLICATIONS
ಇಸ್ಲಾಮ್
ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯ
ವ್ಯಂಗ್ಯ ಚಿತ್ರಗಳ ವಾಸ್ತವಿಕತೆ
Contact:
NAZARAT NASHRO-ISHA'AT
Sadr Anjuman Ahmadiyya
Qadian-143516 (Punjab)
Phone: 01872- 500970



ಯು.ಕೆ. ಜಲ್ಸಾ ಸಾಲಾನ (ಅಹ್ಮದಿಯಾ ವಾರ್ಷಿಕ ಸಮ್ಮೇಳನ) – ಆಗಸ್ಟ್ 1–3




ಮಂಗಳೂರು: ಮಜ್ಲಿಸ್ ಅನ್ಸಾರುಲ್ಲಾಹ್ ಇಜ್ತಿಮಾ 25–8–2019




ಮಂಗಳೂರು: ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಅತ್ಫಾಲುಲ್ ಅಹ್ಮದಿಯಾ ಇಜ್ತಿಮಾ 1–9–2019

Registered with the Registrar of Newspapers for India No. R.N. 27354/75
**Yugarashmi** Kannada Quarterly, **September - 2019.** Price : **Rs. 15/-**

# Ahmadiyya Muslim Community

## Apps for mobile devises

Download free apps developed by Ahmadiyya Muslim Community for your iphone, ipode, and Android



**Quran**
Read the Holy Quran in easy Yassarnal Quran Font




**Conditions of Bai'at**
A pocket reference of Shara't-e-Bai'at in 7 languages



**Sermons**
Huzoor's Friday Sermons In 15 languages




**MTA**
Watch MTA Live, view Schedule and much more



**Ahmadiyya News**
Stay up to date with the Latest jama'at news

View these apps at
alislam.org/apps
or scan the QR code below



Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore